ಕಲ್ಪಲತೆ

ಂಡವಮೂರ್ತಿ ಪ್ರಕಾಶನ
ಮೈಸೂರು

ಬೆಲೆ ೧೨ ಆಣೆ

ಕಲ್ಪಲತೆ

ಲೇಖಕರು

ಚ. ಸುಂದರೇಶನ್, ಸೋಸಲೆ.

ಪ್ರಕಾಶಕರು

ಸಿ. ನಟರಾಜ್, ಬಿ.ಎಸ್‌ಸಿ.,

ಎಂ. ಎಸ್. ಕೆ. ಮೂರ್ತಿ, ಬಿ.ಎಸ್‌ಸಿ.,

ತಾಂಡವಮೂರ್ತಿ ಪ್ರಕಾಶನ

ಮೈಸೂರು

ಬೆಲೆ ೧೨ ಆಣೆ

ಪರಿವಿಡಿ

ಸಾಧನ

ದರ್ಶನ

" ಕಲ್ಪಲತೆ " ಎಂಬೀ ಪುಟ್ಟ ಗ್ರಂಥ ಶ್ರೀ ಚ. ಸುಂದರೇಶನ್ ರವರು ಹಲವು ಮಾಸಪತ್ರಿಕೆಗಳಲ್ಲಿ ಪ್ರಕಟಿಸಿದ ಲೇಖನಗಳ ಸಂಗ್ರಹ. ಸಾಮಾನ್ಯರ ಕಣ್ಣಿಗೆ ಕಾಣದುದನ್ನು ಕಂಡು ಬೇರೆಯವರೂ ಕಾಣುವಂತೆ ಮಾಡುವ ದಿವ್ಯಜ್ಞಾನಿಗಳ ದೃಷ್ಟಿಶಕ್ತಿಗೆ ದರ್ಶನವೆಂದು ಹೆಸರು. ಆ ದಾರ್ಶನಿಕರು ಅನುಸರಿಸಿದ ಮಾರ್ಗವೇ ಇತರರ ಆದರ್ಶ ಜೀವನಕ್ಕೆ ಸಾಧನಸಾಮಗ್ರಿ. ಈ ಸಾಧನ-ದರ್ಶನ ಭಾಗಗಳಲ್ಲಿ ಪುಸ್ತಕದಲ್ಲಿ ಬರುವ ಲೇಖನಗಳನ್ನು ಅಳವಡಿಸಿದೆ. **ಈ ಕಲ್ಪಲತೆಯು ಓದುಗರ ಮನೋವೃಕ್ಷವನ್ನು ಹಬ್ಬಿ, ಮೌನವೆಂಬ ಮೊಗ್ಗು ಬಿಟ್ಟು, ಧ್ಯಾನವೆಂಬ ಕುಸುಮವಾಗಿ ಅರಳಿ, ಭಕ್ತಿ ಎಂಬ ಕಾಯಾಗಿ ಮುಕ್ತಿ ಎಂಬ ಫಲವನ್ನು ನೀಡಲಿ ಎಂಬುದೇ ಪ್ರಕಾಶಕರ ಹಿರಿಯ ಆಶಯ.**

ಪ್ರಕಾಶನಾಲಯದ ಲಾಂಛನವಾಗಿ ಸುಂದರವಾದ ತಾಂಡವ ಮೂರ್ತಿ ಚಿತ್ರವನ್ನು ಪ್ರೀತಿಯಿಂದ ಬರೆದುಕೊಟ್ಟ ಕನ್ನಡನಾಡಿನ ಸುಪ್ರಸಿದ್ಧ ಕಲಾವಿದರಾದ ಶ್ರೀಯುತ ಎಂ. ಇ. ಗುರು ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಈ ಪುಸ್ತಕದಲ್ಲಿ ಭಕ್ತಿಭಾಂಡಾರಿ ಬಸವಣ್ಣನವರ ಚಿತ್ರವನ್ನು ಮುದ್ರಿಸಲು ಅಚ್ಚನ್ನು ದಯೆಪಾಲಿಸಿದ ವೀರಶೈವ ಸಾಹಿತ್ಯ ಭಂಡಾರದ ಒಡೆಯರಾದ ಶ್ರೀ ಮಾ. ನಂ. ಶಿವಪ್ಪ ಸಹೋದರರಿಗೂ, ಪುಸ್ತಕವನ್ನು ಅಂದವಾಗಿ ಅಚ್ಚುಹಾಕಿಸಿ ಕೊಟ್ಟ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನ ಮಾಲೀಕರಾದ ನಾಗನೂರು ಬೃಹನ್ಮಠಾಧ್ಯಕ್ಷ ವೇ|| ಶ್ರೀ ಮಹಾದೇವಯ್ಯನವರಿಗೂ ನಮ್ಮ ವಂದನೆಗಳು.

ಪ್ರಕಾಶಕರು

ಶ್ರೀ ಜಗದ್ಗುರು ನಿಡುಮಾಮಿಡಿ ಶ್ರೀಶೈಲ ಶ್ರೀ ಗಿರಿರಾಜ
ಮಣಿಖಚಿತ ಕನಕ ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ. ಪ.
ಚನ್ನಬಸವರಾಜದೇಶಿಕೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ

ಮುನ್ನುಡಿ

ವಿದ್ಯಾರ್ಥಿ ಚ. ಸುಂದರೇಶನ್ ಅವರು ಬರೆದಿರುವ 'ಕಲ್ಪಲತೆ' ಎಂಬ ಈ ಕೃತಿಯ ಬರಹಗಳನ್ನು ಓದಿಸಿ ಕೇಳಲಾಯಿತು; ಮತ್ತೆ ಅವಲೋಕಿಸಿದುದೂ ಆಯಿತು. ಮೂರ್ತಿ ಚಿಕ್ಕದಾದರೂ ಮಾತು ಚಿಕ್ಕವಲ್ಲ. ಚಿನ್ನದಂತೆ ಚೆಲುವಾಗಿವೆ; ರನ್ನದಂತೆ ಬೆಲೆಬಾಳುವವು ಆಗಿವೆ; ಸಕ್ಕರೆಯಂತೆ ಸವಿಯಾಗಿವೆ.

ಹೆಚ್ಚಾಗಿ ಸುಂದರೇಶನ್‌ರವರ ಸಾಹಿತ್ಯಕ ದೃಷ್ಟಿಯನ್ನು, ಕೃಷಿಯನ್ನು ನಾವು ಮನಸಾರೆ ಮೆಚ್ಚಿದ್ದೇವೆ. ಇಂದಿನ ತರುಣ ಸಾಹಿತಿಗಳಿಗೆ ಆದರ್ಶರಾಗಿದ್ದಾರೆ. ಈ ಹೆದ್ದಾರಿಯನ್ನು ಉಳಿದ ವಿದ್ಯಾರ್ಥಿಗಳು ಅನುಸರಿಸುವುದಾದರೆ ಲೇಸು. ಸಾಹಿತ್ಯ ಪ್ರಪಂಚದಲ್ಲಿರುವ ಬರಹಗಾರರ ಕೊರತೆ ತುಂಬಿಬರುತ್ತದೆ; ಬರಬೇಕಾಗಿದೆ.

ಒಟ್ಟಾರೆ ಸುಂದರೇಶನ್ ಅವರಿಗೆ ಬರಹಪ್ರಪಂಚದಲ್ಲಿ ಒಳ್ಳೆಯ ಭವಿಷ್ಯವಿದೆ. ಇವರ ಈ ಸಾಹಿತ್ಯಕ ಕೃಷಿ ಹೀಗೆಯೆ ಮುನ್ನಡೆಯಲಿ. ಮುಂಬೆಳಗು ಮೂಡಿಬರಲಿ. ಕನ್ನಡ ನುಡಿದಾಯಿಯ ಕಂದನಾಗಿ ಸುಂದರೇಶನ್ ಬೆಳಗಲಿ.

ಶ್ರೀ ಶ್ರೀ ಜ. ಚ. ನಿ. ಸಂಸ್ಥಾನ ಅವರು.

ಹರಕೆ

ವರ್ಧಿಷ್ಣುಗಳಾದ ಚಿರಂಜೀವಿ ಚ. ಸುಂದರೇಶನ್, ಸೋಸಲೆ ಅವರ 'ಕಲ್ಪಲತೆ' ನನ್ನ ಮನೋವೃಕ್ಷವನ್ನು ಬಳಸಿ ಬಂತು. 'ಭಕ್ತಿ-ಮುಕ್ತಿ', 'ಸೋಸಲೆ ತೋಪಿನಮಠದ ಲಿಂ. ಶ್ರೀಷಡಕ್ಷರಯೋಗಿವರೇಣ್ಯರು', 'ಜೀವನದಲ್ಲಿ ಮಾತೆಯ ಸ್ಥಾನ', 'ಬಾಳುವೆಯ ಗುರಿ', ವಚನಗಾರ್ತಿ 'ಮಹಾದೇವಿಯಕ್ಕ', 'ಬಸವಣ್ಣನವರು ಮತ್ತು ಕನ್ನಡ ಸಾಹಿತ್ಯ', 'ಧರ್ಮಪುಂಗವ ಬಸವಣ್ಣನವರು', 'ತವನಿಧಿ ಶ್ರೀ ದೇವರ ದಾಸಿಮಯ್ಯನವರು', ಎಂಬ ಕುಡಿಗಳು ಈ ಲತೆಯಲ್ಲಿ ದಾಂಗುಡಿಯಿಟ್ಟು ಮಿಡಿದಿವೆ. ಸಾಧನ, ದರ್ಶನವಿಭಾಗಗಳಲ್ಲಿ ಲತೆ ಅಡಿಯಿಟ್ಟಿದ್ದರೂ ಇದು ಲೇಖಕರ ಸಾಧನವೈಶಿಷ್ಟ್ಯವನ್ನೇ ಎತ್ತಿ ತೋರುತ್ತದೆ.

ಚಿಕ್ಕವಯಸ್ಸಿನಲ್ಲಿಯೇ ಸುಂದರೇಶನ್‌ರವರಲ್ಲಿ ಮೂಡಿರುವ ಲೇಖನ ಕಲೆ ಕಲಿಕೆ ಇವರ ಭವಿಷ್ಯಸಾಧನೆಯಲ್ಲಿ ಅರಳಿ ಭವ್ಯತೆಯ ಸೌರಭವನ್ನು ಸೂಸುವ ಮುಂಗಿರಣದಂತಿದೆ. ಅದು ಹೊಂಗಿರಣವಾಗಿ ಬೆಳಗಲಿ. ಅಂತೆಯೇ ಪರಿಪಕ್ವವಾಗಿ ಸುಮಧುರ ಸವಿ ಸೂಸುವ, ರಸಾಲವಾಗಿ ರಾಜಿಸಲಿ. ಸುವಿಮೃಷ್ಟ ಸಾಹಿತ್ಯ ಸೃಷ್ಟಿಯಾಗಿ ಸಾಹಿತೀಲೋಕವನ್ನು ತಣಿಸಲಿ.

ಇಂತು

ಶ್ರೀ ಆಸ್ಥಾನ್ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು

ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರು.

ಮೈಸೂರು

೩೦—೫—೫೪

ಹಾರೈಕೆ

ಕಿರಿಯ ಗೆಳೆಯ ಶ್ರೀ ಚ. ಸುಂದರೇಶನ್ ತಮ್ಮ ಸಾಹಿತ್ಯ ಸೇವೆಯ ಪ್ರಥಮ ಪುಷ್ಪ 'ಕಲ್ಪಲತೆ'ಗೆ ನನ್ನಿಂದ ಶುಭಾಶಯವನ್ನು ಬಯಸಿದ್ದಾರೆ. ಅದು ನನ್ನ ಹಿರಿಮೆಗಿಂತಲೂ ಹೆಚ್ಚಾಗಿ ಅವರ ಸಜ್ಜನಿಕೆಗೆ ಸಾಕ್ಷಿ.

ಎಲ್ಲರೂ ಕಥೆ, ಕಾದಂಬರಿ, ಕವಿತೆಗಳನ್ನು ಬರೆದು ಸಾಹಿತ್ಯ ರಂಗವನ್ನು ಪ್ರವೇಶಿಸುತ್ತಿರುವ ಕಾಲದಲ್ಲಿ ಗೆಳೆಯ ಚ. ಸುಂದರೇಶನ್ ಆಕರ್ಷಕವಾದ ಆ ದಾರಿಯನ್ನು ಬಿಟ್ಟು ಧರ್ಮ, ದರ್ಶನಗಳತ್ತ ತಮ್ಮ ಚಿಂತನೆಯನ್ನು ಹರಿಯಿಸಿ ಕನ್ನಡದ ಹಿರಿಯ ಸಾಧಕರೂ, ನಂದಾದೀವಿಗೆಗಳೂ ಆದ ಬಸವಣ್ಣನವರು, ಅಕ್ಕಮಹಾದೇವಿ, ದಾಸಿಮಾರ್ಯ ಮೊದಲಾದವರ ಜೀವನ, ಸಾಧನ, ದರ್ಶನಗಳ ಪರಿಚಯಮಾಡಿಕೊಡಲೆತ್ನಿಸಿದ್ದಾರೆ ಈ ಕೃತಿಯಲ್ಲಿ.

ಇವರು ಕೈಹಾಕಿರುವುದು ಬಹು ದೊಡ್ಡ ಬೇಟೆಗೆ. ಆ ಉತ್ಸಾಹವೇ ಅಭಿನಂದನಾರ್ಹವಾದದ್ದು. ಗೆಳೆಯ ಚ. ಸುಂದರೇಶನ್ ದಿನದಿನಕ್ಕೆ ಬೆಳೆಯುತ್ತಿರುವ ಕನ್ನಡ ಸಾಹಿತ್ಯಕ್ಕೆ ಒಳ್ಳೇ ನಿಧಿಯಾಗುವುದರಲ್ಲಿ ಸಂದೇಹವಿಲ್ಲ. ಆ ಮುಂಗುರುಹುಗಳೆಲ್ಲವೂ ಈ ಕೃತಿಯಲ್ಲಿ ಸ್ಪಷ್ಟವಾಗಿ ಕಾಣುತ್ತಿವೆ.

ಯಾವ ಹಿರಿಯರ ದರ್ಶನವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡಲು ಯತ್ನಿಸಿದ್ದಾರೋ ಆ ಹಿರಿಯರ ಹರಕೆ ಇವರ ಬಾಳಿಗಿರಲಿ. ಆ ಅಮರ ಜೀವಿಗಳ ದರ್ಶನ ಇವರ ಮುನ್ನಡೆಗೆ ಬಲ ನೀಡಲಿ ಎಂದು ನಾನು ಬಯಸುತ್ತೇನೆ. ಕಿರಿಯ ಕೃತಿಯಿಂದ ತೊರೆಯಾಗಿ ಆರಂಭವಾದ ಚ. ಸುಂದರೇಶನ್‌ರವರ ಸಾಹಿತ್ಯ ಜೀವನ ಮಹಾನದಿಯಾಗಿ ನಾಡನ್ನು ತಣಿಸಲಿ.

ಮೈಸೂರು
೨—೬—೫೪.

ಶ್ರೀ ತ. ರಾ. ಸು.
ಕನ್ನಡನಾಡಿನ ಸುಪ್ರಸಿದ್ಧ ಕಾದಂಬರಿಕಾರರು.

ಮೆಚ್ಚೋಲೆ

ಆಸ್ಥಾನವಿದ್ವಾನ್, ಪಂಡಿತರತ್ನಂ, ಕೀರ್ತನಾಚಾರ್ಯ
ವೇ|| ಬ. ಶಿವಮೂರ್ತಿಶಾಸ್ತ್ರಿಗಳು
'ಶರಣಸಾಹಿತ್ಯ' ಸಂಪಾದಕರು, ಬೆಂಗಳೂರು ಅವರಿಂದ

ನನಗೆ ಸುಪರಿಚಿತ ತರುಣಸಾಹಿತಿಗಳಾದ ಚ. ಸುಂದರೇಶನ್ ರವರಿಂದ ಬರೆಯಲ್ಪಟ್ಟಿರುವ 'ಕಲ್ಪಲತೆ' ಎಂಬ ಈ ಹೊತ್ತಗೆಯನ್ನು ನಾನು ಪ್ರೀತಿಯಿಂದ ಓದಿನೋಡಿದೆನು. ಇದಕ್ಕೆ ನನ್ನ 'ಮೆಚ್ಚೋಲೆ' ಬೇಕೆಂದು ಅವರು 'ಆಗ್ರಹ' ಮಾಡಿದುದರಿಂದ ಒಲುಮೆಯ ನಾಲ್ಕು ಮಾತುಗಳನ್ನು ಬರೆದಿರುವೆನು.

ಈ ಪುಟ್ಟ ಗ್ರಂಥದಲ್ಲಿ: ೧. ಭಕ್ತಿ—ಮುಕ್ತಿ, ೨. ಶ್ರೀ ಷಡಕ್ಷರ ಯೋಗಿಗಳು, ೩. ಜೀವನದಲ್ಲಿ ಮಾತೆಯ ಸ್ಥಾನ, ೪. ಬಾಳುವೆಯ ಗುರಿ, ೫. ಮಹಾದೇವಿಯಕ್ಕ, ೬. ಬಸವಣ್ಣನವರು, ೭. ದೇವರ ದಾಸಿಮಯ್ಯನವರು, ಎಂಬ ಏಳು ವಿಷಯಗಳಿವೆ. ಈ ಏಳು ವಿಷಯಗಳಲ್ಲಿ ೧, ೩ ಮತ್ತು ೪ ನೇ ಪ್ರಬಂಧಗಳು ಸಾರ್ವಜನಿಕವಾಗಿಯೂ ಮತ್ತುಳಿದ ನಾಲ್ಕು ಪ್ರಬಂಧಗಳು ವೀರಶೈವ ಸಾಹಿತ್ಯಕ್ಕೆ ಸಂಬಂಧಪಟ್ಟವಾಗಿಯೂ ಇವೆ.

ಈ ಗ್ರಂಥಕರ್ತರು ವಿಷಯಗಳನ್ನು ನಿರೂಪಿಸುವ ರೀತಿ ಚನ್ನಾಗಿದೆ. ಪ್ರತಿಯೊಂದು ವಿಷಯನಿರೂಪಣೆಗೂ ಕನ್ನಡ, ಸಂಸ್ಕೃತ, ಇಂಗ್ಲೀಷ್ ಗ್ರಂಥಗಳ ಸಾಕ್ಷಿಯನ್ನು ಕೊಟ್ಟಿರುವುದು ಗಮನಾರ್ಹವಾಗಿದೆ. ಇವರು ವಿದ್ಯಾರ್ಥಿವೃತ್ತಿಯಲ್ಲಿದ್ದರೂ ಗ್ರಂಥವ್ಯಾಸಂಗದ ಪ್ರವೃತ್ತಿಯುಳ್ಳವರಾಗಿದ್ದಾರೆಂದು ಇದರಿಂದ ತಿಳಿದುಬರುತ್ತದೆ.

ಚಿರಂಜೀವಿ ಚ. ಸುಂದರೇಶನ್ ಅವರು ವಿದ್ಯಾರ್ಥಿಯಾಗಿದ್ದು ಇಂತಹ ವಿಚಾರಪ್ರಚೋದಕ ಗ್ರಂಥವನ್ನು ಬರೆಯಲು ಪ್ರಯತ್ನಿಸಿರುವುದು ಅವರ ಸಂಸ್ಕಾರಜನ್ಯಜೀವನದ ಲಕ್ಷಣವೆನ್ನಬಹುದು. ಇವರ ಹೃದ್ಗತವಾದ ಹಾಗೂ ಸಂಸ್ಕಾರಜನ್ಯವಾದ ಈ ಪುಣ್ಯದ ಬೀಜವು

ದೇಶಾಟನ, ಪಂಡಿತ ಭಾಷಣ, ಗ್ರಂಥಾವಲೋಕನಾದಿಗಳಿಂದ ವಿಕಾಸ ಗೊಂಡು ಪರಿಪೂರ್ಣತೆಗೊಂಡು ಇವರನ್ನು ನಾಡಿಗೆ ಉಪಯುಕ್ತ ವ್ಯಕ್ತಿಯಾಗುವಂತೆ ಮಾಡಲಿ. ಇವರ ವಿಚಾರ 'ಕಲ್ಪಲತೆ' ಸರ್ವತೋ ಮುಖವಾಗಿ ಸುಮನೋಹರವಾಗಿ ಕಂಗೊಳಿಸಲಿ; ನಮ್ಮ ಸಾಹಿತ್ಯ ನಂದನವನವನ್ನು ಘಮಘಮಿಸುವಂತೆ ಮಾಡಲಿ. ತಮ್ಮ ಮಕ್ಕಳ ತೊದಲ್ನುಡಿಯನ್ನು ಆಲಿಸಿ ಲಾಲಿಸಿ ಹರ್ಷಿಸುವಂತೆ ಕನ್ನಡ ಜನ ಈ ಪುಟ್ಟಗ್ರಂಥವನ್ನು ಓದಿ ಕೇಳಿ ಆನಂದಿಸಲಿ.

ಶುಭಂ ಭೂಯಾತ್.

೧೧—೬—೧೯೫೪.

ಅರಿಕೆ

ಮಾನವನು ಪವಿತ್ರಜೀವನದ ಆದರ್ಶವನ್ನು ಪಡೆದು ಧನ್ಯ ನಾಗಲು ದಾರ್ಶನಿಕರ ಜೀವನ ದರ್ಶನವೂ ಅಗತ್ಯ. ಆ ಬೃಹದ್ದರ್ಶನ ವನ್ನು ಪಡೆಯಲು ಸಾಧನೆಯೇ ಸೋಪಾನ. ಈ ಸಾಧನ, ದರ್ಶನಗಳ ಪರಿಚಯವನ್ನು 'ಕಲ್ಪಲತೆ' ಮಾಡಿಕೊಡಲೆತ್ನಿಸಿದೆ.

ಆಧುನಿಕ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಗಣ್ಯವಾದ ಸ್ಥಾನ ವನ್ನು ಗಳಿಸಿರುವ ವರಕವಿಗಳೂ, ಪ್ರಾಚೀನ ವಚನಕಾರರ ಪಥದಲ್ಲಿ ನಡೆದು ಬಿಂದುವಿನಲ್ಲಿ ಸಿಂಧುಸಮಾನ ಅನುಭವವನ್ನು ಪಡೆದಿರುವ ಯೋಗಿವರ್ಯರೂ ಆದ ಶ್ರೀ ಜಗದ್ಗುರು ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ. ಪ. ಚನ್ನಬಸವರಾಜದೇಶಿಕೇಂದ್ರ ಶಿವಾಚಾರ್ಯಮಹಾಸ್ವಾಮಿ ಗಳವರು 'ಕಲ್ಪಲತೆ' ಹೊತ್ತಗೆಯನ್ನು ಓದಿ ಆನಂದಿಸಿ ಅವಿರಳವಾದ ಆತ್ಮೀಯಭಾವದಿಂದ ಮುನ್ನುಡಿಯನ್ನು ಬರೆದಿತ್ತು ಆಶೀರ್ವದಿಸಿರು ತ್ತಾರೆ. ಕರ್ಣಾಟಕ ಏಕೀಕರಣದ ಮುಂದಾಳುಗಳೂ, ಸುಪ್ರಸಿದ್ಧ ಸಾಹಿತಿಗಳೂ ಆದ ಆಸ್ಥಾನ ವಿದ್ವಾನ್, ಪಂಡಿತರತ್ನಂ, ಕೀರ್ತನಾ ಚಾರ್ಯ ಶ್ರೀ ಬ. ಶಿವಮೂರ್ತಿಶಾಸ್ತ್ರಿಗಳವರು 'ಕಲ್ಪಲತೆ' ಯನ್ನು ಓದಿ ಸಂತೋಷದಿಂದ ತಮ್ಮ ಮೆಚ್ಚಿಕೆಯನ್ನು ಸೂಚಿಸಿದ್ದಾರೆ. ಆಧ್ಯಾತ್ಮಿ ಗಳೂ, ಸಂಸ್ಕೃತಿ ಮತ್ತು ಸಾಹಿತ್ಯದೇಳ್ಗೆಗಾಗಿ ನಿರಂತರವೂ ಶ್ರಮಿ

ಸುತ್ತಿರುವ ವಿಶ್ವವಿದ್ಯಾನಿಲಯದ ಸಂಸ್ಕೃತ ಅ. ಪ್ರೊಫೆಸರರೂ ಆದ ಶ್ರೀ ಎಂ. ಜಿ. ನಂಜುಂಡಾರಾಧ್ಯರು ' ಕಲ್ಪಲತೆ 'ಯ ಉದ್ಯಾನವನದಲ್ಲಿ ವಿಹರಿಸಿ, ರಸಜ್ಞರಾದ ಅವರು ಲತೆಯ ಸೊಬಗಿಗೆ ಮೆಚ್ಚಿ ಹರಸಿದ್ದಾರೆ. ಕನ್ನಡ ನಾಡಿನ ಸುಪ್ರಸಿದ್ಧ ಕಾದಂಬರಿಕಾರರೂ, ಸರಳಶೀಲರೂ ಆದ ಶ್ರೀ ತ. ರಾ. ಸು. ರವರು ಈ ಹೊತ್ತಗೆಯನ್ನು ಪೂರ್ಣ ವಿಶ್ವಾಸದಿಂದ ಓದಿ ಶುಭಾಶಯವನ್ನು ನೀಡಿದ್ದಾರೆ. ಈ ಎಲ್ಲ ಪೂಜ್ಯರಿಗೂ ನನ್ನ ಹೃದಯಪೂರ್ವಕ ನಮಸ್ಕಾರಗಳು.

' ಕಲ್ಪಲತೆ ' ಯನ್ನು ಬರೆಯುವಾಗ ಉತ್ತಮ ಸಲಹೆಗಳನ್ನು ನೀಡಿ ಉತ್ಸಾಹಿಸಿದ ನನ್ನ ಪೂಜ್ಯ ತಂದೆಯವರಾದ ಶ್ರೀ ಎಸ್. ಬಿ. ಚನ್ನಬಸವಪ್ಪ, ಸೋಸಲೆ ಅವರಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸ ಬೇಕಾದುದು ಮುಖ್ಯಕರ್ತವ್ಯ. ' ಕಲ್ಪಲತೆ ' ಕಾದಂಬರಿಯಲ್ಲ ದಿದ್ದರೂ ಪ್ರಕಾಶಿಸಲು ತಾಂಡವಮೂರ್ತಿ ಪ್ರಕಾಶನ, ಮೈಸೂರು ಅವರು ಮುಂದೆ ಬಂದುದು ಸೋಜಿಗದ ಮತ್ತು ಹೆಮ್ಮೆಯ ವಿಷಯ. ಪ್ರಕಾಶಕರಾದ ಶ್ರೀ ಸಿ. ನಟರಾಜ್, ಬಿ.ಎಸ್‌ಸಿ., ಶ್ರೀ ಎಂ.ಎಸ್.ಕೆ. ಮೂರ್ತಿ, ಬಿ. ಎಸ್‌ಸಿ., ಅವರಿಗೆ ನಾನು ಚಿರಋಣಿ.

ಸರಕಾರದವರು ಸಂಸ್ಕೃತಿಪ್ರಸಾರ ಯೋಜನೆ ಕಾರ್ಯವನ್ನು ಕೈಗೊಂಡಿರುವ ಈ ಸಮಯದಲ್ಲಿ ಈ ಕಿರಿಯಕೃತಿ ' ಕಲ್ಪಲತೆ ' ಹಿರಿಯ ಭಾವವನ್ನು ಜನತೆಯ ಬಾಳಿನಲ್ಲಿ ರೂಪಿಸಿ, ಹಸನುಗೊಳಿಸುವುದಾದರೆ ನನ್ನ ಶ್ರಮ ಸಾರ್ಥಕ. ಕಥೆ, ಕಾದಂಬರಿಗಳ ಬಲೆಯಲ್ಲಿ ಬಿದ್ದು, ಪ್ರೇಮ ಪ್ರವಾಹದ ಹುಚ್ಚು ಹೊಳೆಯಲ್ಲಿ ಜೆಂದು ತಮ್ಮನ್ನು ತಾವೇ ಮರೆತಿರುವ ಇಂದಿನ ತರುಣರಿಗಂತೂ ಈ ಗ್ರಂಥವು ರುಚಿಸದೆ ಬೇಸರಪಡಿಸ ಬಹುದು. ತರುಣರೂ ಓದಿ ಆನಂದಿಸುವಂತಾದರೆ ಲೇಖಕನು ಧನ್ಯ. ಹೆಸರಿಗೆ ತಕ್ಕಂತೆ ' ಕಲ್ಪಲತೆ ' ದೈವೀಶಕ್ತಿ, ಸಂಪತ್ತುಗಳನ್ನು ಜನತೆಗೆ ಒದಗಿಸಲಿ. ಆ ಸಂಪತ್ತಿಗೆ ಎಲ್ಲರೂ ಭಾಗಿಗಳಾಗಿ ಎಲ್ಲರ ಜೀವನವೂ ಪರಿಪೂರ್ಣವಾಗಲಿ; ಪರಿಪಕ್ವವಾಗಲಿ.

ಸತ್ಯಂ ಶಿವಂ ಸುಂದರಂ

೧೬—೬—೫೪

ಚ. ಸುಂದರೇಶನ್
ಸೋಸಲೆ.

ಕಲ್ಪಲತೆ

" ಶುದ್ಧಾಂತಃಕರಣಾಲವಾಲ ಕಲಿತಾ ಶ್ರದ್ಧಾಂಬು ಸಂವರ್ಧಿತಾ ।
ಸದ್ಭಾವಾಂಚಿತ ಪಲ್ಲವಾ ಪ್ರವಿಲ ಸದ್ಧ್ಯಾನೋದ್ಗಮಾ ಭಾಸತೇ ॥
ಭಕ್ತಿಃ ಕಲ್ಪಲತಾ ಪ್ರಸಾದ ಜನಿತಾ ಭೂಯಃ ಪ್ರಸಾದ ಪ್ರಸೂಃ ।
ಸದ್ಯಸ್ತೆ ಶಿವದುರ್ಲಭಾ ತನುಭೃತಾಂ ತಾಂ ತ್ವಾಮಹಂ ಪ್ರಾರ್ಥಯೇ ॥ "

[ಕವಿ ಷಡಕ್ಷರದೇವ]

ಭಕ್ತಿಯೆಂಬ ಕಲ್ಪಲತೆಯು

ಪರಿಶುದ್ಧವಾದ ಮನಸ್ಸೆಂಬ ಮಡಿಯಲ್ಲಿ ಊರಲ್ಪಟ್ಟಿದೆ ;

ಶ್ರದ್ಧೆಯೆಂಬ ಜಲದಿಂದ ವೃದ್ಧಿಹೊಂದಿದೆ ;

ಸದ್ಭಾವವೆಂಬ ಚಿಗುರೆಲೆಗಳಿಂದ ವಿಕಸಿತವಾಗಿದೆ ;

ಉತ್ತಮಧ್ಯಾನವೆಂಬ ಫಲಪುಷ್ಪದಿಂದ ಕೂಡಿದುದಾಗಿದೆ ;

ಪ್ರಸಾದದಿಂದ ಜನಿತವಾದುದಾಗಿದೆ ;

ಪ್ರಸಾದಕ್ಕೆ ಕಾರಣವಾದುದಾಗಿದೆ ;

ಸದ್ಯದಲ್ಲಿ ದೇಹಧಾರಿಗಳಿಗೆ ದುರ್ಲಭವಾದುದಾಗಿದೆ ;

ಜಗದೀಶನೇ ! ಅಂತಹ ನಿನ್ನ ಭಕ್ತಿಯೆಂಬ ಕಲ್ಪಲತೆಯನ್ನು

ಕರುಣಿಸೆಂದು ಪ್ರಾರ್ಥಿಸುವೆನು.

‘ ಕಲ್ಪಲತೆ ’



ಭಕ್ತಿಭಾಂಡಾರಿ ಬಸವಣ್ಣನವರು

ಕಲ್ಪಲತೆ

ಸಾಧನಾ

ಭಕ್ತಿ—ಮುಕ್ತಿ

ಭಕ್ತಿಯೆಂಬುದು ಜೀವದ ಅಂತರ್ಗತಶಕ್ತಿ
ಮುಕ್ತಿಯೆಂಬುದು ಭಕ್ತಿಯ ಫಲಶ್ರುತಿ
ಭಕ್ತಿ ಸಾಧನೆಯಿಂದ ಮುಕ್ತಿ

ಈ ಮೂರು ಮಾತುಗಳೇ ಬರಹದ ಮುಖ್ಯೋಕ್ತಿ.

ನಾವು ಕೃತಿ ಕಾವ್ಯ ಮುಂತಾದುವನ್ನು ಓದುವಾಗ ಭಕ್ತಿ ಎಂಬ ಪದ ಅನೇಕ (ಹಲವಾರು) ಸಾರಿ ಗೋಚರವಾಗಿ ತನ್ನ ಪ್ರಭೆಯನ್ನು ಬೀರಿ ಬೆಳಗಿ ಮರೆಯಾಗುತ್ತದೆ. ಅದೇ ಪದವನ್ನು ಕಣ್ಣಿಟ್ಟು ಓದಿ ಅದರಲ್ಲಿರುವ ಸೂಕ್ಷ್ಮಾರ್ಥವೇನೆಂದು ಗಮನಿಸುವವರು ಅತಿ ವಿರಳ. ಹಾಗೆ ಗಮನಿಸಿದಾಗ ಭಕ್ತಿ ಎಂದರೇನು? ಭಕ್ತಿಯ ನೆಲೆಯಾವುದು? ಅದರ ರೂಪ ಹೇಗಿದೆ? ಅದನ್ನು ಕಂಡುಹಿಡಿಯುವ ಬಗೆ ಹೇಗೆ? ಅದರಿಂದಾಗುವ ಪ್ರಯೋಜನವೇನು? .... ಎಂಬಿವೇ ಪ್ರಶ್ನೆಗಳು ಮನಸ್ಸಿನಲ್ಲಿ ಮೂಡುವುದು ಸಹಜ.

ಭಕ್ತಿಗಾಗಿ ಎಲ್ಲ ಕಡೆಯಲ್ಲೂ ಅಲೆದಾಡಬೇಕಾಗಿಲ್ಲ; ಅದರ ರೂಪಿಗಾಗಿ ಎಲ್ಲ ದೇಶಗಳನ್ನು ಸಂಚರಿಸಬೇಕಾಗಿಲ್ಲ; ಅದರಿಂದಾಗುವ ಪ್ರಯೋಜನವೇನೆಂದು ಆಲೋಚಿಸಬೇಕಾಗಿಲ್ಲ. ಭಕ್ತಿಯು ಪ್ರತಿಯೊಬ್ಬ ಮಾನವನ ಅಂತರಂಗದಲ್ಲಿ ಎರಕ ಹೊಯ್ದಿರುವ ದೈವಗೊಂಬೆ. ಆದರೆ ಅದು ಅಗೋಚರ. ಇಂತಹ ಅಗೋಚರ ವಸ್ತುವೇ ಆ ಪೂರ್ಣವಸ್ತುವಾದ ಪರಮಾತ್ಮನ ಪದತಲ ಸೇರಲು ಸೂತ್ರಧಾರಿ. ಭಕ್ತಿಯ ಸಾಕಾರತೆ ವಿಶ್ವವ್ಯಾಪಿಯಾದುದು. ಅದರ ವಿಸ್ತಾರ ಪರಮಾತ್ಮನ ಹೃದಯ ವೈಶಾಲ್ಯದಂತೆ; ಆವೇಶವು ಹುಚ್ಚು ಹೊಳೆಯಂತೆ. ಈ ಬಗೆಯ

ಭಕ್ತಿಯಲ್ಲೂ ಜ್ಞಾನ ನೆಲಸಿದೆ. ಎಲ್ಲ ವಸ್ತುವಿಗಿಂತಲೂ ಹಿರಿದಾವದ್ದು ಜ್ಞಾನ. ಇದು ಮಾನವನ ಅಂತರಂಗ.... ಬಹಿರಂಗವೆರಡನ್ನೂ ಶುದ್ಧಿ ಮಾಡುವ ದಿವ್ಯಾಂಶವಾಗಿದೆ. ಹೀಗೆ ಶುದ್ಧಿಹೊಂದಿದಾತನೇ ಪೂರ್ಣಾನುಭಾವಿ. ಮಹಾದೇವಿಯಕ್ಕನ ನುಡಿಯಂತೆ ತನ್ನ ತಾನರಿತು ಹಸನಾದ ಬಾಳು ನಡೆಸುವವನೇ ಅನುಭಾವಿ. ಈ 'ಅನುಭಾವಿ' ಎಂಬ ಪದವಲ್ಲಿ "ಜ್ಞಾನಿ" ಎಂಬ ಅರ್ಥವೇ ಪ್ರಧಾನವು. ಈ ಅನುಭಾವಿಯ ಆತ್ಮ ಪರಿಶುದ್ಧ; ನಡೆಯು ನುಡಿಗೆ ಅನುಸಾರಿ. ಅನುಭಾವಿಯು ಪರಮಾತ್ಮನಲ್ಲಿ ನಿರಂತರವೂ ವ್ಯಕ್ತಪಡಿಸುವ ನಿಷ್ಕಲ್ಮಷ ಪ್ರೇಮ; ಆತುರದ ಲಾಲಸೆಗಳೆ ಭಕ್ತಿಚಿನ್ಹೆ. ಈ ಭಕ್ತಿ ಎಂಬ ಹೃದ್ಗಮವಾದ ಶಕ್ತಿ ಬಂದುದೆಲ್ಲಿಂದ? ಜ್ಞಾನ ಮತ್ತು ಭಕ್ತಿಗಳೆರಡರ ಸಾಮರಸ್ಯದಿಂದ; ಸಮತಾಭಾವದ ರಸೈಕ್ಯತೆಯಿಂದ. Truth is beauty; Beauty is Truth: ಸತ್ಯವೇ ಸೌಂದರ್ಯ; ಸೌಂದರ್ಯವೇ ಸತ್ಯ; ಎಂಬ ಆಂಗ್ಲ ಸಾಹಿತ್ಯದ ಹಿರಿಯ ಕವಿ ಕೀಟ್ಸನ ಅಮರ ವಾಣಿಯಂತೆ, ಜ್ಞಾನ ಮತ್ತು ಭಕ್ತಿಗಳೆರಡರ ಸಾಮರಸ್ಯವಿದೆ; ಚಲುವಿನ ನಿಲುವಿದೆ.

ಭಕ್ತಿ ಎಂದರೇನು? ಎಂಬೀ ಪ್ರಶ್ನೆಗೆ ಉತ್ತರಿಸುವವನು ಸ್ವಲ್ಪ ಆಲೋಚಿಸುವುದು ಸಹಜ. ಭಗವಂತನನ್ನು ಕಾಣಲು ಹಾತೊರೆಯುವ ಭಕ್ತನ ನಿಷ್ಕಲಂಕ ಪ್ರೇಮವೇ ಭಕ್ತಿ. ಅದು ಅನುಭಾವಿಯ ಆತ್ಮದಲ್ಲಿ ಹರಿಯುವ ನಿಚ್ಚಳ ದೈವಪ್ರೇಮದ ಲಹರಿ;......ಪರಮಾತ್ಮನ ಧ್ಯಾನದಲ್ಲಿ ತನ್ನನ್ನು ತಾನೇ ಮರೆತು ಹಾಡುವ ಸುಶ್ರಾವ್ಯಗೀತೆ. ಈ ಆತ್ಮವನ್ನು ಆ ಪರಮಾತ್ಮನಲ್ಲಿ ಐಕ್ಯಹೊಂದಿಸುವುದೇ ಭಕ್ತಿ ಸಾಧನೆಯ ಗುರಿ. ಅದೇ ಮುಕ್ತಿ. ಭಕ್ತಿ-ಮುಕ್ತಿಗಳೆರಡರ ನಡುವೆ ಮಾನವನ ಅಮಾನುಷ ಭಕ್ತಿಸಾಧನೆಯ ಹೋರಾಟ......ದೈವದ ಬಲ್ಮೆ......ಅಂತರಂಗಿಕ ತಪಸ್ಸಿದ್ಧಿಯು ಒಡಮೂಡಿಪೆ. ದೇಹಭಾವದ ಜಂಜಡತೆಯನ್ನು ತೊಲಗಿಸುವ ಚೈತನ್ಯ ಭಕ್ತಿಯಲ್ಲಡಗಿದೆ.

ಉಪನಿಷತ್ತುಗಳು ಭಕ್ತಿ, ಜ್ಞಾನ, ಕರ್ಮವನ್ನು ಎತ್ತಿ ಸಾರಿರುವುದು ಸರಿಯಷ್ಟೆ. ಇವುಗಳಲ್ಲಿ ಭಕ್ತಿ ಮಾತ್ರದಿಂದಲೇ ಮುಕ್ತಿ ಸಾಧ್ಯವೆಂದೂ, ಮತ್ತುಳಿದ ಕರ್ಮ......ಜ್ಞಾನಮಾರ್ಗಗಳಿಂದ ಅಸಾಧ್ಯವೆಂದು ಭಾವಿಸುವುದು ತಪ್ಪು. ಈಮೇರೆ ಆದರೆ ಕರ್ಮಯೋಗಿ ಸಿದ್ಧರಾಮನು, ಜ್ಞಾನಕ್ಕೆ ಪ್ರಧಾನರೆನಿಸಿದ ಚನ್ನಬಸವಣ್ಣನವರು

ಮುಕ್ತಿಯನ್ನು ಪಡೆಯಲಿಲ್ಲವೇ ? ಎಂಬ ಪ್ರಶ್ನೆ ಒಡನೆಯೇ ಮನಸ್ಸಿನಲ್ಲಿ ಹೊಳೆಯುತ್ತದೆ. ಆದರೆ ಆ ಮಹದ್ವ್ಯಕ್ತಿಗಳು ನಡೆದುಬಂದ ದಾರಿ ಒಂದು ಸಿಲುಕಿನ ಬಲೆ. ಅಂತಹ ಸಿಲುಕಿನ ಬಲೆಯಲ್ಲಿಯೂ ಕಲೆಯು ನೆಲೆಯನ್ನು ಕಂಡ ಮಹಾತ್ಮರವರು.

ಭಕ್ತಿಮಾರ್ಗವು ಎಡರುತೊಡರಿಲ್ಲದ ಏಕಾಗ್ರಚಿತ್ತವನ್ನು ಹೊಂದಿದ ಸುಗಮವಾದ ಹಾದಿ ಎಂದು ಬಸವಣ್ಣನವರು ನುಡಿದಿರುವರು. ಈ ನುಡಿಯನ್ನೇ ತನ್ನ ಜೀವನದಲ್ಲಿ ಅಳವಡಿಸಿಕೊಂಡು ಬಾಳಲು ಮಾನವ ಅಂಜುವನು. ಮತ್ತಿನ್ನು ಕರ್ಮ ಅಥವಾ ಜ್ಞಾನ ಮಾರ್ಗಗಳ ಹಾದಿಯಲ್ಲಿ ನಡೆದು ಮುಕ್ತಿಸಾಧಿಸುವಾತ ಅಪೂರ್ವ ಸಾಹಸಿಯೇ ಸರಿ. ಮುಕ್ತಿಪಡೆಯಲು ಭಕ್ತಿಮಾರ್ಗವೇ ಸಹಜ ಸಾಧನ ಎಂದು ಬಸವಣ್ಣನವರೇ ನುಡಿದು ಶ್ರೇಷ್ಠಮಾರ್ಗವನ್ನು ಸೂಚಿಸಿ ಹಾಡಿ ಆಡಿ ನಲಿದಿದ್ದಾರೆ. ಅಣ್ಣನವರು ತೋರಿಸಿರುವ ಹಾದಿಯಲ್ಲಿಯೇ ಕೂಡಿ ಹಾಡಿದರೆ ಮೋಕ್ಷದ ಹಾದಿ ಹತ್ತಿರವೇ ಆಗುತ್ತದೆ. ಉಳಿದ ಕರ್ಮ ಮತ್ತು ಜ್ಞಾನಮಾರ್ಗಗಳು ಮೋಕ್ಷಪ್ರದವಾಗಿದ್ದರೂ ಅಣ್ಣನವರು ತೋರಿಸಿರುವ ಮಾರ್ಗವು ಅನುಕೂಲವಾದುದು; ಜೀವನಕ್ಕೆ ಸಹಕಾರಿಯಾದುದು; ಬಾಳಿಗೆ ಬೆಳಕಾದುದು. ಕರ್ಮ ಮತ್ತು ಜ್ಞಾನ ಮಾರ್ಗಗಳಿಗಿಂತ ಭಕ್ತಿಯು ಸುಲಭಸಾಧನೆಯೆಂದರೆ ಬಹು ಸುಲಭವಾದುದು; ನಿರಾತಂಕವಾದುದು ಎಂದು ಭಾವಿಸಕೂಡದು. ಅದನ್ನೇ ಬಸವಣ್ಣನವರು ತಮ್ಮ ಪೂರ್ಣಜೀವನದಲ್ಲಿ ಭಕ್ತಿಸಾಧನೆಯು ಸುಲಭವಾದುದಲ್ಲವೆಂದೂ, ಅದು ಕಡುತರ ಸಾಧನೆಯ ಕಾಯಕವೆಂದೂ ಒತ್ತಿ ಒತ್ತಿ ನುಡಿದಿದ್ದಾರೆ. ಅವರ ಮಾತು ಸತ್ಯ; ಎಂದೆಂದಿಗೂ ನಿತ್ಯ.

ಭಕ್ತಿ ಎಂಬ ಕರೆ ನಮ್ಮೆಲ್ಲರ ಕಿವಿಗೆ ಬಿದ್ದೊಡನೆಯೇ ಭಕ್ತಿಪುತ್ಥಳಿಯಾದ ಬಸವಣ್ಣನವರ ಹೆಸರು ಹೊಳೆಯದಿರುವುದಿಲ್ಲ; ಆತನ ಭಕ್ತಿಯ ಕ್ರಮವನ್ನು ಮನಗಂಡು ನಾವು ಪರವಶರಾಗುವುದು ಅಚ್ಚರಿಯ ದೃಶ್ಯವಲ್ಲ.

"ನಾದಪ್ರಿಯನೂ ಅಲ್ಲ; ವೇದಪ್ರಿಯನೂ ಅಲ್ಲ; ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ" ಎಂಬ ಅವರ ವಚನವು ಒಂದು ದಿವ್ಯ ನುಡಿ; ಹವಳದ ಕುಡಿ; ಒಂದು ಒಳತೋಟಿ.

ಪರಮಾತ್ಮನು ನಾದಗಳಿಗೆ ಒಲಿಯುವವನಲ್ಲ; ವೇದಗಳಿಗೆ

ಮಣಿಯುವವನಲ್ಲ; ಭಕ್ತಿಗೆ ಮನಸಾರೆ ಮಾರುಹೋಗುವವನು. ಈ ಭಕ್ತಿ ಅಂತರಂಗದಲ್ಲಿ ನೆಲಸಲೂ ಪರಮಾತ್ಮನ ದಯೆ......ಕಾರುಣ್ಯ ಬೇಕು. ಆತನ ಕಾರುಣ್ಯದಿಂದ ಒದಗಿದ ಭಕ್ತಿಗೂ, ಕರುಣೆಗೂ ನಿಕಟವಾದ ಬಾಂಧವ್ಯವಿದೆ.

ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ।
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ॥

(ಸಿದ್ಧಾಂತಶಿಖಾಮಣಿ)

ಆ ಬಾಂಧವ್ಯವು ಬೀಜವೃಕ್ಷನ್ಯಾಯದಂತೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರೇ ಸಿದ್ಧಾಂತಿಸಿದ್ದಾರೆ. ಅನಂತರ ಪ್ರಫುಲ್ಲಿತವಾದ ಭಕ್ತಿಯು ಮುಕ್ತಿಸಾಧನೆಗೆ ಶಕ್ತಿಯಾಗುವುದು. ಪರಿಪೂರ್ಣ ಭಕ್ತಿಯು ಹೃದಯದಲ್ಲಿ ನೆಲಸಿದಾಗಲೇ ಮಾನವನು ಕರ್ಮಬಂಧನದಿಂದ ಬಿಡುಗಡೆ ಹೊಂದಿದಂತೆ. ಪೂರ್ಣಫಲವನ್ನು ಪಡೆಯುವ ಭಕ್ತಿಶೀಲನೇ ಅವನು. ಇಂಥ ಒಳತೋಟೆಯನ್ನು ಕಂಡುಹಿಡಿದು ಗ್ರಹಿಸಿ ಇತರರಿಗೆ ಮಾರ್ಗದರ್ಶಿಯಾದ ಬಸವಣ್ಣನವರು ಧನ್ಯರು. ಅವರು ತೋರಿಸಿರುವ ಮಾರ್ಗಪಥದಲ್ಲಿ ನಡೆದು ಅವರಂತೆಯೇ ಭಕ್ತಿಯ ಬಾಳುವೆಯಿಂದ ಬದುಕಿದರೆ ನಾವೂ ಪುನೀತರು.

ಈ ಬಗೆಯ ಭಕ್ತಿಮಾರ್ಗವು ನೂತನವಾಗಿ ರಚಿತವಾದುದಲ್ಲ. ಪ್ರಾಚೀನ ಕಾಲದಿಂದಲೂ ಬಳಕೆಗೆ ಬಂದಿರುವುದು. ಇದರಿಂದ ಪುರಾತನರು ಅಂತರಂಗಮಾರ್ಗದಲ್ಲಿಯೇ ಸಂಚರಿಸಿ ಒಳತೋಟೆಯನ್ನು ಕಂಡುಹಿಡಿದು ನವಸಂದೇಶವನ್ನು ಮಾನವನ ಪೂರ್ಣಜೀವನದ ಸಾರ್ಥಕತೆಗಾಗಿ ಬಹಿರಂಗಪಡಿಸಿದ ಸಂಶೋಧನ ಕರ್ತರೆನಿಸಿದ್ದಾರೆ.

ಭಕ್ತಿಸಾಧನೆಯು ಅಂತರಂಗಿಕವಾದ......ಚಿತ್ತೈಕಾಗ್ರತೆಯ ಹೋರಾಟ; ಅದು ಭಕ್ತನ ನಾಡಿನಾಡಿಗಳಲ್ಲಿ ಪ್ರವಹಿಸಿ ಚಕಿತಗೊಳಿಸುವ ಚೇತನಾಂಶ. ಬಹಿರ್ಮುಖವಾದ ಸಾಧನೆಯಿಂದ ದೇಹಶಕ್ತಿಯ ಬೆಳವಣಿಗೆಯು ಹೆಚ್ಚುವ ಹಾಗೆ ಅಂತರಂಗಿಕ ಸಾಧನೆಯಿಂದ ಆತ್ಮಶಕ್ತಿಯು ಬೆಳವಣಿಗೆ ಹೊಂದಿ ಜ್ಞಾನ, ವೈರಾಗ್ಯಗಳು ಪ್ರಫುಲ್ಲಿತವಾಗಿ ಮುಕ್ತಿಪಡೆಯಲು ಸಹಜ ಸಾಧನವೆನಿಸಿದೆ. ಭಕ್ತಿಯಲ್ಲೂ ನಿಷ್ಠೆಯುಳ್ಳ ಭಕ್ತಿ ಬೇಕು. ಭಕ್ತಿವಂತನಂತೆ ನಟಿಸಿ ದೇವರನ್ನು

ಒಲಿಸಿಕೊಳ್ಳಲು ಹೊರಟವನು ಆತ್ಮವಂಚಕನಾಗುತ್ತಾನೆಯೇ ಹೊರತು ಪರಮಾತ್ಮನ ಸಾನ್ನಿಧ್ಯ ಹೊಂದಲಾರ; ಮುಕ್ತಿ ಪಡೆಯಲಾರ. ಇದು ಸತ್ಯವಾದ ನುಡಿ. ಇಂತಹ ನೈಷ್ಠಿಕ ಭಕ್ತಿರಸವು ಉತ್ಪಾದನೆಯಾಗ ಬೇಕಾದರೆ ಮಾನವನ ಅಂತರಂಗ ಶುದ್ಧವಾಗಬೇಕು; ನಿಷ್ಕಲ್ಮಷ ಹೃದಯಿಯಾಗಬೇಕು. ಒಳಗೊಂದು ಮನಸ್ಸು ಹೊರಗೊಂದು ಮಾತು ಎಂಬಂತೆ ಆಗಕೂಡದು. ಜನಮೆಚ್ಚುವಂತೆ ಮಾತನಾಡಲು ಎಲ್ಲರೂ ಕಲಿಯಬಲ್ಲರು. ಅದು ಹೇಯ. ಆತನ ನಿಲುವು ಪವಿತ್ರವಾದುದಲ್ಲ; ಆತನ ನುಡಿಯು ವೇಷಧರಿಸಿದ ನಟನ ನುಡಿಯಂತೆ. ತನ್ನ ಮನದ ಲ್ಲಿದ್ದುದನ್ನು ತನ್ನ ಮನಮೆಚ್ಚುವಂತೆ ಇದ್ದ ಹಾಗೆಯೇ ನುಡಿದು ನಡೆದ ಹೊರತು ಆತ ಆತ್ಮಾನುಭಾವಿ ಎನಿಸಲಾರ; ಪ್ರಬುದ್ಧ ವ್ಯಕ್ತಿಯಾಗಲಾರನು. ಮಾನವನಾವನೇ ಆಗಲಿ ತನ್ನಾತ್ಮ ಮೆಚ್ಚುವಂತೆ ಮಾತನಾಡಬೇಕು. ನುಡಿ ಒಂದೇ ಅಲ್ಲ ನಡೆಯು ನುಡಿಗೆ ಅನುಸಾರಿ ಯಾಗಿರಬೇಕು. ವಚನಗಾರ್ತಿ ಮಹಾದೇವಿಯಕ್ಕನೂ ಇದೇ ಮಾತನ್ನು ಮನೋಜ್ಞವಾಗಿ ಬಿತ್ತರಿಸಿದಳು.

> “ ಎಲ್ಲ ಎಲ್ಲವನರಿದು ಫಲವೇನಯ್ಯಾ, ತನ್ನ ತಾನರಿಯಬೇಕಲ್ಲದೇ ತನ್ನಲ್ಲಿ ಅರಿವು ಸ್ವಯವಾಗಿರಲು ಅನ್ಯರ ಕೇಳಲುಂಟೇ? ಚನ್ನಮಲ್ಲಿ ಕಾರ್ಜುನಾ, ನೀ ಅರಿವಾಗಿ ಮುಂದೋರಿದ ಕಾರಣ ನಿಮ್ಮಿಂದ ಲರಿದೆನಯ್ಯಾ ಪ್ರಭುವೇ...!”

ಮಾನವನು ಪವಿತ್ರನಾಗಲು ಈ ನುಡಿ ಸಾಲದೇ? ಈ ನುಡಿಗಿಂತ ಜಾಣ್ಮೆಯ ಹಿತಕರದ ನುಡಿ ಬೇಕೇನು? ಇದೇ ಮಾತನ್ನು ಮಹಾತ್ಮ ಏಸು ಕ್ರಿಸ್ತರು “ಮೊದಲು ನಿನ್ನ ಕಣ್ಣಿನ ಕೊಳೆಯನ್ನು ತೊಳೆ. ಅನಂತರ ಮತ್ತೊಬ್ಬನಲ್ಲಿರುವ ಕಣ್ಣಿನ ಕೊಳೆಯನ್ನು ತೋರಿಸುವಿ ಯಂತೆ.” ಎಂದು ಮಾರ್ಮಿಕವಾಗಿ ನುಡಿದಿರುವರು. ಹೀಗೆ ಎಲ್ಲ ಮಹಾತ್ಮರೂ ಕಾವ್ಯಗಳೂ ಈ ಮಾತನ್ನು ಒತ್ತಿ ಒತ್ತಿ ಹೇಳಿವೆ. ಆದರೂ ಮಾನವ ಈ ಮಾತಿನ ಮರ್ಮವನ್ನರಿತಿಲ್ಲ; ಸದ್ಧರ್ಮವರಿತು ಬಾಳುತ್ತಿಲ್ಲ. ಈ ಮಾತು ಕೇವಲ ಜೀವನಕ್ಕೆ ಮಾತ್ರವಲ್ಲ ಜಗತ್ತಿನ ಮಾನವತೆಗೆ ಮಂಗಳಕರವಾದ ಅಮೃತವಾಣಿ. ವಾಣಿಯ ನಿಜತ್ವದಂತೆ ಮೊದಲು ತನ್ನ ತಾನರಿಯಬೇಕು. ಅರಿತವನೇ ಅನುಭಾವಿ; ಮರಿತವನೇ ಪೂರ್ಣಾನುಭಾವಿ. ಅನುಭಾವಿಯ ಭಕ್ತಿಯು ತುಂಬಿ

ಬಂದ ಬೆಳಸು. ಭಕ್ತಿಗೆ ಎಲ್ಲೆ ಇಲ್ಲ; ಗಡಿಯಿಲ್ಲ. ಈ ಮಾತನ್ನು ನಂಬಬೇಕಾದರೆ ಮುಂದೆ ಬರೆದಿರುವ ಅಣ್ಣನ ವಚನ ದಿವ್ಯ ಸಾಕ್ಷಿ.

ಅಣ್ಣನವರ ಭಕ್ತಿಯ ಕ್ರಮವನ್ನು ಕಂಡು ಮತ್ತು ಳಿದ ಶರಣರು ಹಿಗ್ಗಿ ಅವರನ್ನು 'ಭಕ್ತ'ನೆಂದು ತುಂಬಿ ಬಂದ ಹೃದಯದಿಂದ ಮನಸಾರೆ ನುಡಿದ ಮಾತ್ರಕ್ಕೆ ಅಣ್ಣನು ಅಂಜಿ........ಹೆದರಿ ಕೂಡಲ ಸಂಗಮದೇವನೆದುರು ನಿಂತು ಕಣ್ಣೀರು ಸುರಿಸುತ್ತಾ, ಹಲುಬಿ ಹಂಬಲಿಸುತ್ತಾ ನುಡಿಯುವ ಮಾತಿದು :

> "ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದಿನಿತಿಲ್ಲ, ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿ ಎಂಬರು, ನಾನೇನ ಪಾಪವ ಮಾಡಿದೆನೋ? ಬೆಳೆಯದ ಮುನ್ನವೇ ಕೊಯ್ಯುವರೇ ಹೇಳಾ? ಇರಿಯದ ವೀರ, ಇಲ್ಲದ ಸೊಬಗುವ ಎಲ್ಲ ಒಡೆಯರು ಏರಿಸಿ ನುಡಿವರು. ಎನಗಿದು ವಿಧಿಯೇ ಕೂಡಲಸಂಗಮದೇವಾ."

ಅಂತಹ ಭಕ್ತಿ ಭಾಂಡಾರಿಯೇ ತನ್ನ ಭಕ್ತಿಯು ಪೂರ್ಣತೆಯನ್ನು ಪಡೆದಿಲ್ಲವೆಂದು ಹೇಳಬೇಕಾದರೆ ಭಕ್ತಿಯ ಎಲ್ಲೆ ಎಲ್ಲಿದೆ? ಎಂಬುದನ್ನು ನಾವೇ ಆಲೋಚಿಸಬೇಕು. ಹಾಗೆ ಆಲೋಚಿಸಿದಾಗ "ಭಕ್ತಿಯ ವಿಸ್ತಾರ ಪರಮಾತ್ಮನ ಹೃದಯ ವೈಶಾಲ್ಯದಂತೆ" ಎಂದು ನಾನು ಹಿಂದೆ ಬರೆದಿರುವ ಮಾತು ನೆನಪಿಗೆ ಬರದಿರದು. ಭಕ್ತಿರಸನಿಧಿ ಬಸವಣ್ಣನವರ ಕಾಯಕದ ವೈಶಿಷ್ಟ್ಯ....ಭಾವಪುಷ್ಟಿ ತುಂಬಿರುವ ವಚನಗಳ ಔಚಿತ್ಯವೆಲ್ಲವೂ ಶ್ರೇಷ್ಠತೆಗೊಳಪಟ್ಟುವೆಂಬುದು ವ್ಯಕ್ತವಾಗದಿರದು. ಆಗ ಭಕ್ತಿಯ ವಿಪುಲತೆ ತಾನಾಗಿಯೇ ಗೋಚರವಾಗುತ್ತದೆ. ಮೇಲೆ ಹೇಳಿದ ದೃಷ್ಟಿಯಂತೆ ಭಕ್ತಿಯ ಸ್ವರೂಪವನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಒಟ್ಟಿನಲ್ಲಿ ಭಕ್ತಿಯು ಒಂದು ತಪೋವನ; ಭಕ್ತಿರಸದ ಊಟೆ; ಚೆಲುವು ನಿಲುವಿನ ಹೊನಲು.

ಭಕ್ತನೆಂದರೆ ಭಕ್ತಿರಸದ ಪುತ್ಥಳಿ. ಭಕ್ತನು ಯಾವ ಜಾತಿಯವನಾದರೇನು? ಸಿರಿವಂತನಲ್ಲದೆ ಬಡವನಾಗಿದ್ದರೆ ತಾನೆ ಏನು? ಆತ ಯಾವ ದೇವರನ್ನು ಪೂಜಿಸಿದರೆ ತಾನೆ ಏನು? ಸಂನ್ಯಾಸಿಯಾಗದೆ ಸಂಸಾರಿ ಎನಿಸಿಕೊಂಡಿದ್ದರೇನು? ಪರಮಾತ್ಮನು ಆತನ ಭಕ್ತಿಯ ಪರಾಕಾಷ್ಠತೆಗೆ ಮೆಚ್ಚಿ ಮಣಿಯುವನೇ ಹೊರತು ಮತ್ತಾವ ಜಾತಿ..... ಸಿರಿತನಗಳಿಗಲ್ಲ. ಭಕ್ತಿಯು ಸಿರಿವಂತನಿಗೇ ಅಥವಾ ಸಂಸಾರವನ್ನು

ತೊರೆದು ಸಂನ್ಯಾಸಿಗಳಾಗಿದ್ದವರಿಗೇ ಮಾತ್ರ ದೊರಕುವ ವಸ್ತುವಲ್ಲ. ಭಕ್ತಿಗೆ ಬಡವಬಲ್ಲಿದ ಎಂಬ ಬೇಧಭಾವವಿಲ್ಲ. ಜಾತಿಮತಗಳಿಗಾಗಿ ಭಿನ್ನಭಾವ ಭಕ್ತಿಯಲ್ಲಿ ವ್ಯಕ್ತಪಡುವುದಿಲ್ಲ. ಭಕ್ತಿಮಾರ್ಗವು ಸಕಲರಿಗೂ ತೆರೆದಿರುವ ಹೆಬ್ಬಾಗಿಲು. ಸಂಸಾರಿಗಳು ಆ ಮಾರ್ಗವನ್ನು ಅನುಸರಿಸಿದರೆ ಸಂನ್ಯಾಸಿಯಾದಂತೆಯೇ. ಈ ಬಗ್ಗೆ ಶ್ರೀರಾಮಕೃಷ್ಣ ಪರಮಹಂಸರ ಧರ್ಮಪತ್ನಿ ಶ್ರೀ ಶಾರದಾಮಣಿ ದೇವಿಯವರು ಹೀಗೆ ನುಡಿದಿರುವರು :

"ಸಂನ್ಯಾಸವಿಲ್ಲದೆ ಮುಕ್ತಿಯಿಲ್ಲ ಎಂಬುದೇನೋ ನಿಜ. ಆದರೆ ಗೃಹಸ್ಥರಾದವರು ಹೆದರುವುದೂ ಬೇಡ; ಸಂನ್ಯಾಸಿಗಳಾದವರು ಹಿಗ್ಗುವುದೂ ಬೇಡ. ಏಕೆಂದರೆ ಸಂನ್ಯಾಸ ಎಂದರೆ ಕಾವಿಬಟ್ಟೆ ತೊಡುವುದು ಎಂದು ಮಾತ್ರ ಅರ್ಥವಲ್ಲ. ಮಾನಸಿಕ ಸಂನ್ಯಾಸ ಎಂದರ್ಥ. ಕಾವಿಯುಟ್ಟಿರಲಿ, ಸಂಸಾರಿಯಾಗಿರಲಿ ಬೇಕಾದುದು ನಿಷ್ಕಾಮತೆ. ಅದಿದ್ದವರು ಯಾವ ಆಶ್ರಮದಲ್ಲಿಯೇ ಇರಲಿ ಅವರು ಸಂನ್ಯಾಸಾಶ್ರಮದಲ್ಲಿದ್ದಂತೆಯೇ. ಅಂಥವರಿಗೆ ಮೋಕ್ಷ ಲಭಿಸಿಯೇ ಲಭಿಸುತ್ತದೆ"

ಎಂಬೀ ಮಾತು ಸಂಸಾರಿಯೂ ಮುಕ್ತಿಗೆ ಅರ್ಹನು ಎಂಬುದನ್ನು ಒತ್ತಿಹೇಳುತ್ತದೆ. ಆತನ ಬದುಕು ನಿಷ್ಕಾಮತೆಯಿಂದೊಡಗೂಡಿರಬೇಕು.

ಸಂಸಾರದಲ್ಲಿ ಸ್ತ್ರೀಯ ಪಾತ್ರ ಪ್ರಮುಖವಾಗಿದೆ- ಪುರುಷನಂತೆಯೇ ಆಕೆಗೂ ಹಕ್ಕುಬಾಧ್ಯತೆಗಳಿವೆ. ಇಲ್ಲಿ ಸ್ತ್ರೀಪುರುಷರಿಗೆ ಬೇಧಭಾವವಿಲ್ಲ. ಅವರೀರ್ವರೂ ಎಲ್ಲ ವಿಧದಲ್ಲೂ ಸಮಾನರು. ಸ್ತ್ರೀ ಬಾಳೆಂಬ ಸೂತ್ರದಿಂದಲೇ ಸಂಚಿ ಹೊನ್ನಮ್ಮನಂತೆ ಜಯ ಪಡೆಯುವವಳಾಗಿದ್ದಾಳೆ; ಅಥವಾ ಅಕ್ಕನಂತೆ ಪಾರಮಾರ್ಥಿಕ ಸಂಸಾರ ನಡೆಸಿ ಭವವನ್ನು ಗೆಲ್ಲ ಬಲ್ಲಳು. ಹೇಗಾದರೂ ಸಂಸಾರದಲ್ಲಿ ಸ್ತ್ರೀಯ ಪಾತ್ರ ಜವಾಬ್ದಾರಿಯುತವೂ, ಪವಿತ್ರವೂ ಆದುದಾಗಿದೆ. ಸತಿಗೆ ಸಹಕಾರಿಯಾಗಿ ಪತಿಯೂ ವರ್ತಿಸಬೇಕು. ಸತಿ ಪತಿಯರ ಅನ್ಯೋನ್ಯತೆಯಿಂದ ಮೂಡಿದ ಭಕ್ತಿಯೇ ನೈಜವೂ, ಪರಮಾತ್ಮನಿಗೆ ಪ್ರಿಯತಮವೂ ಆಗಿದೆ. ಅದನ್ನೇ ವಚನಕಾರ ದೇವರ ದಾಸಿಮಯ್ಯನವರು,

"ಸತಿಪತಿಗಳೊಂದಾದ ಭಕ್ತಿ
ಹಿತವಾಗಿಪ್ಪುದು ಶಿವಂಗೆ
ಸತಿ ಪತಿಗಳೊಂದಾಗದ ಭಕ್ತಿ
ಅಮೃತದೊಳು ವಿಷವ ಬೆರಸಿದಂತೆ ಕಾಣಾ ರಾಮನಾಥ"

ಎಂದು ಬಿತ್ತರಿಸಿರುವರು. ಒಟ್ಟಿನಲ್ಲಿ ಸ್ತ್ರೀಗೂ ಮೋಕ್ಷವುಂಟು; ಲಿಂಗೈಕ್ಯ ಸಮರಸವುಂಟು. ವೀರಶೈವ ಮತತತ್ವದಂತೆ ಶಿವದೀಕ್ಷೆಯನ್ನು ಪಡೆದವರೆಲ್ಲರೂ ಭಕ್ತರಾದವಂತೆಯೇ. ಅವರನ್ನು ಹುಟ್ಟು ಸಾವುಗಳು ಕಾಡಿಸುವುದಿಲ್ಲ. ಅಕ್ಕನ ದೃಷ್ಟಿಯಲ್ಲಿ ಅರಿಷಡ್ವರ್ಗಗಳನ್ನು ತ್ಯಜಿಸಿದಾತನೇ ಭಕ್ತ. ಈ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಭವಿಗಳೇ ಮಾನವನನ್ನು ಸುತ್ತುಗಟ್ಟಿರುವುವು.

> "ಇಂತೀ ಭವಿಗಳ ತಮ್ಮೊಳಗಿಟ್ಟುಕೊಂಡು ಲಿಂಗವಿಲ್ಲದವರ ಭವಿ ಎಂಬರು. ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನ್ನರಿಯದೆ; ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿಗಳೆಂದು ಜಲಕ್ಕೆ ಕನ್ನವನ್ನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ ಹಗಲುಗಳ್ಳರಿಗೆ ಮೆಚ್ಚುವನೇ ಚನ್ನಮಲ್ಲಿಕಾರ್ಜುನಾ."

ಎಂಬ ಅಕ್ಕನ ನುಡಿ ನ್ಯಾಯಸಮ್ಮತವಾಗಿದೆ. ವಿವೇಚನಾ ದೃಷ್ಟಿಯ ವಿಶಾಲಮನೋಭಾವದ ಉಜ್ವಲಭಾವತರಂಗವನ್ನು ಮೂಡಿಸುವಂತಿದೆ. ನಾವೀಗ ಅಕ್ಕನ ನ್ಯಾಯದೃಷ್ಟಿಯಂತೆಯೇ ಅನುಸರಿಸಿದರೆ ಒಳಿತು. ಅರಿಷಡ್ವರ್ಗಗಳೆಂಬ ಭವಿಯನ್ನು ತ್ಯಜಿಸಿ ದಾಟಿದಾತನೇ, ಆ ಸಚ್ಚಿದಾನಂದ ಮೂರ್ತಿಯ ಮೆಚ್ಚುಗೆಗೆ ಪಾತ್ರನು ಎಂಬುದನ್ನು ಸೂಕ್ಷ್ಮವಾಗಿ ನಾವಿಲ್ಲಿ ಗ್ರಹಿಸಬಹುದು.

ಹೀಗೆ ಭಕ್ತನು ನಿಷ್ಕಾಮತೆಯನ್ನು ಬಾಳಿನ ಸೊಡರನ್ನಾಗಿ ಅಳವಡಿಸಿಕೊಂಡು ಬಾಳುವ ಸಾಧಕನಿಗೆ ಮುಕ್ತಿ ದೊರಕುವುದು ಸುಲಭವಾಗಿದೆ. ಆದರೆ ಆ ಭಕ್ತನಲ್ಲಿ ಜೀವನಾದ್ಯಂತವೂ ಪ್ರಾರಂಭದಲ್ಲಿದ್ದ ಹರ್ಷ ಉತ್ಸಾಹ ದೈವಪ್ರೇಮವು ಸಾಧನೆಯ ಅಂತ್ಯದವರೆಗೂ ಇರಬೇಕಾದುದು ಅತ್ಯಗತ್ಯ. "ಹೊಸದರಲ್ಲಿ ಅಗಸ ಬಟ್ಟೆಯನ್ನು ಎತ್ತಿ ಎತ್ತಿ ಒಗೆಯುವ ಹಾಗೆ" ಎಂಬ ನಾಣ್ನುಡಿಯಂತೆ ಆಗಬಾರದು. ಭಕ್ತಿ ಸಾಧನೆಯು ಕಡುತರವಾದುದು. ಅದು ಭಕ್ತನನ್ನು ಜೀವನಾದ್ಯಂತವೂ ಪರೀಕ್ಷಿಸುವ ಒರೆಗಲ್ಲು. ಈ ಸಾಧನೆಯನ್ನು ಕುರಿತು :

> "ಭಕ್ತಿಯೆಂಬುದ ಮಾಡಬಾರದು
> ಕರಗಸದಂತೆ ಹೋಗುತ್ತ ಕೊಯ್ವುದು
> ಬರುತ್ತ ಕೊಯ್ವುದು"

ಎಂದು ಅನುಭಾವಿ ಬಸವಣ್ಣನವರೇ ನುಡಿದಿರುವರು. ಈ ಮಾತು ಅಕ್ಷರಶಃ ನಿಜ. ಆದುದರಿಂದ ಭಕ್ತಿಸಾಧನೆಯು ಮಾರ್ಮಿಕವಾದ ಕಠಿಣ ಶಿಕ್ಷೆ. ಅದರಲ್ಲೀ ಭಕ್ತಿಭಾವದಿಂದ ಬಸವಣ್ಣನವರಂತೆ ತಲ್ಲೀನ ರಾಗಿ ಆನಂದ ಕಂಡವರಿಗೆ ಅದು ಒಂದು ರಕ್ಷೆ.

ಪೂಜ್ಯ ರಾಮಕೃಷ್ಣ ಪರಮಹಂಸರು ದೇವನ ವಿಗ್ರಹದ ಮುಂದೆ ಕುಣಿಯುತ್ತಾ ಹಾಡು ಹೇಳುತ್ತಿದ್ದುದನ್ನು ನೋಡಿದನೇಕರು ಹುಚ್ಚನೆಂದೇ ಅವರನ್ನು ಕರೆದಿದ್ದರು. ಆದರೆ ಅದು ಭಕ್ತಿಯ ಪರಾ ಕಾಷ್ಠತೆಯಷ್ಟೆ! ಬಸವಣ್ಣನವರೂ ಕೂಡ ತಮ್ಮ ಕೂಡಲ ಸಂಗಮ ದೇವನನ್ನು ಪೂಜಿಸುತ್ತಾ,

"ಪೂಜೆಯಂ ನೋಡಿ ಮೆಚ್ಚದೆ ಪೂಜೆಯಂ ಮಾಡಿ
ಓಜೆಗೆಟ್ಟರುಹುಗೆಟ್ಟತಿ ಲಲ್ಲೆಯಿಂ ಮಾಡಿ
ನಯನಂಗಳೊಳು ಪೂಜೆ ಬರೆದಂತೆ ನೋಡುತಂ
ಭಯ ಭಕ್ತಿಯಿಂ ಪೂಜೆ ಮೆರೆವಂತೆ ಮಾಡುತಂ
ಸುಕುಮಾರ ಶಶಿಕಲಾಚೂಡ ಕೂಡಲಸಂಗ
ಸಕಲನಿರ್ಮಾಯಿಕಕ್ರೀಡ ಕೂಡಲಸಂಗ
ನಿತ್ಯ ನಿರ್ಮಳನೆ ನಿಃಕಳನೆ ಕೂಡಲಸಂಗ
ನಿತ್ಯ ನಿರ್ಭಯನೆ ನಿರುಪಮನೆ ಕೂಡಲಸಂಗ
ಹೊಗಳ್ವ ವೇದಾಳಿಗತಿಗೂಢ ಕೂಡಲಸಂಗ
ಸೊಗಯಿಸುವ ಘನವೃಷಾರೂಢ ಕೂಡಲಸಂಗ
ಎನ್ನನತಿ ಕರುಣದಿಂ ನೋಡು ಕೂಡಲಸಂಗ
ಎನ್ನ ಮನದಕ್ಕರೊಳು ಕೂಡು ಕೂಡಲಸಂಗ
ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ
ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ"

[ಹರಿಹರ]

ಎಂದು ಹಾಡಿ ಮಗ್ನರಾಗುತ್ತಿದ್ದ ದೃಶ್ಯದಲ್ಲಿ ಭಕ್ತಿಯ ಭಾವೋದ್ರೇಕದ ಮಿಡಿತವಿದೆ; ರಸದ ಮಾಧುರ್ಯವಿದೆ. ಇಂತಹ ಮನೋಹರ ದೃಶ್ಯ ವನ್ನು ನೆನೆದವರ ಹೃದಯದಲ್ಲಿ ಭಕ್ತಿಯ ಉತ್ಕಟೇಚ್ಛೆ ತಾನು ತಾನಾ ಗಿಯೇ ಮೂಡಿ ಪರಿಪಕ್ವಹೊಂದುತ್ತದೆ. ತನ್ನನ್ನು ತಾನೇ ಮರೆತು ಹಾಡುವ ಈ ಭಕ್ತಿರಸಗೀತೆಯಲ್ಲಿ ಜಗತ್ತಿನ ಮಂಗಳಕರವಾದ ದೃಶ್ಯ ಭಾವವೂ ಹಿನ್ನೆಲೆಯಾಗಿದೆ. ಇಂತಹ ಮಗ್ನತೆಗೆ ಆತ್ಮಾರ್ಪಣವೇ ಮೂಲ ಭೂತವಾದುದು. ಭಕ್ತನ ಹೃದಯ ಅಕಲುಷಿತವಾದುದು.

ನಿರಹಂಭಾವಿಯೂ, ನಿಷ್ಕಲ್ಮಷ ಹೃದಯನೂ ಆದ ಭಕ್ತನ ಆಚರಣೆಯು ಪರಮಾತ್ಮನೆಂಬ ವ್ಯಕ್ತಿಯಲ್ಲಿ ವ್ಯಕ್ತಪಡಿಸುವ ಭಕ್ತಿ ಕುರುಹು ; ಪ್ರೇಮ ಚಿನ್ಹೆ. ಭಕ್ತನ ಹೃದಯ ಪರಿಶುದ್ಧತೆಯಿಂದಲೇ ಪರಮಾತ್ಮನು ಮೆಚ್ಚುವನು. ಒಟ್ಟಿನಲ್ಲಿ ಭಕ್ತನ ಅಂತರಂಗ ಮಲಿನವಾದುದಾಗಿರಬಾರದು. ಅಂತರಂಗಶುದ್ಧಿಯೇ ಆತ್ಮಸಿದ್ಧಿಗೆ ಮೂಲ ಕಾರಣ. ಅಂತರಂಗ ಶುದ್ಧಿಯಾಗಬೇಕಾದರೆ ಬಸವಣ್ಣನವರು ಕೆಲವು ನಿಯಮಗಳನ್ನು ತಮ್ಮ ವಚನದಲ್ಲಿತ್ತಿದ್ದಾರೆ.

> " ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ ; ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ; ಇದೇ ಅಂತರಂಗ ಶುದ್ಧಿ ; ಬಹಿರಂಗ ಶುದ್ಧಿ ; ಇದೇ ನಮ್ಮ ಕೂಡಲಸಂಗಮದೇವರ ನೊಲಿಸುವ ಪರಿ "

ಈ ವಚನದಲ್ಲಿ ಮಾನವನ ಅಜ್ಞಾನಾಂಧಕಾರವನ್ನು ಹೊಡೆದೆಬ್ಬಿಸುವ ಪ್ರಕಾಶತೆಯಿದೆ ; ಭಕ್ತಿಯ ಸಾರೂಪ್ಯತೆಯಿದೆ. ಬಾಹ್ಯಾಂತರಗಳ ನಿರ್ಮಲೀಕರಣಕ್ಕೆ ಅಣ್ಣನವರು ಸೂಚಿಸಿರುವ ಮಾತು ಮುತ್ತಿನಂತಿದೆ. ಹೀಗೆ ಅಂತರಂಗ ಶುದ್ಧಿಯನ್ನು ಪಡೆದ ಭಕ್ತನು ಹೊಗಳಿಕೆಯ ಹಂಬಲಿಕೆಗಾಗಿ ಹಂಬಲಿಸದೆ ಪರಮಾತ್ಮನ ಪದತಲವನ್ನು ಸೇರುವುದೇ ಆತನ ಪರಮ ಕರ್ತವ್ಯವಾಗಿರುತ್ತದೆ. ಅದೇ ಭಕ್ತನ ಬಾಳ್ವೆಯ ಹೆಗ್ಗುರಿ.

ಅಂತೂ ಭಕ್ತನ ಭಕ್ತಿಸಾಧನೆಯಲ್ಲಿ ನಿಸ್ವಾರ್ಥತೆ ; ತನು ಮನ ಧನಗಳನ್ನು ಅರ್ಪಿಸುವಂಥ ಆತ್ಮಾರ್ಪಣೆಯ ಬುದ್ಧಿ ಮೂಡಿ ಆತನ ಮನೋಭಾವ ಪರಮಾತ್ಮನನ್ನು ಸೇರುವುದೇ ಆಗಿರುತ್ತದೆ. ಘಳಿಗೆ ಘಳಿಗೆಗೂ ಆತನ ಹೃದಯದಲ್ಲಿ ಭಕ್ತಿಯ ಆಶಾಂಕುರ ಬೆಳೆಯುತ್ತಿರುತ್ತದೆ. ದುಂಬಿಯಂತೆ ದೇವನ ತೋಟದ ಹೂಗಳ ಮೇಲೆಲ್ಲಾ ಕುಳಿತು ಝೇಂಕಾರ ಮಾಡುತ್ತಾ ಮೌನದಿಂದ ಭಕ್ತಿರಸವನ್ನು ಹೀರುತ್ತಾ ಧ್ಯಾನದಲ್ಲೇ ಮೈಮರೆತು ತಲ್ಲೀನನಾಗುವುದು ಆತನ ಪದ್ಧತಿ.

ಆತನ ಭಕ್ತಿಯ ಪರಾಗರೇಣುವು ಬಲಿತ ಮೇಲೆಯೇ ಶಿವಪಾದ ರೇಣುವಿನೊಡನೆ ಕಲೆತು ಲಿಂಗೈಕ್ಯವಾಗುವುದು.

ಅಂದೇ ಭಕ್ತನ ಅಭಿಲಾಷೆ ಸಿದ್ಧಿ, ಅದೇ ಮುಕ್ತಿ;
ಅದೇ ಭಕ್ತಿಯ ಫಲ ಶ್ರುತಿ.

ಸೋಸಲೆ ತೋಪಿನಮಠದ

ಲಿಂಗೈಕ್ಯ ಶ್ರೀ ಷಡಕ್ಷರ ಯೋಗಿವರೇಣ್ಯರು

ಭಾರತವು ಮಹರ್ಷಿಗಳ ತಪೋನಿಲಯ. ಸಿದ್ಧಪುರುಷರು, ಮಹಾತಪಸ್ವಿಗಳು, ಶಿವಶರಣರು ಜೀವಿಸಿರುವ ಪುಣ್ಯಭೂಮಿ. ಅನೇಕ ಮಹಾತ್ಮರು ಭಾರತದಲ್ಲಿ ಜನತೆಗೆ ಅಗೋಚರರಾಗಿಯೇ ಬಾಳಿ ಬೆಳಗಿದ್ದಾರೆ. ಆಧ್ಯಾತ್ಮಿಗಳಾದ ಅವರು ತಮ್ಮ ಪೂರ್ಣಜೀವನದ ಸಹಜಸೌಂದರ್ಯಾನುಭೂತಿಯನ್ನು ವಿಶ್ವದಲ್ಲಿ ನೆಲೆಗೊಳಿಸಿ ಪವಿತ್ರಾತ್ಮರಾಗಿ ಕಂಗೊಳಿಸಿದ್ದಾರೆ. ಅವರೆಲ್ಲರನ್ನು ಕುರಿತ ವಿಚಾರಸರಣಿ ಇಂದು ದೊರಕಿದ್ದರೆ ಎಷ್ಟು ಪ್ರಯೋಜನವಾಗುತ್ತಿತ್ತು ! ಆಗ "ನಮ್ಮ ಭಾರತ ರಸಋಷಿಗಳ ಬೀಡು" ಎಂದು ಹೇಳುವ ಮಾತಿನಲ್ಲಿ ಸಂತೋಷ, ಚಿಲುಮೆಯಂತೆ ಉಕ್ಕುವುದು ಸಹಜವಲ್ಲವೇ ? ಆದರೂ ಆ ಮಹಿಮರ ದಿವ್ಯ ಜೀವನಜ್ಯೋತಿಯು ಎಲ್ಲರ ಬಾಳುವೆಯ ಏಳ್ಗೆಗೆ ಪ್ರಕಾಶವನ್ನು ಹಿನ್ನೆಲೆಯಲ್ಲಿ ಬೀರಿದೆ. ಈ ಮಹಾತ್ಮರ ಪಂಕ್ತಿಯಲ್ಲಿ ನಮ್ಮೂರ ಸ್ವಾಮಿಾಜಿಯವರೂ ಒಬ್ಬರು. ಅವರ ಜೀವನವನ್ನರಿಯುವುದು ಕನ್ನಡಿಗರೆಲ್ಲರ ಆದ್ಯಕರ್ತವ್ಯ.

ಮೈಸೂರಿಗೆ ಇಪ್ಪತ್ತೆರಡು ಮೈಲಿ ದೂರದಲ್ಲಿರುವ ಸೋಸಲೆಗೆ ಅರ್ಧ ಮೈಲಿ ದೂರದಲ್ಲಿ ಒಂದು ಮಠವಿದೆ. ಪಾಳುಮಠದಂತಿದೆ. ಅಂದವಾಗಿಲ್ಲ; ರಮ್ಯವಾಗಿಲ್ಲ. ಸ್ವಾಮಿಾಜಿಯವರ ಹೆಸರು ಶ್ರೀ ಮ|| ನಿ|| ಪ್ರ|| ಸ್ವರೂಪಿಗಳಾದ ಸೋಸಲೆ ತೋಪಿನಮಠದ ಮಹಾಧ್ಯಕ್ಷ ಶಿವಯೋಗಿ ಶ್ರೀ ಷಡಕ್ಷರದೇಶಿಕೇಂದ್ರ ಮಹಾಸ್ವಾಮಿಗಳವರು ಎಂದು. ಮಠವು ಮಣ್ಣುಗೋಡೆಗಳಿಂದ ಕಟ್ಟಿದೆ. ಸುತ್ತಲೂ ಹಬ್ಬಿರುವ ಕಳ್ಳಿಗಿಡದ ಬೇಲಿಯೇ ಮಠದ ಹೊರಭಾಗದ ಗೋಡೆಯಾಗಿದೆ. ಮಠದ ಬಾಗಿಲು ಸದಾ ಮುಚ್ಚಲ್ಪಟ್ಟಿರುತ್ತದೆ. ಮಠವೇನು ದೊಡ್ಡದಲ್ಲ. ಒಳಗಡೆ ತೊಟ್ಟಿಯ ಹಜಾರ. ತೊಟ್ಟಿಯ ಮೇಲ್ಗಡೆ ಒಗೆದ ಬಟ್ಟೆಗಳನ್ನು ಒಣಗಿಹಾಕಲು ತಂತಿ ಕಟ್ಟಿದೆ. ತಂತಿಯ ಮೇಲೆ ಏಕನಾದ ವೊಂದಿದೆ. ಹಜಾರದ ಒಂದು ಪಕ್ಕದಲ್ಲಿ ಎತ್ತರವಾದ ಒಂದು

ಕಾಲುಮಣೆ. ಅದರ ಮೇಲೆ ಗದ್ದುಗೆಯ ಪಟ್ಟು. ಅದೇ ಷಡಕ್ಷರರು ಕುಳಿತು ಮಲಗುವ ನೆಲೆ. ಸ್ವಾಮಿಗಳವರು ಬೆಳಗಿನ ಜಾವದಲ್ಲೇ ಎದ್ದು ನಿತ್ಯಕರ್ಮಗಳನ್ನು ಮುಗಿಸಿ ಪಕ್ಕದಲ್ಲಿ ಹರಿಯುವ ಕಾಲುವೆಯಲ್ಲಿ ಸ್ನಾನಮಾಡಿ ಮಠ ಸೇರಿಕೊಂಡರೆ ಮತ್ತಿನ್ನು ಹೊರಗೆ ಬರುವಹಾಗಿಲ್ಲ. "ಹರ-ಹರಾ, ಶಿವ. ಶಿವಾ" ಎಂದುಚ್ಚರಿಸುವುದೇ ಸ್ವಾಮಿಯವರ ಮುಖ್ಯವೃತ್ತಿಯೆನ್ನಬಹುದು. ಈ ನಾಮಸ್ಮರಣೆಯೊಂದಲ್ಲದೆ ಮತ್ತಾವ ಆಸ್ತಿಯೂ ಅವರದಲ್ಲ.

ವೈರಾಗ್ಯಮೂರ್ತಿ

ಶ್ರೀ ಶಿವಯೋಗಿ ಷಡಕ್ಷರರು ಸುಪ್ರಸಿದ್ಧ ಸಾಹಿತಿಗಳಲ್ಲ. ವಾಗ್ಮಿಗಳಲ್ಲ; ನಕ್ಕು ನಗಿಸುವ ಭಾಷಣಕಾರರಲ್ಲ. ಅವರು ವೈರಾಗ್ಯ ಮೂರ್ತಿಗಳು; ಉನ್ನತ ಶಿವಾನುಭಾವಿಗಳು; ಸದಾಚಾರಸಂಪನ್ನರು; ಸರ್ವಸಂಗಪರಿತ್ಯಾಗಿಗಳು. ಸಿದ್ಧರಹಳ್ಳಿಯು ಸ್ವಾಮಿಯವರ ಜನ್ಮಸ್ಥಳ. ಸ್ವಾಮಿಜಿಯವರಿಗೆ ಬಾಲಕರಾಗಿದ್ದಾಗಲೇ ಏಕಾಂಗಿಯಾಗಿ ಜೀವಿಸು ವುದು ಹಿತವಾಗಿತ್ತು. ಅವರ ಮೊದಲ ಹೆಸರು ವೀರಭದ್ರಸ್ವಾಮಿ ಎಂದು. ಬಾಲ್ಯದಲ್ಲಿಯೂ ಆಟವಾಡಲು ಅವರ ಮನ ಅಪೇಕ್ಷಿಸಲಿಲ್ಲ. ಬಯಕೆ ಎಂಬುದೇ ಅವರಿಗಿರಲಿಲ್ಲ. ಅವರು ಯಾವ ಮಾತಿಗೂ 'ಬೇಡ' ಎಂದುತ್ತರವೀಯುತ್ತಿದ್ದರು. ಆದರೆ ಸ್ವಾಮಿಯವರ ಆ ಮಾತಿನಲ್ಲಿ ಅವರಿಗೆ ಹೃದ್ಗೋಚರವಾದ ಚಿತ್ಪ್ರಕಾಶದ ಬೆಳಕಿದೆ. ಮಾತಿನಲ್ಲಿ ಅನುಭಾವದ ಹೊಂಗಿರಣವಿದೆ. ಆ ಆತ್ಮಪ್ರಕಾಶವೇ ವೈರಾಗ್ಯ. ವೈರಾಗ್ಯಮಾರ್ಗದಲ್ಲಿಯೇ ವೀರಭದ್ರಸ್ವಾಮಿಯವರು ನವಜ್ಯೋತಿ ಯನ್ನು ಕಾಣಲು ಹಂಬಲಿಸಿದರು. ಏಕಾಂಗಿಯಾಗಿ ಅಲೆದಾಡಿ ಊರಿನ ದೇವಾಲಯವನ್ನು ಹೊಕ್ಕು ದೇವನ ವಿಗ್ರಹದ ಮುಂದೆ ನಿಂದು ಭಾವಪೂರ್ಣವಾದ ಭಕ್ತಿಯಿಂದ ನಮಸ್ಕರಿಸಿ ಪರವಶರಾಗುವರು. ಪಶ್ಚಿಮ ಕಡಲನ್ನು ರವಿ ಸೇರುವನು. ಕತ್ತಲಾಯಿತು. ಆದರೂ ಸ್ವಾಮಿಯವರಿಗೆ ನಿಶೆ ಆವರಿಸಿದಂತಿಲ್ಲ. ಬೆಳ್ಳಿಚುಕ್ಕಿ ಮೂಡುವುದು. ನಿರ್ಮಲ ಆಕಾಶ, ಹಕ್ಕಿಗಳ ರವರವ ಶಬ್ದ; ಚಂದಿರನ ಎಳೆವೆಳೆದಿಂಗಳು ಪ್ರಶಾಂತವಾತಾವರಣ. ಈ ಮನೋಹರ ದೃಶ್ಯದಲ್ಲೂ ಸ್ವಾಮಿಯವರಿಗೆ ವೈರಾಗ್ಯಜ್ಯೋತಿಯೇ ಕಂಡಂತಿತ್ತು. ವೈರಾಗ್ಯಪ್ರಕಾಶವೇ ಎಲ್ಲೆಡೆ ಹರಡಿದಂತಿತ್ತು. ಜಗತ್ತಿನ ಆಗುಹೋಗುಗಳಿಗೆ, ಕಷ್ಟಕಾರ್ಪಣ್ಯಗಳಿಗೆ

ಕಾರಣವೇನೆಂದು ಅರಿ. ಹಾದಿಕಾಣದಿರುವ ಜನತೆಗೆ ನವಸ್ಫೂರ್ತಿಯನ್ನು ಬೀರು; ಎಂದು ಆ ನಿಸರ್ಗವಾತಾವರಣ ಧ್ವನಿಗೈಯುತ್ತಿತ್ತು. ಬಾಲಕರಾಗಿದ್ದಾಗಲೇ ವೀರಭದ್ರಸ್ವಾಮಿಯವರು ವೈರಾಗ್ಯ ತಪೋವನಕ್ಕೆ ಕಾಲಿಟ್ಟರು. ವೈರಾಗ್ಯ ಜೀವನವೇ ಧರ್ಮಜೀವನವೆಂದು ಮನಗಂಡರು. ವೈರಾಗ್ಯಮೂರ್ತಿನಿಯಾದ ಮಹಾದೇವಿಯಕ್ಕ ತನ್ನ ಹದಿನಾರನೆಯ ವಯಸ್ಸಿನಲ್ಲಿ ಎಲ್ಲವನ್ನೂ ತ್ಯಜಿಸಿ ಕಾನನಕ್ಕೆ ಮಲ್ಲಿಕಾರ್ಜುನನಿಗಾಗಿ ತೆರಳಿದಂತೆ ವೀರಭದ್ರಸ್ವಾಮಿಯವರು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಎಲ್ಲರನ್ನೂ ತೊರೆದು, ಎಲ್ಲವನ್ನೂ ಕಿತ್ತೊಗೆದು ಮುಂಕುಂದವೆಂಬ ಚನ್ನಪಟ್ಟಣದ ಬಳಿಯ ಗ್ರಾಮದ ಕಾನನಕ್ಕೆ ಹರನನ್ನು ಸಂದರ್ಶಿಸಲು ತೆರಳಿದರು. ಅನಂತಕಾಲ ನಿನಗಾಗಿ ತಪಿಸಿದರೂ, ತಪಿಸುತ್ತಿದ್ದರೂ ನಿನಗೆ ಕರುಣೆ ಬಾರದೇ? ನಾನು ನಿನ್ನನ್ನು ಕಾಣದೆ ಹೋದೆನೇ? ಎಂದು ಅಲ್ಲಿ ಹಲುಬುತ್ತಿದ್ದರು. ಹರನ ದರ್ಶನಕ್ಕಾಗಿಯೇ ಹನ್ನೆರಡು ವರ್ಷಗಳ ಕಾಲ ಆ ಅರಣ್ಯದಲ್ಲಿ ತಪಸ್ಸನ್ನಾಚರಿಸಿದರು. ಅವರ ಆಂತರಂಗಿಕ ಜ್ಞಾನ ವಿಕಾಸವಾಗುತ್ತಾ ಬಂತು. ಅವರ ಮನೋಮಂದಿರ ಪರಮಾತ್ಮನ ಆವಾಸಸ್ಥಾನವಾಯಿತು. ಅನಂತರ ಮುಂಕುಂದದ ಅರಣ್ಯವನ್ನು ಬಿಟ್ಟು ಸಮೀಪದ ಹಳ್ಳಿಯ ನಿರ್ಜನ ಬಯಲುಮಠದಲ್ಲಿ ಆರು ವರ್ಷಗಳ ಕಾಲ ತಪಸ್ಸಿನಲ್ಲಿದ್ದರು. ಜ್ಞಾನಸಿಂಧುವಂತಾದರು. ವೈರಾಗ್ಯಮೂರ್ತಿಯಾದರು. ತಮ್ಮದೇ ಆದ ಒಂದು ವ್ರತಸಂಕಲ್ಪದಿಂದ ತಪೋನಿಷ್ಠರಾಗಿ ತಮ್ಮ ಧ್ಯೇಯದಲ್ಲಿ ಪರಿಪೂರ್ಣತೆಯನ್ನು ಪಡೆಯುವವರಾದರು.

ಮಠಾಧಿಪತಿಗಳು

ವೀರಭದ್ರಸ್ವಾಮಿಯವರ ತಪೋಜೀವನವು ನಿರಂತರವಾಗಿ ಸಾಗುತ್ತಿದ್ದಿತು. ಸತ್ಯ–ಸೌಂದರ್ಯವು ಅವರ ಜೀವನದಲ್ಲಿ ಹೊಮ್ಮಿ ಚಿಮ್ಮುತ್ತಿದ್ದುವು. ಒಮ್ಮೆ ಅವರು ಅನಿರೀಕ್ಷಿತವಾಗಿ ಸೋಸಲೆಯ ತೋಪಿನ ಮಠಕ್ಕೆ ಬಂದರು. ಮಠಕ್ಕೆ ಯೋಗ್ಯರಾದ ಶಿಷ್ಯನನ್ನು ಹುಡುಕುತ್ತಿದ್ದ ಶ್ರೀ ಶ್ರೀಪಂಚಾಕ್ಷರಿ ಮಹಾಸ್ವಾಮಿಗಳವರು ವೀರಭದ್ರಸ್ವಾಮಿಯವರನ್ನು ತುಂಬುಕಣ್ಣಿನಿಂದ ನೋಡಿ ಅವರನ್ನೇ ಮಠಾಧಿಪತಿಗಳಾಗಲು ಚುನಾಯಿಸಿದರು. ಮಹಾಸ್ವಾಮಿಗಳವರ ಮತ್ತು

ಜನತೆಯ ಒತ್ತಾಯ ಬಲದಿಂದ ವೀರಭದ್ರಸ್ವಾಮಿಯವರು ಒಪ್ಪಿ ಮಠಾಧಿಪತಿಗಳಾದರು. ಮಠದ ಮಹಾಧ್ಯಕ್ಷರ ಪಂಕ್ತಿಯಲ್ಲಿ ನಾಲ್ಕನೆಯವರಾದರು. ಪೀಠವನ್ನೇರುವಾಗ "ಈ ಮಠಕ್ಕೆ ಇನ್ನು ಸ್ತ್ರೀಯರ ಪ್ರವೇಶವಿಲ್ಲ. ನಾನು ಜೀವಂತನಾಗಿರುವವರೆಗೂ ಸ್ತ್ರೀಯರ ದರ್ಶನ ಮಾಡುವುದಿಲ್ಲ." ಎಂದು ಸಂಕಲ್ಪಿಸಿದರು. ಶಿವಜ್ಞಾನಿಯಾಗಲು ಸಾಧನೆಯನ್ನು ಕೈಗೊಂಡರು, ವೀರಭದ್ರಸ್ವಾಮಿಯವರು ಶಿವಯೋಗಿ ಷಡಕ್ಷರರಾಗಿ, ಒಂದು ಮಠದ ಅಧಿಪತಿಯಾಗಿ, ಜನತೆಗೆ ಹಿತಕಾರಿಯಾಗಿ ಜಗನ್ಮಾನ್ಯರಾದರು; ಜಗಜ್ಜ್ಯೋತಿಸ್ವರೂಪರಾದರು.

ಅನುಭಾವಿಗಳು

ಅನುಭಾವಿ ಎಂದರೆ 'ಆತ್ಮಜ್ಞಾನಿ' ಎಂದು. 'ತನ್ನ ತಾ ತಿಳಿದವ' ಎಂದು. ಅನುಭಾವಿಯ ಮಾತು ವೇದಕ್ಕೆ ಸಮಾನ. ಸವಿಯಲು ಅಮೃತಪಾನ. ಮುಕ್ತಿ ಎಂಬುದು ಅಗೋಚವಾದ ಗಿರಿ ಶಿಖರದಲ್ಲಿಲ್ಲ. ಕಾಣಲಾಗದ ಅಪೂರ್ವ ಸ್ಥಳದಲ್ಲಿಲ್ಲ. ತನ್ನಲ್ಲೇ ಎಲ್ಲ ಸೌಂದರ್ಯವಿದೆ. ಸಂತೋಷವಿದೆ. ತನ್ನ ತಾ ತಿಳಿವುದೇ ಮುಕ್ತಿ. ಅದ ಮರೆತರೆ ಬಂಧ.

ಪೂಜ್ಯ ಷಡಕ್ಷರರು ಅನುಭಾವಿಗಳು. ಆತ್ಮಸ್ವರೂಪವನ್ನು ಕಂಡವರು. ಆತ್ಮಾನಂದವನ್ನು ಸ್ವಾದಿಸಿದವರು. ಅವರಿಗೆ ರಾಜಕೀಯ, ವೈಜ್ಞಾನಿಕ ವಿಚಾರಗಳು ಯಾವುದೊಂದೂ ತಿಳಿಯದು. ಸ್ವಾಮಿಗಳವರು ಕನ್ನಡವನ್ನೂ ಕಲಿತುಕೊಂಡಿರಲಿಲ್ಲ. ಕನ್ನಡವನ್ನು ಓದಲೂ ಕೂಡ ಬಾರದು. ಅಷ್ಟು ಮಾತ್ರಕ್ಕೆ ಅವರನ್ನು ವಿದ್ಯೆಯನ್ನರಿಯದವರ ಗುಂಪಿಗೆ ಸೇರಿಸಲು ಸಾಧ್ಯವಿಲ್ಲ. ಅವರು ತಮ್ಮ ಅಂತರ್ಗತ ಬೃಹತ್ ಶಕ್ತಿಯಿಂದ ಎಲ್ಲವನ್ನೂ ಅರಿತಿದ್ದರು. ಎಲ್ಲ ವಿದ್ಯೆಯೂ ಅವರಲ್ಲಿ ಅಡಗಿತ್ತು. ಸ್ವಾಮಿಜಿಯವರು ನೋಡಲು ಏನೂ ತಿಳಿಯದವರಂತೆ ಇದ್ದರು. ಆದರೆ ಅವರ ಆದರ್ಶಜೀವನದ ರೂಪುರೇಖೆಗಳನ್ನು ಮನಗಂಡಾಗ ಅವರನ್ನು ತುಂಬಿದ ಕೊಡಕ್ಕೆ ಹೋಲಿಸಬಹುದು. ಎಲ್ಲವನ್ನೂ ತಿಳಿದವರಾಗಿದ್ದರು. ಹೆಚ್ಚಾಗಿ ಅವರು ಆಧ್ಯಾತ್ಮವನ್ನೇ ಅಳವಡಿಸಿಕೊಂಡ ರಸಯೋಗಿಗಳು. ಶಿವಾನುಭಾವಿಗಳು.

ಮಂಡಿಗೆ ತಲೆಕೊಟ್ಟುಕೊಂಡು ಮಾತನಾಡುತ್ತಾ ಕೂರುವು

ದೆಂದರೆ ಸ್ವಾಮೀಜಿಯವರಿಗೆ ಬಲುಹಿತ. ಅವರ ಮಾತನ್ನು ಕೇಳುವು ದೆಂದರೆ ಭಕ್ತರಿಗೂ ಅಷ್ಟೇಹಿತ. ಮತ್ತಷ್ಟುಹೊತ್ತು ಸಂಭಾಷಣೆಯಲ್ಲಿ ಕೂಡುವಂತಾಗುತ್ತಿತ್ತು. ವಿರಾಮವಿದ್ದಲ್ಲಿ ಅವರು ತಮ್ಮ ಹಿಂದಿನ ಗುರುಗಳ ವಿಚಾರವನ್ನೂ, ಸಿದ್ಧರಹಳ್ಳಿಕ್ಷೇತ್ರದ ಮಹಿಮೆಯನ್ನೂ, ಬಸವಣ್ಣ-ಚನ್ನಬಸವಣ್ಣನವರ ಬಿಚ್ಚುನುಡಿಗಳನ್ನೂ, ಜ್ಞಾನಪದ ಗೀತೆಗಳನ್ನೂ, ಸಾರವತ್ತಾದ ತತ್ವಗಳನ್ನು ಮನಂಬುಗುವಂತೆ ತಿಳಿಸು ತ್ತಿದ್ದರು. ಶಿವಶರಣರನ್ನು ಕುರಿತು ಮಾತನಾಡುವಾಗಲಂತೂ ಸ್ವಾಮೀಜಿಯವರಿಗೆ ಬಲು ಸಂತೋಷ. ಅಂತೆಯೇ ಅವರಿಗೆ ದರ್ಶನ ಪಡೆಯಲು ಬಂದಿದ್ದ ಭಕ್ತರ ಮಾತನ್ನು ಕೇಳಲು ತುಂಬಾ ಕುತೂಹಲ. ನಾವೇನಾದರೂ ಅಣ್ಣನ-ಅಕ್ಕನ ವಚನಗಳನ್ನು ಹಾಡಿದರಂತೂ ಸ್ವಾಮೀಜಿಯವರು ಭವ್ಯಾನಂದದಲ್ಲಿ ತಲ್ಲೀನರಾಗುವರು, ಹಿಗ್ಗಿ ನಲಿ ದಾಡುವರು. ಭಕ್ತಿಯ ಆವೇಶದಲ್ಲಿ "ಹರ-ಹರಾ" ಎಂದುಚ್ಚರಿಸು ವರು. ಮೂಳೆಗಳನ್ನು ಎಣಿಸಬಹುದೋ ಎಂಬಂತೆ ಅವರ ದೇಹ ಬಲು ತೆಳುವಾದುದು. ಸಾಮಾನ್ಯ ಎತ್ತರ, ಮೈಬಣ್ಣ ಕೆಂಪು, ಅಲ್ಪಾಹಾರ ಸೇವನೆ, ಉಪ್ಪುಹುಳಿಕಾರವಿಲ್ಲ, ಭುಂಜಿಸಲು ನಿಯಮಿತವಾದ ಕಾಲ ವೇನಿಲ್ಲ, ರುಚಿಯಾದ ಆಹಾರವನ್ನು ಅವರು ಬಯಸಿದವರೇ ಅಲ್ಲ. ಅವರ ಪ್ರತಿಯೊಂದು ನುಡಿಯು ಹೋಲಿಕೆಯಿಂದ ಹದವೆತ್ತಿತ್ತು. ನಾವು ಪ್ರಶ್ನೆಗಳನ್ನು ಕೇಳಿದರೆ ಉತ್ತರ ಹೇಳಲು ಸ್ವಾಮೀಜಿಯವರಿಗೆ ತುಂಬಾ ಸಂತೋಷ.

ಪ್ರಶ್ನೆ—ಸ್ವಾಮೀಜಿ! ಊಟವನ್ನಾದರೂ ನೀವೇಕೆ ಪುಷ್ಕಳವಾಗಿ ಮಾಡಬಾರದು?

ಶಿವಯೋಗಿಗಳವರ ಉತ್ತರ—ಮಗೂ, ಶ್ರೀಮಂತನ ಹತ್ತಿರ ಹಣವಿರಬಹುದು. ಆದರೆ ಅದನ್ನುಣ್ಣಲು ಆತ ಸುಕೃತಪಡೆದು ಬಂದಿರಬೇಕು.

ಪ್ರಶ್ನೆ—ನೀವು ಯಾವಾಗಲೂ ಶಿವ-ಶಿವಾ ಎನ್ನುವಿರಲ್ಲ! ಶಿವ ನಿರುವನೇ? ಅವನನ್ನು ಕಂಡವರು ಇದ್ದಾರೆಯೇ? ಇದ್ದರೆ ಅವರು ತೋರಿಸಬಲ್ಲರೇ?

ಉತ್ತರ—ಶಿವನಿದ್ದಾನೆ ಮಗೂ. ಅವನನ್ನು ಕಂಡವರೂ ಇದ್ದಾರೆ. ತೋರಿಸಲೂ ಬಹುದು. ತೋರಿಸಲು ಅಧಿಕಾರಿಯಾಗಿರ

ಬೇಕು ಮಾತ್ರ. ಶಿವನು ಅರವತ್ತುಮೂರು ಕೋಟಿ ತೀರ್ಥದಲ್ಲಿಲ್ಲ. ಸದ್ಭಕ್ತರ ಹೃದಯವೇ ಶಿವನ ನೆಲೆಮನೆ.

ಪ್ರಶ್ನೆ—ಸುಖವೆಂದರೇನು? ದುಃಖವೆಂದರೇನು ? ಸ್ವಾಮಿಾಜಿ !

ಉತ್ತರ—ಬೇಡವೆಂಬುದೇ ಸುಖ ; ಬೇಕೆಂಬುದೇ ದುಃಖ.

ಪ್ರಶ್ನೆ—ತ್ರಿಕರಣಶುದ್ಧಿ ಎಂದರೇನು ?

ಉತ್ತರ—ಕೈ-ಬಾಯಿ-ಕಚ್ಚೆಯನ್ನು ಶುದ್ಧವಿಡುವುದೇ ತ್ರಿಕರಣ ಶುದ್ಧಿ.

ಪ್ರಶ್ನೆ—ವಿದ್ಯೆ ಎಂದರೇನು ?

ಉತ್ತರ—ಐವತ್ತೆರಡಕ್ಷರವೇ ವಿದ್ಯೆ. ಪುಣ್ಯವಂತನಿಗೆ ಮಾತ್ರ ಇದು ಲಭ್ಯವಾಗುತ್ತದೆ.

ಪ್ರಶ್ನೆ—ವೈರಾಗ್ಯವೆಂದರೇನು ?

ಉತ್ತರ—' ಬೇಡ 'ವೆನ್ನುವುದೇ ವೈರಾಗ್ಯ ಎಂಬ ಮಾತಿನ ಮರ್ಮ.

ಪ್ರಶ್ನೆ—ಜಗತ್ತಿನ ಆರಂಭವು ಹೇಗಾಯಿತು ?

ಉತ್ತರ—ಲೆಕ್ಕವು ಸೊನ್ನೆಯಿಂದ ಮೊದಲಾಗುತ್ತದೆ. ಜಗತ್ತು ಶೂನ್ಯದಿಂದ ಆರಂಭವಾಗುತ್ತದೆ.

ಪ್ರಶ್ನೆ—ಮಠವೆಲ್ಲಾ ಶಿಥಿಲವಾಗುತ್ತಿದೆಯಲ್ಲ ! ಅದರ ರಿಪೇರಿಗಾದರೂ ಮನಸ್ಸು ಕೊಡಬಾರದೇ ?

ಉತ್ತರ—ಒಂದು ರತ್ನವು ಕಳೆದುಹೋಗಿತ್ತು. ಅದನ್ನು ಹುಡುಕಲು ನಾನಿಲ್ಲಿ ಬಂದೆ. ಮತ್ತುಳಿದುದರ ಸುದ್ದಿ ನನಗೇಕೆ ?

ಪ್ರಶ್ನೆ—ಸಂನ್ಯಾಸಿಗೊಂದು ತರಹ ಮೋಕ್ಷ; ಸಂಸಾರಿಗೊಂದು ತರಹ ಮೊಕ್ಷವೇ ಸ್ವಾಮಿಾಜಿ ?

ಉತ್ತರ—' ಪಕಳ್ಳೇವ್ ' ಅಂತ ಹೇಳಿದರೂ ಒಂದೆ. ' ಹಿಡ್ಕೋ ' ಅಂತ ಹೇಳಿದರೂ ಒಂದೆ.

ಪೂಜ್ಯ ಸ್ವಾಮಿಗಳವರ ಈ ಮಾತುಗಳು ಅವರ ಅನುಭವವೆಂಬ ಅಂತರಂಗದಲ್ಲಿ ಪುಟಗೊಂಡು ಹೊಮ್ಮಿ ಹೊರಬಂದ ದಿವ್ಯ ನುಡಿಗಳು. ಈ ಮಾತುಗಳಿಂದ ಸ್ವಾಮಿಾಜಿಯವರು ಆಂತರಂಗಿಕ

ಸಾಧನೆಯಲ್ಲಿ ಪಡೆದಿರುವ ಪರಿಶ್ರಮದ ಪರಿಚಯ ನಮಗೆ ದೊರೆಯುತ್ತದೆ. ಉತ್ತರ ಹೇಳಲು ಯೋಚನೆಮಾಡಬೇಕಾದಂತಹ ಪ್ರಶ್ನೆಗಳಿಗೂ ತಟ್ಟನೆ ಮುತ್ತಿನಂತಹ ಉತ್ತರಕೊಡುವ ಸ್ವಭಾವ ಅವರದು. ಅವರ ಪ್ರತಿಯೊಂದು ಮಾತಿನಲ್ಲೂ ರೀತಿಯಿದೆ; ನೀತಿಯಿದೆ. ಅವರ ಅನಂತವಾದ ಆತ್ಮಶಕ್ತಿಯ ಉಜ್ವಲಪ್ರಭೆಯಿದೆ. ಜನತಾಸೇವೆಗಾಗಿ ಮಿಡಿಯುವ ಭಾವನಾವೈಖರಿಯ ಕುಶಲನೃತ್ಯಚಿತ್ರವಿದೆ.

ಸ್ವಾಮಿಾಜಿಯವರು ತಮ್ಮ ಜೀವನದಲ್ಲಿ ತಲೆನೋವಿನಿಂದ ಬಹಳ ತೊಂದರೆಪಟ್ಟಿದ್ದಾರೆ. ನೋವನ್ನು ತುಂಬಾ ಸಹಿಸಿದ್ದಾರೆ. ತಲೆಶೂಲೆಯೆಂದು ಹೇಳುವಿರಿ! ಔಷಧಿಯನ್ನೇಕೆ ತೆಗೆದುಕೊಳ್ಳುವುದಿಲ್ಲ? ಎಂದು ಪ್ರಶ್ನಿಸಿದರೆ......." ಸಾಲ ತೀರಿಸುವವರೆಗೂ ಸಾಲಗಾರರು ಬಿಡುವರೇ? ನಾನು ಮತ್ತೆ ಬರುವುದಿಲ್ಲವೆಂದು ಅವರು ಗದರಿಸುತ್ತಿದ್ದಾರೆ; ಪೀಡಿಸುತ್ತಿದ್ದಾರೆ. ಇನ್ನು ಬೇಡ ಭವಸಂಸಾರವೆಂದು ನಾನು ಹಂಬಲಿಸುತ್ತಿದ್ದೇನೆ. ಅರಿಯದೇ ಭವದಲ್ಲಿ ಬಂದೆ. ಇನ್ನೊಮ್ಮೆ ಕಳುಹಿದರೆ ನಿಮ್ಮ ಪ್ರಮಥರಾಣೆ ಎಂದು ಆಣೆ ಇಡುತ್ತೇನೆ." ಉತ್ತರರೂಪವಾಗಿ ಬಂದ ಸ್ವಾಮಿಗಳವರ ಈ ಮಾತು ಅವರ ಜೀವನಚಿತ್ರದ ಸ್ಥೂಲರೇಖೆ; ವ್ಯಕ್ತಿತ್ವದ ಸೂಕ್ಷ್ಮಚಿತ್ರ.

ಶರಣಪುಂಗವರು

ಶಿವಯೋಗಿ ಷಡಕ್ಷರರು ಒಬ್ಬರನ್ನು ದೂಷಿಸಿದವರಲ್ಲ; ತೆಗಳಿದವರಲ್ಲ; ಹೊಗಳಿಕೆಯನ್ನು ಹಂಬಲಿಸಿದವರಲ್ಲ; ಅನುಮೋದಿಸಿದವರೂ ಅಲ್ಲ. ಹೊತ್ತಾರೆ ಎದ್ದು ನಿತ್ಯಕರ್ಮಗಳನ್ನು ಮುಗಿಸಿ ಸ್ನಾನವನ್ನು ಮಾಡಿ ಪೂಜಾನಿರತರಾಗಿ, ಧ್ಯಾನಮಗ್ನರಾಗಿ 'ಹರ–ಹರಾ' ಎಂದುಚ್ಚರಿಸುತ್ತಿದ್ದರೆ ಅವರಿಗೆ ಕಳೆದುಹೋದ ರತ್ನ ಕೈಗೂಡಿದಂತೆ. 'ಕಳಬೇಡ–ಕೊಲಬೇಡ'; 'ನೀರಿಂಗೆ ನೈದಿಲೆಯೇ ಶೃಂಗಾರ'; ನುಡಿದರೆ ಮುತ್ತಿನಹಾರದಂತಿರಬೇಕು; ಅರಿದರೆ ಶರಣ, ಮರೆದರೆ ಮಾನವ; ಈಳೆನಿಂಬೆ ಮಾವುನಾದಲಕ್ಕೆ ನೀರೆರೆದವರಾರಯ್ಯ; ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ ಮೊದಲಾದ ಶರಣರ ವಚನಗಳು ಅವರಿಗೆ ಬಹು ಪ್ರಿಯವಾದುವು. 'ನಾದಪ್ರಿಯನೂ ಅಲ್ಲ' ಎಂಬುದು ಸ್ವಾಮಿಾಜಿಯವರ ಅಚ್ಚುಮೆಚ್ಚಿನ ವಚನ. 'ಭಕ್ತಿಪ್ರಿಯಾ ನಮ್ಮ ಕೂಡಲಸಂಗಮದೇವಾ' ಎಂದು

ಹಾಡುವಾಗಲಂತೂ ಸ್ವಾಮಿಗಳಿಗೆ ಅದೆಷ್ಟೋ ಆನಂದ; ತೃಪ್ತಿ; ಸಂತೋಷ; ತನ್ಮಯತೆ.

* * * * *

ಸಂಧ್ಯಾಕಾಲದಲ್ಲಿ ದರ್ಶನಪಡೆಯಲು ಬಂದ ಭಕ್ತರೊಡನೆ ಪ್ರೀತ್ಯುತ್ಸಾಹಗಳಿಂದ ಮಾತನಾಡುತ್ತಾ ಸದ್ಧರ್ಮಬೋಧೆಯನ್ನು ಬೋಧಿಸುವರು. ಭಕ್ತರು ಸ್ವಾಮಿಗಳವರ ಮೃದುಮಧುರ ನುಡಿಗಳ ನ್ನಾಲಿಸುವರು.

ಇಂದು ಮಾನವ ತನ್ನ ಬಾಳಿನ ಗುರಿಯನ್ನೇ ಮರೆತಿದ್ದಾನೆ. ಮತ್ತೆ ಇಲ್ಲಸಲ್ಲದ ಗುರಿಯ ಕಡೆ ಅವನ ಮನ ಹರಿದಿದೆ. ಹೊನ್ನು, ಹೆಣ್ಣು, ಮಣ್ಣುಗಳ ಮೇಲೆ ಕಣ್ಣಿಟ್ಟುಕೊಂಡಿದ್ದಾನೆ. ಹೊನ್ನಿಗಾಗಿ ತವಕಪಡುತ್ತಿದ್ದಾನೆ. ಹಾಗೆ ಬಯಸುತ್ತಾ ಆತನ ಆಸೆಯೂ ಬಲ ವಾಗುತ್ತಿದೆ. ಹೊನ್ನಿನ ರಾಶಿಯೇ ಕಣ್ಮುಂದೆ ಒದಗಿದರೂ ಆತನ ಆಸೆ ಪೂರ್ಣತೆಯನ್ನು ಪಡೆಯದು. ಆಸೆಯೆಂಬುದು ಮಾಯೆ. ಬೇಡ ವೆಂಬುದೇ ಸುಖಛಾಯೆ. ಮಾನವನ ಮನಸ್ಸು ಎಲ್ಲ ವಸ್ತುವನ್ನೂ ಬೇಕು ಎನ್ನುತ್ತಿದೆ. ಬೇಕೆಂದು ಹಂಬಲಿಸಿದಷ್ಟೂ ದುಃಖಪರಂಪರೆ ಒದಗುತ್ತದೆ. ಬೇಡವೆಂದು ಎಲ್ಲವನ್ನೂ ತ್ಯಜಿಸಬೇಕು. ಆಗ ಆಸೆಯನ್ನೂ ಎದುರಿಸಬಹುದು; ಗೆಲ್ಲಬಹುದು. ಅಂದು ಮಾಯೆಯ ಮುಸುಕು ಹರಿಯುತ್ತದೆ. ಹೃನ್ಮಂದಿರದಲ್ಲಿ ಚಿಜ್ಯೋತಿ ಬೆಳಗುತ್ತದೆ. ಅದರ ಪ್ರಕಾಶ ಎಂದೂ ಆರದು. ಅದು ಸ್ವಯಂಪ್ರಕಾಶಜ್ಯೋತಿ. ಆ ಜ್ಯೋತಿ ಯಿಂದ ಮತ್ತೆ ಹಲವಾರು ಧರ್ಮದೀವಿಗೆಗಳು ಉದ್ಭವಿಸಿ ಬೆಳಗುತ್ತವೆ. ಅವೂ ಕೂಡ ಸ್ವಯಂಪ್ರಕಾಶ ಜ್ಯೋತಿಯಾಗುತ್ತವೆ. ಅದನ್ನು ಆಲೋ ಚಿಸದೆ ಮಾನವ ಕುರಿಯಂತೆ ಹಳ್ಳಕ್ಕೆ ಬೀಳುತ್ತಿದ್ದಾನೆ. ಹೊನ್ನಿಗಾಗಿ ಬಯಸಿ, ಪಡೆದು ಹಣವಂತನೆಂದು ಹಮ್ಮೈಸುತ್ತಿದ್ದಾನೆ. ಹಣಬರುವುದು ಒಳ್ಳೆಯದಕ್ಕಲ್ಲ. ಅದು ಮಾನವ ಮಾಡಿದ ಪಾಪಕ್ಕೆ. ಅದರಿಂದ ನಾನೇ ಹೆಚ್ಚು ಎಂಬ 'ಅಹಂ' ಉಂಟಾಗುತ್ತದೆ. ಬಡತನದಲ್ಲಿರುವ ಭಯ–ಭಕ್ತಿ–ಗೌರವಗಳೇ ಮುಕ್ತಿಗೆ ಸಾಧನವು. ಅದನ್ನು ಅರಿತು ಮಾನವ ನಡೆಯಬೇಕು. ಇಲ್ಲದಿದ್ದರೆ ಆತನಿಗೆ ಮುಕ್ತಿ ಎಂಬುದೆಲ್ಲಿ!

ಹೆಣ್ಣಿಗಾಗಿ ಮಾನವನ ಮನ ಮತ್ತೂ ಹಾತೊರೆದಿದೆ. ಹೆಣ್ಣು ಕೆಟ್ಟವಳೆಂದಲ್ಲ. ಆಕೆಯನ್ನೇಕೆ ನಾವು ದೂಷಿಸಬೇಕು. ಆದರೆ ಹೆಣ್ಣಿನ

ಬಳಕೆಯಲ್ಲಿ ನಾಜೂಕಿರಬೇಕು; ಜಾಣ್ಮೆಯಿರಬೇಕು; ವೀಳೆಯದೆಲೆಗೆ ಸುಣ್ಣ ಹಚ್ಚುವಂತೆ. ಹೆಣ್ಣಿನೊಡನಿರುವುದೆಂದರೆ ಅವಳನ್ನೇ ಹಾಸಿ ಹೊದ್ದು ಕೊಳ್ಳುವುದಲ್ಲ. ಉಂಡೂ ಉಪವಾಸಿಯಾಗಿ; ಬಳಸಿಯೂ ಬ್ರಹ್ಮಚಾರಿಯಾಗಿರಬೇಕೆಂಬುದೇ ಅದರ ಮರ್ಮ. ಇಂದು ಎಲ್ಲರೂ ಹೆಂಡತಿ-ಮಕ್ಕಳಿಗಾಗಿ-ಹಣಕ್ಕಾಗಿ ಅಳುತ್ತಿದ್ದಾರೆ; ಹರನಿಗಾಗಿ ಒಬ್ಬರೂ ಅಳುವವರಿಲ್ಲ. ಆತನ ಧರ್ಮವನ್ನು ನೋಡಿ ಆನಂದಪಡುವವರು ಈ ಜಗತ್ತಿನಲ್ಲಿ ಒಬ್ಬರೂ ಇಲ್ಲವಾದರೇ? ಮಗು ಅತ್ತರೆ ತಾಯಿ ಓಡಿ ಬಂದು, ಮಗುವನ್ನಪ್ಪಿಕೊಂಡು ಸಮಾಧಾನ ಪಡಿಸುವಂತೆ ಹರನಿಗಾಗಿ ಅತ್ತರೆ, ಆತ ಓಡಿಬಂದು ಅಪ್ಪಿಕೊಳ್ಳದೆ ಇರುವನೇ ?

ಎಂದು ವಿಚಾರಪೂರ್ಣವಾದ ಅಮೋಘ "ಭಾಷಣ"ವನ್ನೇ ಮಾಡುವರು. ಸ್ವಾಮಿಗಳವರ ಬೋಧನೆಯ ಪ್ರತಿಯೊಂದು ನುಡಿಯೂ ಅವರ ಪವಿತ್ರನಿಲುವನ್ನು ಸೂಚಿಸುತ್ತದೆ. ದರ್ಶನಕ್ಕಾಗಿ ಬಂದಿದ್ದ ಜನರ ಮನಸ್ಸು ನಿರ್ಮಲವಾಗಿ ಅವರಿಗೆ ಹೊಸಹಾದಿ ಕಾಣುತ್ತದೆ. ಬಾಳಿನಲ್ಲಿ ತಾವು ಕಂಡೂ ನಡೆಯುತ್ತಿರುವ ತಪ್ಪನ್ನು ತಿದ್ದಿಕೊಳ್ಳಲು ಹರ್ಷತಾನಾಗಿ ಉಕ್ಕಿಬರುತ್ತದೆ. ಆಗ ಪೂಜ್ಯ ಸ್ವಾಮೀಜಿಯವರ ಬಗ್ಗೆ ಹೆಚ್ಚಿನದಾದ ಭಕ್ತಿ-ವಿಶ್ವಾಸಗಳು ಮೂಡುತ್ತದೆ. ಅನುಭಾವಿಗಳಾದ ಷಡಕ್ಷರರ ಆದರ್ಶಜೀವನವನ್ನು ಮನಗಂಡೊಡನೆ ಮನಸ್ಸು ಅವರಿಗೆ ಶರಣುಹೋಗುತ್ತದೆ. ಅವ್ಯಕ್ತವಾದ ಆನಂದದಲ್ಲಿ ತನ್ಮಯತೆಯನ್ನು ಹೊಂದುತ್ತದೆ. ಹೀಗೆ ಬಾಳಿಗೊಂದು ಹಾದಿಯನ್ನು ಬಿತ್ತಿ ಎಲ್ಲರ ಬಾಳಿನ ಸಾರ್ಥಕ್ಯಕ್ಕಾಗಿ, ನವ್ಯತೆಗಾಗಿ ಶ್ರಮಿಸಿರುವ ಪೂಜ್ಯಶ್ರೀಗಳವರನ್ನು ಎಷ್ಟು ಗುಣಗಾನಮಾಡಿದರೂ ಸಾಲದಾಗಿದೆ. ಅವರನ್ನು ಕುರಿತು ಎಷ್ಟು ಪುಟಗಳನ್ನು ಬರೆದರೂ ಸಾಲದೆನ್ನಿಸುತ್ತದೆ.

ಒಂದು ಮಠದ ಅಧಿಪತಿಯಾಗಿ, ಸ್ವಾನುಭವಶೀಲರಾಗಿ, ಮಹಿಮಾನ್ವಿತರಾಗಿ, ತನ್ನತಾವರಿತು, ಅಂಗ ಸತಿ ಲಿಂಗ ಪತಿ ಎಂಬ ಭಾವವನ್ನೊಳಗೊಂಡು, ಲೋಕಸೇವೆಯೇ ಈಶಸೇವೆ ಎಂದರಿತು, ಜನರನ್ನು ನೀತಿವಂತರನ್ನಾಗಿ ಮಾಡಿ ಅವರ ಅಜ್ಞಾನವನ್ನು ತೊಲಗಿಸಲು ನಿರಂತರವೂ ಶ್ರಮಿಸುತ್ತಿದ್ದ ವಿಶಾಲ ಹೃದಯರಾದ ಭವರೋಗವೈದ್ಯ ಶ್ರೀ ಶಿವಯೋಗಿಷಡಕ್ಷರರು ಶರಣರಾಶರಣರಲ್ಲದೆ ಮತ್ತೇನು! ಜಗತ್ಕಲ್ಯಾಣಕ್ಕಾಗಿ ಉದಯಿಸಿದ ಮಹಾಪುರುಷರ ಪಂಕ್ತಿಯಲ್ಲಿ ಪೂಜ್ಯ ಸ್ವಾಮೀಜಿ

ಯವರಿಗೆ ಅಗ್ರಗಣ್ಯಸ್ಥಾನವೆಂದರೂ ಸಲ್ಲುತ್ತದೆ.

ಪವಾಡ ಪುರುಷರು

ಶ್ರೀ ಶಿವಯೋಗಿ ಷಡಕ್ಷರರು ಪುಣ್ಯಮಯಿಗಳು. ನೈಷ್ಠಿಕ ಬ್ರಹ್ಮಚಾರಿಗಳು. ಶ್ರೀಗಳವರು ತಮ್ಮ ಪೂರ್ಣಜೀವನದ ಅನುಭವವನ್ನು ಜನತೆಗಾಗಿ ನೀಡಿದ್ದಾರೆ. ಹಲವು ಪವಾಡಗಳನ್ನು ಮೆರೆದು ಪವಾಡಪುರುಷರಂತಾಗಿದ್ದಾರೆ. ಅವುಗಳಲ್ಲಿ ಕೆಲವೆರಡನ್ನು ಮಾತ್ರ ನೋಡೋಣ.

ಒಮ್ಮೆ ಸ್ವಾಮೀಜಿಯವರನ್ನು ಒಂದು ನಾಗರಹಾವು ಕಚ್ಚಿತು. ಕಚ್ಚಿದ್ದಕ್ಕೆ ಷಡಕ್ಷರರು ವ್ಯಥೆಪಡಲಿಲ್ಲ. ಎಲೈ ದುಷ್ಟ! ಇನ್ನೆಷ್ಟು ಜನರನ್ನು ಕಚ್ಚಿ ಸಾಯಿಸಬೇಕೆಂದಿರುವೆ? ಎಂದು ಆ ಹಾವನ್ನು ಕುರಿತು ಕರುಣೆಯಿಂದ ನುಡಿದರು. ಅಷ್ಟುಮಾತ್ರಕ್ಕೆ ಆ ಹಾವು ಕೆಲವಾರು ನಿಮಿಷ ಗಿರ್ರನೆಸುತ್ತಿ ಪ್ರಾಣಬಿಟ್ಟುಬಿಟ್ಟಿತು. ಇತ್ತೆಡೆ ಭಕ್ತರು ಸ್ವಾಮಿಯವರಿಗೆ ಹಾವು ಕಚ್ಚಿದ ವಿಷಯತಿಳಿದು ಗಾಬರಿಗೊಂಡು ಪೇಚಾಡತೊಡಗಿದರು. ಆದರೆ ಸ್ವಾಮೀಜಿಯವರು ಹೆದರಲಿಲ್ಲ. ಯಾವ ವಸ್ತುವು ತಾನೇ ಜಗದಲ್ಲಿ ಶಾಶ್ವತ! ಎಂದುಸುರಿ ಹಾವು ಕಚ್ಚಿದ್ದ ಸ್ಥಳಕ್ಕೆ ಭಸ್ಮವನ್ನು ಧರಿಸುತ್ತಾ ಭಕ್ತರ ಸಮೂಹದಲ್ಲಿ ಕುಳಿತು 'ಎಲ್ಲ ರೋಗಕ್ಕೂ ಗಂಡ ನಮ್ಮ ಶ್ರೀ ವಿಭೂತಿ' ಎಂದು ನುಡಿದರು. ಸ್ವಾಮೀಜಿಯವರ ಈ ಮಾತು ಅವರ ಪ್ರಾಯೋಗಿಕ ಅನುಭವದ ರನ್ನದಂತಹ ನುಡಿ. ಮತ್ತಾವ ಆಂಗ್ಲೇಯ ಅಥವಾ ನಾಡ ಔಷಧಿಗಳನ್ನು ಅವರು ಉಪಯೋಗಿಸುತ್ತಿರಲಿಲ್ಲ. ಎಲ್ಲ ರೋಗಕ್ಕೂ ಶ್ರೀ ವಿಭೂತಿಯೇ ದಿವ್ಯೌಷಧ.

ಈಗ್ಗೆ ಐದಾರು ವರ್ಷಗಳ ಹಿಂದೆ ಬೇರೊಂದು ಸಂಘಟನೆ ನಡೆಯಿತು. ಉತ್ತರದೇಶದವಳೊಬ್ಬಳು ಶಿವಶರಣೆ. ಆಕೆಯದು ಮೌನವ್ರತ. ಯಾವ ವಿಚಾರವನ್ನು ಇತರರಿಗೆ ತಿಳಿಸಬೇಕಾದರೂ ಆಕೆ ಕಲ್ಲುಹಲಗೆಯ ಮೇಲೆ ಬರೆದು ತೋರಿಸುತ್ತಿದ್ದಳು. ಷಡಕ್ಷರರ ದರ್ಶನಕ್ಕಾಗಿ ಆಕೆ ತನ್ನೂರು ಬಿಟ್ಟುಬಂದಳು. ಸ್ತ್ರೀಯರ ದರ್ಶನ ಮಾಡುವುದಿಲ್ಲವೆಂದು ಗುರುವರ್ಯರು ತಿಳಿಸಿದಕಾರಣ ಏನೊಂದೂ ತೋಚದೆ ಶರಣೆ ತನ್ನೂರನ್ನು ಸೇರಿದಳು. ತನ್ನೂರಿಗೆ ಹೋದರೂ ಮನಸ್ಸು ಮಾತ್ರ ಸ್ವಾಮೀಜಿಯವರ ದರ್ಶನಾಪೇಕ್ಷೆಯಲ್ಲಿತ್ತು. ದಿನಗಳುರುಳಿ

ದವು. ಶರಣೆಯ ಮನೋವ್ಯಥೆ ಪ್ರಬಲವಾಯಿತು. 'ಷಡಕ್ಷರರ ದರ್ಶನ ಪಡೆದರೆ ನೀನು ಮುಕ್ತಿ ಪಡೆದಂತೆ, ಇಲ್ಲದಿದ್ದಲ್ಲಿ ನಿನಗೆ ಮುಕ್ತಿಯಿಲ್ಲ' ಎಂಬ ಧ್ವನಿ ಆಕೆಯ ಹೃದಯದಲ್ಲಿ ಮೊಳಗುತ್ತಿತ್ತು. ಕನಸಿನಲ್ಲಿ ಆಕೆಗೆ ಹೀಗೆ ಹೇಳಿದಂತಾಗುತ್ತಿತ್ತು. ಶಿವಯೋಗಿಗಳವರ ದರ್ಶನ ಪಡೆಯಲೇಬೇಕೆಂದು ದೃಢಸಂಕಲ್ಪಮಾಡಿ ಸ್ವಾಮಿಜಿಯವರ ಸ್ಥಳಕ್ಕೆ ಬಂದಳು. ಅಂಗ ಸತಿ ಲಿಂಗ ಪತಿ ಎಂಬ ಭಾವವನ್ನೊಳಗೊಂಡ ಶ್ರೀ ಮೂರ್ತಿಗೆ ಸ್ತ್ರೀಯರ ದರ್ಶನಮಾಡುವುದರಿಂದ ಕುಂದೇನೂ ಆಗಲಾರದು. ಹಾಗೆ ನೀವು ಸ್ತ್ರೀಯರನ್ನು ದೂರೀಕರಿಸಿಬಿಟ್ಟರೆ ಆ ಹೆಣ್ಣಿನ ಜಯಮಂಗಳಕ್ಕೆ ಸೌಕರ್ಯವೆಲ್ಲಿ? ಆತ್ಮನಿಗೆ ಗಂಡು-ಹೆಣ್ಣುಗಳೆಂಬ ಬೇಧವಿಲ್ಲವೆಂದು ತಾವು ಅರಿತಿದ್ದರೂ ಕೂಡ ಹೆಣ್ಣನ್ನು ಹೀಗೆ ತ್ಯಜಿಸುವುದು ಸರಿಯಲ್ಲ. ತಾವು ತೆರೆಯ ಮರೆಯಲ್ಲಿರಿ, ತಮ್ಮ ಪಾದ ದರ್ಶನವನ್ನಾದರೂ ಪಡೆದು ಧನ್ಯಳಾಗುವೆ; ಪವಿತ್ರಳಾಗುವೆ; ಎಂದು ಶರಣೆ ಭಕ್ತರಿಂದ ಬಿನ್ನವಿಸಿದಳು. ಸ್ವಾಮಿಜಿಯವರು ಈಗ ಶರಣೆಯ ಬಯಕೆಯನ್ನು ಬದಿಗೊತ್ತಲು ಮನಬಾರಲಿಲ್ಲ. ಮನಬಂದರೂ ಶರಣೆಯ ಮಾತಿನಂತೆ ನಡೆದರೆ ತಮ್ಮ ಜೀವನಗುರಿಯೇ ಸರ್ವನಾಶವಾಗುವುದೆಂಬ ಭಯ ಬೇರೊಂದಿದೆ. ಅಂತು ಹೇಗೋ ದೇವನನ್ನು ನಂಬಿ ಒಪ್ಪಿದರು. ನನಗಿದು ದೇವನ ಪರೀಕ್ಷೆ ಎಂದು ಅಂತರಂಗದಲ್ಲಿ ಬಿಸುಸುಯ್ದರು.

ಮರುದಿನ ಶರಣೆಗೆ ಸ್ವಾಮಿಗಳವರ ಪಾದದರ್ಶನ ಪಡೆಯುವ ಸುದಿನ. ಆಕೆ ಪಕ್ಕದ ಊರಿನ ಮಠದಲ್ಲಿ ತಂಗಿದ್ದಾಳೆ. ಷಡಕ್ಷರರ ದರ್ಶನಕ್ಕಾಗಿ ತೆರಳಲು ಆನಂದದಿಂದ ಸ್ನಾನವನ್ನು ಮಾಡಿ ಶಿವಪೂಜಾನಿರತಳಾಗಿದ್ದಾಳೆ. ತೋಪಿನಮಠದಲ್ಲಿ ಸ್ವಾಮಿಜಿಯವರೂ ಸಹ ಶಿವಪೂಜೆಯಲ್ಲಿದ್ದಾರೆ. ಪೂಜಾರಸಮಗ್ನಳಾಗಿರುವ ಶರಣೆಗೆ ಪೂಜ್ಯ ಸ್ವಾಮಿಗಳವರು ಆಕೆಯ ಇಷ್ಟಲಿಂಗದಲ್ಲಿ ಕಾಣಿಸಿಕೊಂಡರು. ಅಂತರಂಗದ ದಿವ್ಯಸ್ವರೂಪವನ್ನು ಮನಗಾಣಿಸಿದರು. ದಿವ್ಯದರ್ಶನವನ್ನಿತ್ತರು. ಶರಣೆಯ ಆಸೆ ಈಡೇರಿತು. ಮುಕ್ತಿ ಲಭಿಸಿತು. ಅಂಗದಲ್ಲಿ ಲಿಂಗ ಪೂಜಾನಿರತಳಾಗಿ ಧ್ಯಾನಮಾನಸಳಾಗಿದ್ದಾಗಲೇ ಬ್ರಹ್ಮಾನಂದದಲ್ಲಿ ತಲ್ಲೀನಳಾಗಿ ಶರಣೆಯು ಲಿಂಗೈಕ್ಯಳಾದಳು. ಇತ್ತಡೆ ಮಠದಲ್ಲಿ ಸ್ವಾಮಿಜಿಯವರು ಪೂಜೆಯಿಂದ ಮೇಲೆದ್ದು "ಶರಣೆ ಲಿಂಗೈಕ್ಯ

ಳಾದಳು" ಎಂದು ನುಡಿದರು. ಭಕ್ತರು ಸ್ವಾಮಿಜಿಯವರ ನುಡಿಯ ನ್ನಾಲಿಸಿ ಅಚ್ಚರಿಗೊಂಡವರಾಗಿ ಪಕ್ಕದ ಊರಿನ ಮಠದಲ್ಲಿದ್ದ ಶರಣೆ ಯನ್ನು ನೋಡಲು ಓಡಿಹೋದರು. ಶಿವಪೂಜೆಯಲ್ಲಿದ್ದಾಗಲೇ ಶರಣೆಯು ಲಿಂಗೈಕ್ಯಳಾಗಿದ್ದಾಳೆ. ಈ ಘಟನೆಯು ಸಾಮಾನ್ಯವಾದು ದಲ್ಲ. ವೀರಶೈವ ಧಾರ್ಮಿಕಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಬೇಕಾದ ಮಹತ್ವಪೂರ್ಣ ಸಂಘಟನೆಯಾಗಿದೆ. ವೈರಾಗ್ಯ ಮೂರ್ತಿ ಷಡಕ್ಷರರು ಮೆರೆಸಿದ ಒಂದು ದೊಡ್ಡಪವಾಡವೆಂದೇ ಇದನ್ನು ಕರೆದು ಎತ್ತಿಸಾರಬಹುದು.

ಪರಮಾತ್ಮನ ನಿಜಸ್ವರೂಪು

ಸ್ವಾಮಿಜಿಯವರು ತಮ್ಮ ಭವ್ಯಶಕ್ತಿಯಿಂದ ವೈರಾಗ್ಯಮೂರ್ತಿ ಯಾಗಿ; ಆತ್ಮಜ್ಞಾನಿಗಳಾಗಿ; ಪವಾಡಪುರುಷರಾಗಿ, ಮಹಿಮಾವಂತರಾಗಿ, ಎಲ್ಲವನ್ನೂ ತಿಳಿದವರಾಗಿ ಬಾಳಿ ಬೆಳಗಿದ್ದಾರೆ. ಹೀಗೆ ಎಲ್ಲರಿಗೂ ಆದರ್ಶರಾದ ಪೂಜ್ಯರನ್ನು ಪರಮಾತ್ಮನಿಗೆ ಹೋಲಿಸುವುದರಲ್ಲಿ ಔಚಿತ್ಯ ವಿದೆ; ಔನ್ನತ್ಯವಿದೆ. "ಮಾನವವ್ಯಕ್ತಿಯನ್ನು ಮತ್ತೊಬ್ಬ ಮಾನವ ದೇವರಿಗೆ ಹೋಲಿಸಕೂಡದು." ಎಂದು ಕೆಲವು ವಿಮರ್ಶಕರಮತವಿದೆ. ವಿಮರ್ಶಕರ ಈ ಅಭಿಪ್ರಾಯವು ನಿಜವಾಗಿಯೂ ಖಂಡನೀಯವಾ ದುದು. ಈ ಮಾತಿಗೆ ಅನಾದಿಯಿಂದ ಎಲ್ಲ ಋಷಿಗಳು, ವೇದ, ವೇದಾಂತಗಳೂ ಒತ್ತಿ ಹೇಳಿರುವ ಮಾತೇ ದಿವ್ಯಸಾಕ್ಷಿ. ಗುರುವೇ ಸಾಕ್ಷಾತ್ ಪರಬ್ರಹ್ಮ, ವಿಷ್ಣು-ಮಹೇಶ್ವರ. ಶಿವಶರಣರೂ ಕೂಡ ಗುರುವಿನ ಬಗ್ಗೆ ಶ್ರೇಷ್ಠತೆಯನ್ನು ಸೂಚಿಸಿದ್ದಾರೆ. "ಹರ ಮುನಿದರೆ ಗುರು ಕಾಯಬಲ್ಲ; ಗುರು ಮುನಿದರೆ ಹರನೂ ಕಾಯಲಾರ" "ಗುರು ಪಥವನ್ನರಿವಡೆ ಶಿವಪಥ ದೊರಕುವುದು".... ಎಂದು ಗುರುವನ್ನು ಮಾರ್ಗದರ್ಶಕನೆಂದು ಕರೆದಿದ್ದಾರೆ. ಷಡಕ್ಷರರು ತತ್ವವಬಲ್ಲ ಯೋಗಿ ವರೇಣ್ಯರು; ಮಾರ್ಗದರ್ಶಕರಾದ ಗುರುವರ್ಯರು.

ಶಿವಯೋಗಿ ಶಿವಃ ಸಾಕ್ಷಾದಿತಿ ಕೈಂಕರ್ಯ ಭಕ್ತಿತಃ
ಪೂಜಯೇದಾ ದರೇಣೈವ ಯಥಾಲಿಂಗಂ ಯಥಾಗುರುಂ

ಸಿದ್ಧಾಂತ ಶಿಖಾಮಣಿ.

ಲಿಂಗವನ್ನೂ, ಗುರುವನ್ನೂ, ನಾವು ಹೇಗೆ ಭಕ್ತಿ-ವಿಶ್ವಾಸಗಳಿಂದ

ಪೂಜಿಸಬೇಕೋ ಹಾಗೆಯೇ ಶಿವಯೋಗಿಯನ್ನು ಸಾಕ್ಷಾತ್ ದೇವರೆಂದೇ ತಿಳಿಯಬೇಕು; ಅವರನ್ನು ಕೈಂಕರ್ಯಭಾವದಿಂದ ಪೂಜಿಸಬೇಕು. ಶಿವಯೋಗಿಯನ್ನು ದೇವರಿಗೆ ಹೋಲಿಸುವುದಿರಲಿ, ಅವರು ದೇವರೇ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸುಂದರವಾಗಿ ಬಿತ್ತರಿಸಿದ್ದಾರೆ; ಸಿದ್ಧಾಂತಿಸಿದ್ದಾರೆ. ಮಾನವ ವ್ಯಕ್ತಿಯನ್ನು ಮತ್ತೊಬ್ಬ ಮಾನವ ದೇವರಿಗೆ ಹೋಲಿಸಕೂಡದು ಎಂದು ಮತವೀಯುವ ವಿಮರ್ಶಕರು ಭಗವತ್ಪಾದರ ಮೇಲಿನ ನುಡಿಯನ್ನು ಕಿವಿಗೊಟ್ಟು ಆಲಿಸಲಿ. ಮನಕೊಟ್ಟು ಮಥಿಸಲಿ. ಸ್ಮೃತಿಪಥಕ್ಕೆ ತಂದುಕೊಳ್ಳಲಿ. ಆಗಲಾದರೂ ಅವರ ಆ ತಪ್ಪು ವಿಮರ್ಶೆಯ ನುಡಿ ನೆಟ್ಟಗಾದೀತು. ಏಸುಕ್ರಿಸ್ತ, ಬಸವಣ್ಣ, ರಾಮಕೃಷ್ಣಪರಮಹಂಸ, ವಿವೇಕಾನಂದ, ಹಾನಗಲ್ಲಿನ ಕುಮಾರಸ್ವಾಮಿಗಳವರು, ಬಾಪೂಜಿ........ಮೊದಲಾದವರೆಲ್ಲರೂ ಪರಮಾತ್ಮನ ನಿಜಸ್ವರೂಪವೇ. ಆತನು ಈ ಎಲ್ಲ ಅವತಾರಗಳಲ್ಲಿ ಜನ್ಮವೆತ್ತಿ ತನ್ನ ದಿವ್ಯದರ್ಶನವನ್ನು ಜನತೆಗಿತ್ತು ಪವಿತ್ರರನ್ನಾಗಿ ಮಾಡುತ್ತಾನೆಂದು ಭಾವಿಸಿದರೆ ತಪ್ಪಾಗದು. ಆ ಅವತಾರಿಗಳಲ್ಲಿ ಶಿವಯೋಗಿ ಷಡಕ್ಷರರೂ ಒಬ್ಬರು. ಸಾಧನಾಮೂರ್ತಿಗಳು. ಕೀರ್ತಿಶರೀರಿಗಳು. ಶರಣ ಶ್ರೀ ಷಡಕ್ಷರರನ್ನು ದೇವರೆಂದು ಕರೆದರೆ ಅತಿಶಯೋಕ್ತಿಯ ಮಾತೆನಿಸದು. ಅವರನ್ನು ಸಾಕ್ಷಾತ್ ದೇವರೇ ಎಂದು ಕರೆಯದಿದ್ದರೂ ಪರಮಾತ್ಮನ ದಿವ್ಯಾಂಶದಿಂದ ಜನಿಸಿ ವಿಶ್ವಜ್ಯೋತಿಸ್ವರೂಪರಾಗಿ ಬಾಳಿ ಬೆಳಗಿದವರೆಂದು ನಾವು ಒಪ್ಪಲೇಬೇಕು. ಬಸವ ಅಲ್ಲಮರಂತೆ ಶಿವಯೋಗಿ ಷಡಕ್ಷರರು ಅವತರಿಸಿ ತಮ್ಮ ಅನುಭವವನ್ನು, ದಿವ್ಯಸಂದೇಶವನ್ನು ಜನತೆಗಾಗಿ ಬೀರಿದ್ದಾರೆ. ನವಸಂದೇಶವನ್ನು ಮಾನವನ ಜೀವನ ವಿಕಾಸಗೊಳ್ಳಲು, ವಿಕಾಸಗೊಂಡು ಸೌರಭಸೂಸಲು ಚಲುವಾಗಿ ಬಿತ್ತರಿಸಿದ್ದಾರೆ. ಅದನ್ನು ಅರಿತು ನಾವು ಬಾಳದೋಣಿಯಲ್ಲಿ ಹುಟ್ಟುಹಾಕಬೇಕು. ಇಲ್ಲದಿದ್ದಲ್ಲಿ ನಾವು ಬಾಳಿಬದುಕುವುದಕ್ಕೆ ಸಾರ್ಥಕವೇನು?

ಕೊನೆ

ಆದರ್ಶ ಮಹಿಮಾಪುರುಷರಾದ ತತ್ವವ ಬಲ್ಲ ಶರಣ ಶ್ರೀ ಶಿವಯೋಗಿ ಷಡಕ್ಷರರು ಧರ್ಮದೀವಿಗೆಯನ್ನು ಜಗದಲ್ಲಿ ಬೆಳಗಿ ದಿನಾಂಕ ೨೬-೮-೧೯೫೩ ನೇ ಬುಧವಾರ ಸಾಯಂಕಾಲ ಐದು ಘಂಟೆಯ

ಸಮಯದಲ್ಲಿ ಮಹಾಲಿಂಗೈಕ್ಯರಾದರು. ವೈರಾಗ್ಯಧ್ವಜವನ್ನು ಎತ್ತಿ ಅದರ ಕೀರ್ತಿಯನ್ನು ಬಿತ್ತಿದರು. ತಮ್ಮನುಭವವನ್ನು ಬೀರಿ ಅನುಭಾವಿಗಳಾದರು. ತುಂಬುಬಾಳಿನಿಂದ ಬದುಕಿದರು.

ಶಿವಯೋಗಿಗಳು ಆಚಾರಕ್ಕೆ ತವರ್ಮನೆಯಾಗಿದ್ದ ಸಿದ್ಧರಹಳ್ಳಿಯಲ್ಲಿ ಜನಿಸಿದವರು. ಅಂತೆಯೇ ಆಚಾರ್ಯರಾಗಿ ಬಾಳಿದವರು. ಇಂದಿನ ತೋಪಿನಮಠದ ಸ್ವಾಮಿಗಳವರು ಶ್ರೀ ನಿ|| ಪ್ರ|| ಸ್ವಾ|| ಇಮ್ಮಡಿ ವಿರೂಪಾಕ್ಷಸ್ವಾಮಿಗಳು. ಷಡಕ್ಷರರು ಲಿಂಗೈಕ್ಯರಾದ ನಂತರ ಮಠದ ಮಹಾಧ್ಯಕ್ಷರಪಂಕ್ತಿಯಲ್ಲಿ ಐದನೆಯವರಾಗಿ ಚುನಾಯಿತರಾಗಿದ್ದಾರೆ. ಇವರು ಇನ್ನೂ ಒಂಬತ್ತು ವರ್ಷದ ಬಾಲಕರು. ಇಂತಹ ಚಿಕ್ಕವಯಸ್ಸಿನ ಬಾಲಕನ ಕೈಗೆ ಕಾಸುಕೊಟ್ಟು ಪಟ್ಟಕಟ್ಟಿ ಮಠಾಧೀಶ್ವರರನ್ನಾಗಿ ಕೆಲವು ವ್ಯಕ್ತಿಗಳು ನಿಂತು ನೇಮಿಸಿದ್ದಾರೆ. ನಿಯಮಿಸುವ ಸಮಯದಲ್ಲಿ ಕಾರ್ಯಧುರೀಣರಂತೆ ವರ್ತಿಸಿ, ಮಠದ ಕೀರ್ತಿಗಾಗಿ, ಉನ್ನತಿಗಾಗಿ ಮೊದಲಿನಿಂದಲೂ ಶ್ರಮಿಸುತ್ತಿದ್ದ ಸಮಾಜ ಸೇವಕರಂತೆ ಒಂದೆರಡು ಘಳಿಗೆ ನಟಿಸಿ ಅಲ್ಪೋದ್ದೇಶಗಳಿಂದ ಚಿಕ್ಕವಯಸ್ಸಿನ, ಏನೂ ಅರಿಯದ ಬಾಲಕನನ್ನು ಮಠಾಧಿಪತಿಯನ್ನಾಗಿ ನಿಯಮಿಸಿರುವುದು ತುಂಬಾ ಶೋಚನೀಯ. ಆ ಮಗುವೂ ತಾನೆ ಏನುಮಾಡೀತು? ವಿರಕ್ತಾಶ್ರಮದ ಧರ್ಮ, ರೀತಿ, ನೀತಿಗಳು ಆ ಮಗುವಿಗೇನು ತಿಳಿದಿದೆ? ಮಠವೆಂದರೆ ಸಾರ್ವಜನಿಕ ನಿಲಯ. ಮಠದ ವಿಚಾರದಲ್ಲಿ ಯಾವ ಕಾರ್ಯವನ್ನು ನಡೆಸಬೇಕಾದರೂ ವೀರಶೈವ ಸಮಾಜದಿಂದ ಅಪ್ಪಣೆ ಪಡೆಯಬೇಕು. ಹಾಗೆ ಮಾಡದೆ ಕೆಲವು ವ್ಯಕ್ತಿಗಳು ಮಾತ್ರ ಸೇರಿ ಸಮಾಜಕ್ಕೆ ತಿಳಿಯದಂತೆ ಎಳೆ ವಯಸ್ಸಿನ ಬಾಲಕನನ್ನು ಮಠಾಧೀಶ್ವರರನ್ನಾಗಿ ಮಾಡಿರುವುದು ಮಠದ ಕೀರ್ತಿಗೆ ಧಕ್ಕೆತರುವಂಥದು. ಮಠದ ಅವನತಿಗೆ ಕಾರಣವಾದುದು. ಇದರಿಂದ ತಮ್ಮ ಸಮಾಜದ ಕೀಳು"ನಡೆ-ನುಡಿಗಳನ್ನು ತಾವೇ ಎತ್ತಿ ತೋರಿಸಿದಂತಾಗುತ್ತದೆ. ಅನೈಕಮತ್ಯವನ್ನು ಬೆಳಸಿದಂತಾಗುತ್ತದೆ. ಈ ವಿಚಾರದಲ್ಲಿ ನಿಯಮಿಸಿದವರು ಗಮನವಿಟ್ಟು ಮಠದ ಉನ್ನತಿಗೆ ಮುಂದೇನು ಕಾರ್ಯಕ್ರಮ ಕೈಗೊಳ್ಳಬೇಕೆಂದು ಯೋಚಿಸಿ ಕಾರ್ಯ ಸಫಲಗೊಳಿಸಿದರೆ ಒಳಿತು. ಏನೂ ಅರಿಯದ ಒಂಬತ್ತು ವರ್ಷದ ಬಾಲಕನ ಕೈಗೆ ಕಾಸುಕೊಟ್ಟು ಪಟ್ಟಕಟ್ಟಿ ಮಠದ ಅಧಿಪತಿಯನ್ನಾಗಿ ಯಾರು ಯಾರು ಆತುರರಾಗಿ ಹರುಷ

ದಿಂದ ನೇಮಿಸಿದರೋ, ಅವರು ಆ ಬಾಲಕರಾದ ಸ್ವಾಮಿಜಿಯವರ ಸುಗಮಜೀವನದ ಕಾರ್ಯಭಾರವನ್ನು ಹೊತ್ತಿಕೊಳ್ಳಬೇಕು. ಅವರನ್ನು ವಿದ್ಯಾವಂತರನ್ನಾಗಿಯೂ, ಯಶಸ್ಸುಗಳಿಸುವಂತೆಯೂ ಮಾಡುವ ಕಾರ್ಯ ನೇಮಿಸಿದವರದು. ನಿಯಮಿಸಿದ ವ್ಯಕ್ತಿಗಳು ಇದನ್ನು ಮರೆತು ನಡೆದಲ್ಲಿ ಅವರು ಮಠದ ಅವನತಿಗೆ ಕಾರಣಪುರುಷರಾದಂತೆ. ಕರ್ತವ್ಯಭ್ರಷ್ಟ ರಾದಂತೆ. ಈ ಮಾತಿನಲ್ಲಿ ಸಂಶಯವೇ ಇಲ್ಲ. ಈ ವಿಚಾರದಲ್ಲಿ ಲೇಖಕ ಹೆಚ್ಚಾಗಿ ತಿಳಿಸಬಯಸುವುದಿಲ್ಲ. ಮಿಂಚಿಹೋದಕಾರ್ಯಕ್ಕೆ ಚಿಂತಿಸಿ ಫಲ ವಿಲ್ಲ. ಬಾಲಕರಾದ ಶ್ರೀ ನಿ|| ಪ್ರ|| ಸ್ವ|| ಗಳಾದ ಇಮ್ಮಡಿ ವಿರೂಪಾಕ್ಷ ಮಹಾಸ್ವಾಮಿಗಳವರು ಪೂರ್ಣ ವಿದ್ಯಾವಂತರಾಗಿ, ಆದರ್ಶಪುರುಷರಾಗಿ ಬಾಳುವಂತೆ ಪರಮಾತ್ಮನು ಅನುಗ್ರಹಿಸಲಿ. ಯೋಗಿ ಷಡಕ್ಷರರಂತೆ ಜನತೆಯ ಹೃದಯವನ್ನು ಆಕರ್ಷಿಸಿ ಅವರಿಗಾಗಿ ತಮ್ಮನುಭವವೆಂಬ ಜೇನುಧಾರೆಯನ್ನೆರೆಯಲಿ. ಪರಿಮಳ ಕಂಪನು ಚಲ್ಲಲಿ. ಸೌಗಂಧವನು ಸೂಸಲಿ! ಎಂದು ನಾವು ಹಾರೈಸುವೆವು.

*   *   *   *   *

ಸ್ವಾಮಿಜಿಯವರು ಕರ್ತವ್ಯನಿಷ್ಠರು. ಲಿಂಗೈಕ್ಯರಾಗುವವೇಳೆಗೆ ಪೀಠವನ್ನಲಂಕರಿಸಿ ಐವತ್ತಾರು ವರ್ಷಗಳಾಗಿತ್ತು. ಅದೇ ಕಾಲಕ್ಕೆ ವಯಸ್ಸು ಎಂಬತ್ತಾರು ಮೀರಿತ್ತು. ೫೬ ವರ್ಷಗಳು ಮಠಾಧಿಪತಿ ಗಳಾಗಿ ಬಾಳಿದ ಷಡಕ್ಷರರನ್ನು ಮೈಸೂರಿನ ವೀರಶೈವ ಜನಾಂಗವೇ ಸರಿಯಾಗಿ ಅರಿತಿಲ್ಲ. ಅವರ ಮಠ ಭವ್ಯಕಟ್ಟಡವಲ್ಲ. ರಮ್ಯಮಂದಿರವಲ್ಲ. ಸ್ವಾಮಿಜಿಯವರ ನಿಲುವು 'ಭಾವದ ಮರೆಯ ಬ್ರಹ್ಮವಾಗಿಪ್ಪ ಮಲ್ಲಿ ಕಾರ್ಜುನನಂತೆ' ಎಂಬ ಅಕ್ಕನವಚನದ ಭವ್ಯತೆಯ ಚಲುವಿನಲ್ಲಿದೆ. ಹೀಗೆ ಚಲುವಿನ ನಿಲುವಿನಲ್ಲಡಗಿರುವ ಪೂಜ್ಯಸ್ವಾಮಿಗಳವರ ಅಂತ ರಂಗವನ್ನು ಜನತೆ ಅರಿಯಬೇಕು. ಸ್ವಾಮಿಜಿಯವರು ಜೀವಂತರಾಗಿರು ವಾಗ ಅವರ ಹಿರಿತನವನ್ನು; ಅನುಭವದ ತತ್ವಗಳನ್ನು ಜನತೆ ಗ್ರಹಿಸಿ ಬಾಳತೊಡಗಲಿಲ್ಲ. ಅವರ ಒಳಬಾಳಿನ ಸೊಗಸನ್ನು ಸ್ವಾದಿಸುವ ರಸಜ್ಞ ರಾಗಲಿಲ್ಲ; ಆಧ್ಯಾತ್ಮವ್ಯಕ್ತಿಗಳಾಗಲಿಲ್ಲ. ಆದಕಾರಣ ಷಡಕ್ಷರರನ್ನು ಕುರಿತು ಒಂದು ಗ್ರಂಥಪ್ರಶಸ್ತಿ ಬೇಗ ಹೊರಡಬೇಕಾದುದು ಅತ್ಯಗತ್ಯ. ಬಾಳಿನ ಏಳ್ಗೆಗೆ ಹಾದಿ; ಏಳ್ಗೆಯ ಹಾದಿಗೆ ಬೆಳಕು. ಆ ಕೃತಿಯಿಂದ ಮನೆ ಮನೆಯ ಜ್ಯೋತಿಯ ಪ್ರಕಾಶ ಮಿಗಿಲಾಗಬೇಕು. ಸ್ವಪ್ರಕಾಶತೆ

ಯನ್ನು ಹೊಂದಿ ಪ್ರಕಾಶಿಸಬೇಕು. ಅಂದೇ ಸ್ವಾಮಿಾಜಿಯವರ ಬದುಕಿನ ಸಾರ್ಥಕ್ಯ ಮತ್ತು ಸಾಮರಸ್ಯ. ಷಡಕ್ಷರರ ಬಾಳು ರಸಭರಿತ ಹಣ್ಣಿನಂತೆ. ಆ ಹಣ್ಣಿನ ರಸದ ಸವಿಯನ್ನು ಕಂಡುಂಡವರು ನಿಜವಾಗಲೂ ಧನ್ಯರು.

ದಿವಂಗತ ಸ್ವಾಮಿಾಜಿ............ನಮ್ಮೂರ ಬಾಪೂಜಿ. ನಮ್ಮೂರ ಸ್ವಾಮಿಾಜಿ ಖ್ಯಾತಿಗಾಗಿ ಬಯಸಿದವರಲ್ಲ. ಪರಮಾತ್ಮನೆಂಬ ಜ್ಯೋತಿಗಾಗಿ ಬಯಸಿದವರು. ಎಲ್ಲ ಮಹಾತ್ಮರೂ ಈ ಮಾರ್ಗದಲ್ಲಿ ನಡೆದು–ನುಡಿಯಬೇಕು. ಆಗ ನಮ್ಮ ನಾಡು............ರಸಋಷಿಗಳ ಬೀಡು. ರಮ್ಯತೆಯ ನೆಲೆವೀಡು. ಹೆಸರಿಗೂ ಕರುನಾಡು.

ಜೀವನದಲ್ಲಿ ಮಾತೆಯ ಸ್ಥಾನ

ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣುಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು.

ನಮ್ಮನ್ನು ಹಡೆದವರಾರು? ಪ್ರೇಮದಿಂದ ಸಲಹಿದವರಾರು? ಹಾಲು ಕೊಟ್ಟು ಬೆಳಸಿದವರಾರು? ಒಬ್ಬ ಸಾಮಾನ್ಯ ಸ್ತ್ರೀ. ಆಕೆಯೇ ಮಾತೆ. ಆಕೆಗೆ 'ಮಾತೆ' ಎಂದು ಹೆಸರಿರುವುದು ಉಚಿತವೂ, ಮನೋಜ್ಞವೂ ಆಗಿದೆ. ಅದರಲ್ಲಿ ಎರಡೇ ಅಕ್ಷರಗಳಿರುವುದಾದರೂ ಚಿತ್ತಕ್ಕೆ ಬಲು ಅಕ್ಕರೆ. ಈ ಹೆಸರು ಬಾಳಿನಲ್ಲಿ ನೊಂದಜೀವಿಗೂ ಸಂಜೀವನ; ಪರಮ ಪಾವನ.

ಬಾಳುವೆಯಲ್ಲಿ ಪತಿಗಿಂತಲೂ ಹೆಚ್ಚಿನದಾದ ಕಾರ್ಯನಿರ್ವಹಣೆ, ಜವಾಬ್ದಾರಿಯುತ ಕಾರ್ಯಗಳು ಸತಿಯ ಪಾಲಿಗೆ ವಿಾಸಲಾಗಿದೆ. ಅಂದರೆ ಸತಿಯ ಸ್ಥಾನವೇ ಜೀವನದಲ್ಲಿ ಪ್ರಾಮುಖ್ಯವಾದುದೆಂದಲ್ಲ.

ಸತಿಪತಿಯರೀರ್ವರ ಸ್ಥಾನವೂ ಜೀವನದಲ್ಲಿ ಒಂದನ್ನೊಂದು ಬಿಟ್ಟಿರಲಾಗದು. ಹಕ್ಕಿಯ ಎರಡು ರೆಕ್ಕೆಗಳಂತೆ; ದೋಣಿಯ ಎರಡು ಹುಟ್ಟುಗೋಲುಗಳಂತೆ; ಬಂಡಿಯ ಎರಡು ಚಕ್ರಗಳಂತೆ; ಅಥವಾ ವಾಕ್ ಮತ್ತು ಅರ್ಥದ (ಶಿವ-ಶಕ್ತಿ) ಸಮ್ಮಿಲನದಂತೆ ಸತಿಪತಿಯರ ಅನ್ಯೋನ್ಯತೆ, ಕಾರ್ಯವಿಚಕ್ಷಣತೆ, ಪ್ರೀತಿಬಂಧುರತೆ ಜೀವನದಲ್ಲಿ ಅಡಕವಾಗಿದೆ. ಜೀವನವೆಂಬುದು ಒಂದು ಅನುಭವರಂಗ; ವಿಶಾಲಹೃದಯರ ವಿಚಾರರಂಗ; ಸತಿಪತಿಯರ ಏಕೋಭಾವತರಂಗ. ಸತ್ಯ, ಶಾಂತಿ, ಪ್ರೇಮ, ಸೌಜನ್ಯಗಳೇ ಉತ್ತಮ ಜೀವನದ ಹೆಗ್ಗುರುತು. ಇವುಗಳೇ ಪ್ರಗತಿಯ ನಿಲುಮನೆಗಳು. ಜೀವನವು ಕಡುತರ ಸಾಧನೆಯಿಂದೊಡಗೂಡಿದ ಕಾಯಕ. ಅದು ಒಂದು ಸಾಧನಾಮಂದಿರ. ಅಲ್ಲಿ ಸಾಮರಸ್ಯದ ಪ್ರೇಮರಸವೇ ಚಲ್ಲಿದೆ. ಪ್ರೇಮವೆಂಬುದು ಮಾನವನ ಮನೋಲ್ಲಾಸದ ಮಧುರ ರಾಗ. ಬಾಳಪ್ರಗತಿಗೆ ಉದಯರಾಗ. ಪ್ರೇಮವು ಆಸೆಯ ಗಂಟು; ಮೋಹದ ಬಲೆ. ಪವಿತ್ರಪ್ರೇಮದಿಂದ ಜೀವನಕ್ಕೆ ಪೂರ್ಣಫಲಕಾರಿಯುಂಟು. ಪವಿತ್ರಪ್ರೇಮವನ್ನು ಹೊಂದಿದವನೇ ಅನುಭಾವಿ. ಪ್ರೇಮವೆಂದೊಡನೆ ಸತಿಪತಿಯರ ಪ್ರಣಯಭಾವದ ದೃಶ್ಯವೆಂದು ಭಾವಿಸುವುದು ತಪ್ಪು. ಪ್ರೇಮ, ಪ್ರೀತಿ, ಬಯಕೆ, ಮಮತೆ, ಅನುರಾಗ, ಮೋಹ, ಆಕಾಂಕ್ಷೆ, ಆಸೆ, ಹಂಬಲ: ಇವುಗಳೆಲ್ಲವೂ ಅರ್ಥದಲ್ಲಿ ಒಂದೇ. ಪದಪ್ರಯೋಗದಲ್ಲಿ ಭಾವಿಸುವವರಿಗೆ ಬೇರೆ ಬೇರೆ ಅರ್ಥವನ್ನು ಕಲ್ಪಿಸುವುದುಂಟು. ಪ್ರೇಮದಲ್ಲೂ ದಾಂಪತ್ಯ ಪ್ರೇಮ, ಮಾತೃಪ್ರೇಮ, ಭ್ರಾತೃಪ್ರೇಮ, ಮಿತ್ರಪ್ರೇಮ....ಎಂದು ಮುಂತಾದುವಿವೆ. ಅಂದರೆ ಪ್ರೇಮ ಎಂಬ ಹೆಸರು ಒಂದೇ ಆದರೂ ಆದರ ದೃಷ್ಟಿ ಹಲವು ಬಗೆಯಲ್ಲಿದೆ. ಭಾವ ಹಲವು ನೆಲೆಯಲ್ಲಿದೆ. ಪ್ರೇಮ, ಕಾಮಗಳೆರಡೂ ಮನುಷ್ಯ ಹುಟ್ಟಿದಂದಿನಿಂದಲೇ ಮೈಗೂಡಿ ಬೆಳೆಯುವ ರಸಗಳಾಗಿವೆ. ಆ ರಸವನ್ನಳವಡಿಸಿಕೊಂಡು ಧರ್ಮದಿಂದ ಬದುಕಿದರೆ ತಾನುತಾನಾಗಿಯೇ ಬಾಳು ಸಮರಸ ಹೊಂದುತ್ತದೆ. ಸರಸವಾಗುತ್ತದೆ. ಅಂದು ಬಾಳು ಏಕರಸದಾಂಗುಡಿಯ ಮಡಿಲು.

ಮಮತೆಯ ಮಾತೃಪ್ರೇಮದ ಮಹತ್ತನ್ನು ಮುಂದೆ ನೋಡೋಣ. ಎಷ್ಟು ಹೊತ್ತು ಸುದಾರಿಸಿದರೂ ಅಳುವನ್ನು ನಿಲ್ಲಿಸದಿರುವ ತುಂಟರು ಆಕೆಯ ಸಂತವ ನುಡಿಗಳಿಗೆ ತೃಪ್ತರಾಗಿ ಎದೆ

ಮಡಿಲಲ್ಲಿ ಹೋಗಿ ತಂಗುತ್ತಾರೆ. ಹಾಲುಕುಡಿದು ತೃಪ್ತರಾಗುತ್ತಾರೆ. ಆಕೆಯ ಮಧುರ ಸ್ತನ್ಯಪಾನದಿಂದ ಮಗುವಿನ ದೇಹಪುಷ್ಟಿ ಮಾತ್ರವೇ ಅಲ್ಲದೆ ದೈವಿಕವಾಗಿ ಆತ್ಮಪುಷ್ಟಿಯೂ ಉಂಟಾಗುತ್ತದೆ. ಅವಳ ಮುದ್ದಿನ ಪಾಲನೆಯಲ್ಲಿ ಜಗತ್ತಿನ ನೋವು, ಸಂಕಟ, ಬೇನೆ, ದುಃಖವೆಲ್ಲವನ್ನೂ ಮರೆತು ಅವ್ಯಕ್ತವಾದ ಆನಂದದಿಂದ ಮಗು ಬೆಳೆಯತೊಡಗುತ್ತದೆ. ಅರಿವನ್ನು ಹೊಂದಲು ಯತ್ನಿಸುತ್ತದೆ.

ಮಾತೆಯು ಮಗುವಿನೊಡನೆ ಮಗುವಾಗಿ ಅದರ ಪಾಲನೆಯೇ ತನ್ನ ಪಾಲನೆ, ಎಂದರಿತು ತನ್ನ ಮಕ್ಕಳನ್ನು ಬಹು ಜಾಣ್ಮೆಯಿಂದ ತುಂಬಿದ ಪ್ರೀತಿಯಿಂದ ಸಾಕುತ್ತಾಳೆ. ಸಲಹುತ್ತಾಳೆ. ಮಕ್ಕಳಿಗಾಗಿ ಮನಸಾರೆ ಹಾಡುವ ಮಾತೆಯ ಭಾವಗೀತೆಯಲ್ಲಿ ನಾದಬಿಂದು ಕಲೆಗಳಿವೆ; ಹೃದಯ ವೀಣೆಯ ಶ್ರುತಿಯಿದೆ. ಮಕ್ಕಳೇ ಮಾತೆಯ ಸಂಪತ್ತು. ಮಕ್ಕಳು ಬುದ್ಧಿವಂತರಾಗಿ, ಕೀರ್ತಿವಂತರಾಗಿ, ಆದರ್ಶರಾಗಿ ಬಾಳಲೆಂಬುದೇ ದೇವರಲ್ಲಿ ಮಾತೆಯ ಪ್ರಾರ್ಥನೆ. ಅದೇ ಆಕೆ ತನ್ನ ಮಕ್ಕಳಿಗೆ ಕೊಡುವ ಸಂಪತ್ತಿನ ಗಂಟು. ಶುಭಾಶೀರ್ವಾದ. ಭವ್ಯ ಭವಿಷ್ಯದ ದಿವ್ಯಪೀಠ.

ಅನುಭವರಂಗವೆಂಬ ಈ ಜೀವನದಲ್ಲಿ ತಂದೆಗಿಂತಲೂ ತಾಯಿಯ ಪಾತ್ರವೇ ಪ್ರಾಮುಖ್ಯವಾಗಿದೆ. ವಿವೇಚನೆಯ ಪೂರ್ಣದೃಷ್ಟಿಯಿಂದಲೂ ಮಾತೆಯೇ ಬಾಳಿಗೆ ಸುಭದ್ರ ತಳಹದಿ. ಪತಿಯೇ ತನ್ನ ಸರ್ವಸ್ವವೆಂದರಿತಿರುವ ಆಕೆಯ ಸೇವಾನಿಷ್ಠೆಯು ಪಾತಿವ್ರತ್ಯದ ಹಿರಿಮೆ. ಮಾತೆಯು ತನ್ನ ಪತಿಸೇವೆಯಲ್ಲಿ ಪವಿತ್ರ ಪ್ರೇಮವೆಂಬ ಜ್ಯೋತಿಯಿಂದ ಮನೆಯನ್ನು ಬೆಳಗಿಸುತ್ತಾಳೆ. ಅಷ್ಟೇಕೆ ಎಲ್ಲರ ಮನವನ್ನೂ ಬೆಳಗಿಸುತ್ತಾಳೆ. ಪತಿಯ ಹೃದಯವನ್ನು ತನ್ನ ಪವಿತ್ರ ಪ್ರೇಮಾನುರಾಗದಿಂದ ಆಕರ್ಶಿಸಿ ಧನ್ಯಳಾಗುತ್ತಾಳೆ. ಆಕೆ ಜನಿಸಿದುದೆಲ್ಲೋ; ಬಾಳು ನಡೆಸುವುದು ಯಾವ ನೆಲೆಯಲ್ಲೋ. ಹುಟ್ಟದೂರನ್ನೂ ತ್ಯಜಿಸದೆ, ಕೈಹಿಡಿದ ಬಾಳನೆಲೆಯನ್ನೂ ಕೈಬಿಡದೆ ಬಾಳುವ ಆಕೆ ವಿದ್ಯಾವಂತಳಲ್ಲದಿದ್ದರೂ ಆತ್ಮಾನುಭಾವಿ. ಎಲ್ಲ ಕಲೆಗಳನ್ನರಿಯದಿದ್ದರೂ ವಿನಯಶೀಲೆ; ಕಲಾವಿದೆ; ಕಾರ್ಯನಿರ್ವಾಹಕಿ. ಆದರೂ ಸ್ತ್ರೀ ತನ್ನ ಬಾಳಿನಲ್ಲಿಯೇ ಹೆಚ್ಚು ಸ್ವಾತಂತ್ರ್ಯ ಪಡೆದಿಲ್ಲ. ಮತ್ತಿನ್ನು ಸಮಾಜದಲ್ಲೆಲ್ಲಿ! ಪುರುಷರೊಡನೆ ಸದ್ವಿಷಯದಲ್ಲಿ ಚರ್ಚೆಮಾಡಿ ನಿಜಾಂಶವರಿತು ಸ್ವತಂತ್ರರಾಗಿ

ಕಲೆತು ಬಾಳುವ ಸಂಘಟನೆ ಎಲ್ಲ ಸ್ತ್ರೀಯರಿಗೂ ದೊರಕದ ಮಾತಾಗಿದೆ. ತನ್ನ ಪಾಲಿಗೆ ಬಂದ ಪುಟ್ಟ ಗೃಹದಲ್ಲಿಯೇ ಅವಳ ಅಲ್ಪ ಸ್ವಾತಂತ್ರ್ಯ-ಆಡಳಿತ-ಚರ್ಚಾಕೂಟ ಇವುಗಳೆಲ್ಲ ಆಗಿ ಹೋಗಿದೆ. ಸತಿಯು ಪತಿಸೇವೆಗಾಗಿ ಸಿದ್ಧಳಿರಲೇಬೇಕು. ಆದರೆ ಆಕೆಯನ್ನು ಕೇವಲ ದಾಸಿಯಂತೆ ತಿರಸ್ಕಾರದಿಂದ ನೋಡಿದಾಗ ಮತ್ತು ಒಂದು ಕಾಲಿನಿಂದ ಒದೆದದ್ದೇ ಆದರೆ ಮತ್ತೊಂದು ಕಾಲನ್ನು ಹಿಡಿದುಕೊಳ್ಳಬೇಕೆಂಬುದು ಅಷ್ಟೇನೂ ವಿಚಾರಪೂರ್ಣವಾದುದಲ್ಲ. ಹಾಗೂ ಸ್ತ್ರೀ ತನ್ನ ಅಬಲತನದಿಂದ ಮತ್ತೊಂದು ಕಾಲನ್ನು ಹಿಡಿದುಕೊಂಡರೂ ಅದು ಪುರುಷನಿಗೆ ಗೌರವಪ್ರಾಯವೂ ಅಲ್ಲ. ಅನೇಕ ಸ್ತ್ರೀಯರು ಸಂಗೀತದಲ್ಲಿ ಕುಶಲರಾಗಿ, ಕಲೆಯಲ್ಲಿ ನುರಿತು ಕಲಾಸುಂದರಿಯರಾಗಿ, ನಾಟ್ಯದಲ್ಲಿ ಮನಮೋಹಕ ನರ್ತಕಿಯರೆನಿಸಿ, ವಿದ್ಯೆಯಲ್ಲಿ ಪೂರ್ಣ ಅನುಭವವನ್ನು ಹೊಂದಿದ್ದರೂ ಅವರು ಕೈಹಿಡಿಯುವ ಪತಿಯು ತಮ್ಮ ಕಲೆಯು ಮುಂದುವರಿಯಲು ಪ್ರೋತ್ಸಾಹ ಕೊಡದೆ ಅಡ್ಡಿ ಬಂದರೆ ಅವರಲ್ಲಿದ್ದ ಆಸಕ್ತಿ-ಗುರಿ-ಬಯಕೆ-ಎಲ್ಲವೂ ಮಣ್ಣುಪಾಲಲ್ಲವೇ? ಚಿಕ್ಕತನದಿಂದ ಕಲಿಯಲು ದುಡಿದಿದ್ದ ಸಾಹಸದ ಫಲ ಇದುವೇ? ಆಗ ಆ ಮಹಿಳೆಯ ಪರಿಸ್ಥಿತಿ ಎಂತಹುದು? ಹೆಣ್ಣಿನ ಬಾಳು ಕಣ್ಣೀರಲ್ಲವೇ? ಆಕೆಯ ಬಾಳು ಗೋಳಲ್ಲದೆ ಮತ್ತೇನು?

ಇಷ್ಟೆಲ್ಲ ತೊಂದರೆಗಳನ್ನು ಕೊಡುವುದಲ್ಲದೆ ಪುರುಷನು ಹೆಣ್ಣನ್ನು 'ಮಾಯೆ' ಎಂದಿರುವುದು ಸರಿಯೇ? "ಹೊನ್ನು, ಹೆಣ್ಣು, ಮಣ್ಣು ಮಾಯೆಯಲ್ಲ. ಮನದ ಮುಂದಣಾಸೆಯೇ ಮಾಯೆ" ಎಂಬ ಹಿರಿಯರ ನುಡಿಯನ್ನು ಈ ತೆರನ ಭ್ರಮೆಯುಳ್ಳ ಪುರುಷರು ಗಮನಿಸುವುದು ಅವಶ್ಯವು. ಈ ಜೀವನವು ಬೇಡವಾದ ಕ್ಷಣಿಕ ಆಸೆ-ಆಕಾಂಕ್ಷೆಗಳಿಗಾಗಿ ಬಯಸಿ ಕೊರಗುವುದು ಬೇಡ. ಬಾಳ ಪವಿತ್ರತೆಗಾಗಿ ಜೀವನವಿಕಾಸಕ್ಕಾಗಿ; ಶಾಶ್ವತ ಸುಖಕ್ಕಾಗಿ ಬೇಕಾದ ಆಸೆ-ಆಕಾಂಕ್ಷೆಗಳನ್ನು ಕುರಿತು ಬಯಸಲಿ. ಪೂರ್ಣಫಲವನ್ನು ಪಡೆಯಲು ಬಯಸಿದ ಆ ಉದಾತ್ತ ಧ್ಯೇಯದಿಂದ ತಪಸ್ಸನ್ನಾಚರಿಸಿ ಫಲಾಪೇಕ್ಷೆಗಳನ್ನು ಪಡೆಯಲಿ. ಅಂದು ಸತಿಪತಿಗಳೀರ್ವರ ಜೀವನದಲ್ಲಿ ಧರ್ಮ ಮತ್ತು ತಪೋಜೀವನಗಳೆರಡರ ಸಲ್ಲಕ್ಷಣ ಮತ್ತು ಭಾವವೈವಿಧ್ಯಗಳು ಮಿಂಚಿ ಪ್ರಕಾಶಿಸುತ್ತವೆ. ಅವುಗಳ ಪ್ರಕಾಶ ಅಮರಜ್ಯೋತಿಯಾಗಿ

ಪರಿಣಮಿಸಿ ಅವರ ಜೀವನವು ಆದರ್ಶವೆನಿಸುತ್ತದೆ. ಆಗತಾನೇ ಅವರ ಆತ್ಮ ಆತ್ಮಮಥನಿಸಿ ಉಂಟಾದ ಅನುಭಾವ ಜ್ಯೋತಿಯ ಬೆಳಕು ಎಲ್ಲೆಡೆ ಚೆಲ್ಲುತ್ತದೆ. ಬಾಳೆಂಬುದು ಕೀಳಲ್ಲ; ಗೋಳಲ್ಲ. ಅದು ಒಂದು ದಿವ್ಯ ಶಕ್ತಿ; ಅಪೂರ್ವ ತೇಜಸ್ಸು ಎಂಬುದನ್ನು ತೋರ್ಪಡಿಸುತ್ತದೆ. ಈ ಮರ್ಮವನ್ನರಿಯದೆ ಬಾಳು ಕೀಳೆಂದು ಭಾವಿಸುವುದು ತಪ್ಪು. ಪೂಜ್ಯಳಾದ ಸ್ತ್ರೀಯನ್ನು ದೂರುವುದು ಮತ್ತೊಂದು ಹಿರಿಯ ತಪ್ಪು. ಆಕೆಯಿಂದಲ್ಲವೇ ನಾವಿಂದು ಹಿರಿಯರಾಗಿರುವುದು? ಆ ಮಹಾಮಾತೆಯನ್ನು (Great Mother) ಮರೆಯುವುದೆಲ್ಲಿ! ಬೀಳುಗಳೆವುದೆಲ್ಲಿ? ಮಾತೆಯ ಭಾವಗೀತೆ*ಯನ್ನು ಆಲಿಸದವರೂ ಇರುವರೇ? ಆ ಗೀತೆಯ ಮಾಧುರ್ಯತೆಯಲ್ಲಿ ತನ್ಮಯರಾಗದವರೂ ಇರುವರೇ? ಆ ತನ್ಮಯತೆಯಲ್ಲಿ ಆತ್ಮಾನಂದದ ಸ್ವಪ್ರಕಾಶತೆಯಿದೆ. ಶಾಂತಿನೆಲೆಯ ಹೊಂಬೆಳಕಿದೆ. ಮಾತೆಯ ಪ್ರೇಮರಸವೇ ತುಂಬಿದೆ. ಇಂದಿಗೂ ನಮ್ಮನ್ನು ಒಂದು ನೆಲೆಯಲ್ಲಿ ನಿಲ್ಲುವಂತೆ ಕಲ್ಪಿಸಿದೆ. ಅಪೂರ್ವ ಶಕ್ತಿ ತಂದೀಯಿದ್ದದೆ. ಹೀಗೆ ಬಾಳ ಶ್ರೇಯಸ್ಸಿಗಾಗಿಯೇ ದುಡಿಯುವ ಸ್ತ್ರೀಯನ್ನು ದಾಸಿಯೆಂದು ಕಡೆಗಣಿಸುವುದು ಸರಿಯಲ್ಲ. ಹಾಗಾದರೆ ಹೆಣ್ಣೆಂದು ಬೀಳುಗಳೆವವರೇ ಏಕೆ ಹೆಣ್ಣಿಗಾಗಿ ಕಾತುರಪಡುವರು? ಅವಳಿಗಾಗಿ ಏಕೆ ಹಲುಬಿ ಹಂಬಲಿಸುವರು? ಕೊರಗಿ ಕೃಶರಾಗುವರು? ಹೆಣ್ಣು ಕೆಳಮಟ್ಟದುದಲ್ಲ. ಪೂಜ್ಯತೆಯದು: ಹೆಚ್ಚಿನ ಸನ್ಮಾನ್ಯತೆಯದು. ಆ ಹೆಣ್ಣಿನೊಡನೆ ಧರ್ಮವರಿತು ಬಾಳಬೇಕಾದ ಕರ್ತವ್ಯ ಗಂಡಿನಲ್ಲಿದೆ. ಸತಿಪತಿಯರೀರ್ವರ ಕರ್ತವ್ಯನಿಷ್ಠೆಯಿಂದ, ಸಮರಸ ಭಕ್ತಿಯಿಂದ, ಹೃದಯಸಮಾನತೆಯ ಏಕೀಭಾವದಿಂದ; ಜೀವನವು ಸುಖಮಯ ಎಂಬ ನುಡಿಯ ಅರ್ಥ ಸುವ್ಯಕ್ತವಾಗುತ್ತದೆ. ಅದುವರೆಗೂ ಕೀಳುಜನರ ಭಾವನಾಪ್ರಪಂಚದಲ್ಲಿ ಬಾಳು-ಕೀಳೇ ಆಗಿರುತ್ತದೆ.

ಅಂತೂ ಜೀವನದಲ್ಲಿ ಮಾತೆಯ ಸ್ಥಾನ ಗಮ್ಯವೂ ಹೌದು. ರಮ್ಯವೂ ಹೌದು. ಆಕೆಯಿಂದಲೇ ಬಾಳು; ಬಾಳಿನಿಂದ ಆಕೆಯಲ್ಲ. ಹೆಣ್ಣೇ ಬಾಳಿನ ಕಣ್ಣು, ಒಲುಮೆಯ ಹೊನ್ನು, ಕಾಯದ ಸಿರಿವೆಣ್ಣು ಎಂದು ಹೇಳಿ ದನಿಗೂಡಿಸಿ ಈ ಪುಟ್ಟ ಲೇಖನವನ್ನು ಮುಗಿಸೋಣ.

---

* ಜೋಗುಳ

ಬಾಳುವೆಯ ಗುರಿ

ಬಾಳು ಎಂದರೇನು ? ಬಾಳುವೆಯ ಗುರಿಯೇನು ? ಎಂದು ವಿಮರ್ಶಿಸಿ ವಿಚಾರಶೀಲನಾಗಬೇಕಾದ ಆವಶ್ಯಕತೆ ಮಾನವನದು. ಜತೆಗೆ ನೀತಿವಂತರಾಗುವುದು ಆಧ್ಯಾತ್ಮಿಗಳ ಲಕ್ಷಣ. ಬಾಳುವೆಯು ರಸ ಸ್ವರೂಪನ ನಿವಾಸಸ್ಥಾನ. ಅದು ಪ್ರೇಮ ಕಾಮಗಳ, ಕರ್ಮ ಧರ್ಮಗಳ, ಧ್ಯೇಯಸಾಧನೆಗಳ ಅನುಭವದ ರಂಗಭೂಮಿ. ಇಲ್ಲಿ ಸುಖದುಃಖಗಳು, ಸೋಲುಗೆಲುವುಗಳು, ಏಳುಬೀಳುಗಳು ಸಮ್ಮಿಲನ ವಾಗಿವೆ. ಸತಿಪತಿಯರ ಪೂರ್ಣ ಹೃದಯಗಳು ಒಮ್ಮೆಲೆ ಕಲೆತಿವೆ. ಚಲುವಿನ ಮಕ್ಕಳು ಬಾಳನ್ನು ಆನಂದಜೀವನವನ್ನಾಗಿ ರೂಪಿಸಿವೆ. ವಿಶ್ವಜೀವನದಂತೆ ಮಾರ್ಪಡಿಸಿವೆ.

ಪ್ರತಿಯೊಬ್ಬ ಮಾನವನ ಬಾಳುವೆಗೂ ಒಂದು ಗುರಿಯಿದೆ. ಗಮ್ಯವಾದ ನಿಲುವಿದೆ. ಹುಟ್ಟುಸಾವುಗಳಿಂದ ಬಿಡುಗಡೆ ಹೊಂದುವುದೇ ಮಾನವ ಬಾಳ್ವೆಯ ಗುರಿ.[1] ಬಾಳುವೆಯ ಗುರಿಯಿಂದಲೇ ಮಾನವನ ಧ್ಯೇಯ ಪರಿಪೂರ್ಣತೆಯನ್ನು ಪಡೆಯಬಲ್ಲುದು ; ಸಂಕಲ್ಪಸಿದ್ಧಿ ಸ ಬಲ್ಲುದು. ಕೌಟುಂಬಿಕ ಜೀವನದಲ್ಲಿಯಾದರೂ ಧ್ಯೇಯಸಿದ್ಧಿ ಪಡೆಯಲು ಆತ್ಮಸಾಧನೆಯನ್ನು ಅಂಗೀಕರಿಸಬೇಕು. ಸತಿಪತಿಯರು ನಿರ್ಮಲ ಹೃದಯಿಗಳಾಗಿ, ನಿರ್ವ್ಯಾಜಪ್ರೇಮಿಗಳಾಗಿ, ಅನುಪಮಜೀವಿಗಳಾಗಿ ಬಾಳಲು ತೊಡಗುವುದೇ ಆತ್ಮಸಾಧನೆಗೆ ಅಂಕುರಾರ್ಪಣ. ಅದುವೇ ಜೀವನದ ಮಂಗಳಕಿರಣ ; ಸೌಭಾಗ್ಯಸಮಾರಣ. ಇಂತಹ ರನ್ನದೀಪ್ತಿಯು ಮಾನವನ ಹೃದಯವನ್ನು ಹೊಕ್ಕು, ಬೆಳಕು ನೀಡ ಬೇಕಾದರೆ ಮಾನಸಿಕ-ಸಂಸ್ಕರಣವಾಗಬೇಕು. ಚಂಚಲಸ್ವಭಾವದ ಮನಸ್ಸನ್ನು ವಿವೇಚನಾದೃಷ್ಟಿಯಿಂದ ತನ್ನತ್ತ ಸೆಳೆಯಬೆಕು. ಆದರೆ ಮನಸ್ಸು ಮಾನವನ ಹಿಡಿತಕ್ಕೆ ಬೇಗ ದೊರಕುವ ವಸ್ತುವಲ್ಲ. ಎಲ್ಲ ಪ್ರೇಮಾನುರಾಗಗಳ ಉತ್ಪಾದನೆಯ ಕೇಂದ್ರಸ್ಥಾನವಾದ ಮನಸ್ಸು ಸುಖಾಪೇಕ್ಷಿ. ಅದು ತನಗೆ ಬೇಕಾದುದನ್ನೆಲ್ಲ ಆಶಿಸುತ್ತದೆ ; ತನ್ನಿಚ್ಛೆ ಬಂದಂತೆ ವರ್ತಿಸುತ್ತದೆ. ಸಮಯದಲ್ಲಿ ಒಳಿತಾವುದು, ಕೆಟ್ಟದಾವುದು

---

1 ಪಾರಮಾರ್ಥಿಕ ದೃಷ್ಟಿಯಿಂದ ವಿಚಾರಿಸಿದೆ.

ಎಂದು ಆಲೋಚಿಸಿ ಸಿಯುವುವನ್ನು ನಿರೂಪಿಸುವ ಸಾಮರ್ಥ್ಯವು ಮನಸ್ಸಿಗಿದ್ದರೂ ವಿಮರ್ಶಿಸದೆ ಅಲ್ಪ ಸುಖಗಳಿಗಾಗಿ ಹಾತೊರೆಯು ವುದು ಸಹಜಸ್ವಭಾವ. ಮಾನವನು ಮನಸ್ಸಿನ ಕಾರ್ಯವನ್ನು ಬಿಗಿ ಹಿಡಿಯುವುದು ಕಷ್ಟತರವಾದರೂ ಸಾಧನೆಯಿಂದ ಕಷ್ಟತರವಲ್ಲ. ಆದರೆ ಸಾಧಿಸುವ ಜ್ಞಾನಮಾರ್ಗಗಳು ಮಾನವನಿಗೆ ಗೋಚರಿಸುವುದೇ ಅವಶ್ಯವಾದುದು. ಸಾಧನಾ ಜ್ಞಾನಮಾರ್ಗವನ್ನು ಪಡೆದ ಮಾನವನು ಅಂದು ಸ್ವೇಚ್ಛಾವರ್ತಿಯಾದ ಮನಸ್ಸನ್ನು ಒಳ್ಳೆಯ ಹಾದಿಯೆಡೆಗೆ ಕೇಂದ್ರೀಕರಿಸುವ ಶಕ್ತಿ ಪಡೆದಂತೆಯೇ ಸರಿ. ಮಾನಸಿಕ–ಸಂಸ್ಕರಣ ವಾಗಲು ಪೂರ್ವಜನ್ಮದಲ್ಲಿಯೂ ಸಂಸ್ಕಾರಯುತನಾಗಿರಬೇಕು. ಇಲ್ಲವೇ ಇಂದಾದರೂ (ಪ್ರಕೃತಬಾಳುವೆಯಲ್ಲಿ) ಸಂಸ್ಕಾರಬಲವನ್ನು ಹೊಂದಲು ಸಾಧನೆ ಕೈಗೊಳ್ಳಬೇಕು. ಮಾನಸಿಕ ಸಂಸ್ಕರಣವಾಗದೆ ಅಂತಃ ಶಕ್ತಿ ಒಡಮೂಡುವುದಿಲ್ಲ. ಚಿನ್ನವು ಪುಟಗೊಂಡು ತನ್ನ ಕೊಳೆಯನ್ನು ದೂರೀಕರಿಸಿ ಪರಿಶುದ್ಧವಾಗುವಂತೆ ಮನಸ್ಸು ಭಕ್ತಿಯಿಂದ ಪರಿಶುದ್ಧಿ ಹೊಂದುವುದೇ ಮಾನಸಿಕ ಸಂಸ್ಕರಣ. ಅಂದು ಮನಸ್ಸು ಚಿನ್ನದಂತೆ ಕೊಳೆಯನ್ನು ಕಳೆದುಕೊಂಡು ಕಳೆಯನ್ನು ಪಡೆಯುತ್ತದೆ. ಭಕ್ತಿ, ವಿಶ್ವಾಸ, ಪ್ರೇಮ, ಶಾಂತಿ, ದಾನ, ಧರ್ಮಗಳನ್ನು ಜನತೆಗಾಗಿ ನೀಡಲು ನಿಲ್ಲುತ್ತದೆ. ವಿಶಾಲಭಾವ ಅಂಕುರಿಸುತ್ತದೆ. ಸಮತಾಭಾವ ತಾನಾಗಿ ಬೆಳೆಯುತ್ತದೆ. ಅನುಭಾವದಿಂದ ಹೃದಯ ಹದುಳಗೊಳ್ಳು ತ್ತದೆ. ಸಂಸ್ಕಾರಗೊಂಡು, ಮನಸ್ಸಿನ ಪರಿಪಕ್ವತೆಯನ್ನು ಗೋಚರಿಸು ತ್ತದೆ. ಬಾಳುವೆಯ ಉತ್ಕೃಷ್ಟತೆಯನ್ನು ಹೊರಸೂಸುತ್ತದೆ.

ಬಾಳುವೆಯು ಪ್ರೇಮಮಂದಿರ. ಅದು ಧರ್ಮಮಂದಿರವೂ ಆಗಬೇಕು. “ ಪ್ರೇಮದಿಂದ ಪ್ರೇರಿತವಾಗಿ ಜ್ಞಾನದಿಂದ ಪುಟಗೊಂಡ ಬಾಳುವೆಯೇ ಬಾಳುವೆ ” ಎಂದು ಬರ್ಟ್ರಂಡ್ ರಸಲ್ ಒಂದೆಡೆ ಹೇಳಿದ್ದಾನೆ. ಪ್ರೇಮವು ಭಾವವನ್ನು ಹದಗೊಳಿಸಿ ಭಕ್ತಿರಸವನ್ನು ಹೊಮ್ಮಿಸಿ, ಬಾಳನ್ನು ಹಸನಾಗಿಸಿ, ಮನೋಮಂದಿರವನ್ನು ಚೊಕ್ಕಟ ಗೊಳಿಸುವುದಾದರೆ, ಜ್ಞಾನವು ಮೆದುಳನ್ನು ಸಂಸ್ಕರಿಸಿ, ತ್ಯಾಗ ಮತ್ತು ಧರ್ಮದೃಷ್ಟಿಯನ್ನು ಬೆಳಸಿ ವಿವೇಚನಾದೃಷ್ಟಿಯನ್ನು ದೊರಕಿಸುವ ದಿವ್ಯದೀಪ್ತಿಯಾಗಿದೆ. ಬಾಳುವೆಯಲ್ಲಿ ಸತಿಪತಿಯರು ಏಕಮನಸ್ಕರಾಗಿ ಸಮರಸ ಜೀವನದಿಂದ ಬಾಳುವಂತೆ ಪ್ರೇಮವು ಪ್ರೇರಿಸಬಲ್ಲುದು.

ಧರ್ಮವು ವಿಶಾಲಹೃದಯರಾಗುವಂತೆ ವಿಶ್ವಭಾವವನ್ನು ತಳಿಸಬಲ್ಲುದು. ಪ್ರೇಮವು ಆತ್ಮವಿಕಾಸಕ್ಕೆ ಆವಶ್ಯಕವಾದುದು. ಧರ್ಮವು ಜೀವನ ವಿಕಾಸಕ್ಕೆ ಆವಶ್ಯಕವಾದುದು. ಆತ್ಮವಿಕಾಸವಾದಂದೆ ಜೀವನ ವಿಕಾಸ. ಅಂದೇ ಆತ್ಮಕಲ್ಯಾಣ. ದಂಪತಿಗಳು ಆನಂದ ಜೀವನದಿಂದ ಬಾಳುವ ಲಭ್ಯಪವಿತ್ರಪ್ರೇಮದಿಂದ ಮಾತ್ರ ಸಾಧ್ಯ. ಮಾನವನ ನಿಚ್ಚಳವಾದ ಪವಿತ್ರಪ್ರೇಮವು ದೈವಬಾಂಧವ್ಯವನ್ನರಸಿ ಹೃದಯ ಪುಷ್ಪವನ್ನರಳಿಸುತ್ತದೆ. ಧರ್ಮವು ವಿಶ್ವಬಾಂಧವ್ಯಕ್ಕಾಗಿ ಹೆಣಗುತ್ತದೆ. ಆಗ ಪವಿತ್ರಪ್ರೇಮ ಮತ್ತು ಧರ್ಮಜ್ಯೋತಿಗಳಿಂದ ಬೆಳಗುವ ಆತ್ಮ ಮಂದಿರವು ನಿರ್ಮಲ. ಬಾಳಮಂದಿರವು ಕೋಮಲ.

ಬಾಳುವೆಯ ಅವಧಿಯನ್ನು ಮಾನವನ ಜೀವಿತಕಾಲದ ದೃಷ್ಟಿ ಯಿಂದ ಅವಲೋಕಿಸಿದರೆ ಅದು ಕ್ಷಣಿಕ. ಸತ್ಕ್ರಿಯಾಶೀಲನಾಗಿ ಜೀವಿಸುವ ಮಾನವನ ಬಾಳುವೆಯು ಶಾಶ್ವತ. ಅಜ್ಞಾನದ ಹೊಲಸಿನಲ್ಲಿ, ಜಾತಿಮತಗಳ ಬೇಧಭಾವದಲ್ಲಿ, ಅನೀತಿ, ಅಧರ್ಮಗಳಲ್ಲಿ, ಹೆಜ್ಜೆ ಹಾಕುವುದು ಮಾನವನ ಬಾಳುವೆಯ ಏಳಿಗೆಗೆ ಬಹುದೊಡ್ಡ ತೊಡಕು. ಮಾನವನು ವಿಜ್ಞಾನವೆಂಬ ಹೊಸ ಲೋಕವನ್ನೇ ಸೃಷ್ಟಿಸಿ, ಅದನ್ನೇ ತನ್ನ ವಿನಾಶಕ್ಕೆ ಬಳಸಲು ತೊಡಗಿದ್ದಾನೆ. ಅಣುಬಾಂಬು ಮತ್ತು ಜಲಜನಕಬಾಂಬುಗಳನ್ನು ಜಗತ್ತಿನ ವಿಲಯಕ್ಕಾಗಿ ತಯಾರಿಸಿ ನೀಡು ತ್ತಿರುವ ವಿಜ್ಞಾನಿಮಾನವ ಅಜ್ಞಾನಿಯಲ್ಲದೆ ಮತ್ತೇನು?

ಗೃಹಸ್ಥಜೀವನದಲ್ಲೂ ಮಾನವ ಅನೇಕ ಒಡಕುಗಳನ್ನುಂಟು ಮಾಡಿಕೊಂಡಿದ್ದಾನೆ. ತಾಮಾಡುವ ತಪ್ಪುಗಳ ಕಡೆಗೆ ಗಮನವೇ ಇಲ್ಲವಾಗಿದೆ. ಇತರರ ಏಳ್ಗೆಯನ್ನು ಕಂಡು ಅಸೂಯೆಪಡುವ ಹೀನ ಬುದ್ಧಿ ಅಂಟುರೋಗದಂತೆ ಪ್ರಬಲಿಸಿದೆ. ಸ್ವಾರ್ಥಸಂಕುಚಿತಪಿಪಾಸೆ ಅಚ್ಚಳಿಯದಂತೆ ಹರಡಿದೆ. ಹೀಗಾಗಿ ಬಾಳಿನ ಸಾರಸ್ವತರೂಪನ್ನು, ದಿವ್ಯತೇಜಸ್ಸನ್ನು ಕಳೆದುಕೊಂಡು ಮಾನವ ಕಳೆಗುಂದಿದ್ದಾನೆ. ಕಳೆ ಯೇರುವುದು ಎಂದು? ಒಂದಲ್ಲ ಎರಡಲ್ಲ, ಎಂಭತ್ತುನಾಲ್ಕು ಲಕ್ಷ ಯೋನಿಗಳಲ್ಲಿ, ಬಾರವ ಭವಂಗಳಲ್ಲಿ ಜನಿಸಿ ಬಂದರೂ ಮಾನವನಿಗಿನ್ನೂ ಬುದ್ಧಿ ಬಂದಿಲ್ಲ; ಅಜ್ಞಾನದ ತೆರೆ ಹರಿದಿಲ್ಲ; ವಿಶಾಲದೃಷ್ಟಿ ಅಂಕುರಿ ಸಿಲ್ಲ. ಬಾಳಿನಲ್ಲೂ ಬಡತನದಬಾಳು-ಸಿರಿತನದಬಾಳು ಎಂದು ಇಬ್ಬಗೆ ಯಾಗಿದೆಯೆಂದು ಮಾನವ ಭಾವಿಸಿದ್ದಾನೆ. ಜಗದಲ್ಲಿ ಸ್ಥಿರವೆಂಬುದೇ

ಇಲ್ಲದಿರುವಾಗ ಇನ್ನು ಈ ಬಡತನ, ಸಿರಿತನಗಳು ಸ್ಥಿರವೇ? ಇವು ಬಾಳಿನಲ್ಲಿ ಕಾಲಚಕ್ರದಂತೆ ಒಂದಾದಮೇಲೊಂದು ತಿರುಗುತ್ತಿವೆ. ಸಿರಿವಂತನ ಬಾಳಿಗೆ ಅಹಂ ಒಂದು ಕಲಶವಾಗಿರುತ್ತದೆ. ಸಿರಿಯು ತಾತ್ಕಾಲಿಕ ಆನಂದವನ್ನು ಜೀವನದಲ್ಲಿ ನೀಡುವುದೆ ವಿನಾ ಶಾಶ್ವತ ಸೌಖ್ಯಭೋಗವನ್ನು ನೀಡುವ ಶಕ್ತಿ ಅದಕ್ಕೆಲ್ಲಿದೆ? ಜೀವನಾನಂದವನ್ನು ಸವಿಯುವ ಭಾಗ್ಯ ವಿಮರ್ಶಕನಾದ ಬಡವನ ಬಾಳಿಗೂ ಉಂಟು; ಸಿರಿವಂತನ ಬಾಳಿಗೂ ಉಂಟು. ಬಡವನು ಹಣದ ಮುಗ್ಗಟ್ಟಿನಿಂದ ಬಾಳುನಡೆಸಲು ಅಶಕ್ತಜೀವಿಯಾದ ಮಾತ್ರಕ್ಕೆ ಬಾಳನ್ನು ಗೋಳೆನ್ನುವುದು ಸೂಕ್ತವಲ್ಲ. ಬಾಳಸ್ವರೂಪವನ್ನು ಕಾಣಲು ಸಾಧನೆ ಕೈಗೊಳ್ಳದೆ ಬಾಳನ್ನು ಕೀಳೆಂದೂ, ಗೋಳೆಂದೂ, ಅಸಾರ, ಅಸಹ್ಯವೆಂದೂ ಭಾವಿಸಿದರೆ ಬಾಳು ಕಹಿಯಂತೆ ಕಂಡುಬರುವುದಲ್ಲದೆ ಸಿಹಿಯಂತೆ ಕಂಡುಬರುವುದೇ? ಬಡತನದ ಬಾಳಿನಲ್ಲಿ ಸ್ವಚ್ಛತೆಯಿದೆ; ಸಹಜತೆಯಿದೆ. ಸಿರಿವಂತನ ಬಾಳು ಕೀಳೆಂದು ನಾವು ಹೇಳುತ್ತಿಲ್ಲ. ಬಾಳು ಒಂದೇ ವಿನಾ ಎರಡಲ್ಲ. ಸಿರಿವಂತನಾಗಿರುವಾಗ ಮಾನವ ಬಡಜನರ ಬಾಳ ಏಳ್ಗೆಗಾಗಿ ಕರುಣೆಸೂಸುವ ವಿಶ್ವಹೃದಯಿಯಾಗಬೇಕು. ಸಿರಿವಂತನು ಬಡಬಾಳಿನ ಕರುಣಾಮಯ ಸನ್ನಿವೇಶವನ್ನರಿಯದೆ ಅಟ್ಟಹಾಸದಿಂದ ಬಾಳುವುದು ತನ್ನ ಮುಂದಿನ ಜೀವನದ ವಿಕಟಾಟ್ಟಹಾಸಕ್ಕೆ ಮಾರ್ಗವೆಂಬುದನ್ನು ತಿಳಿಯಲಿ. ನೊಂದಿರುವ ಬಡಜೀವಿಗಳ ರಕ್ತವನ್ನು ಹೀರಿ ಸೂರೆಗೊಂಡು ಗಳಿಸುವ ಹಣದ ನಿಧಿಯು ತನ್ನ ಮುಂದಿನ ಜೀವನದ ದುರ್ವಿಧಿಯೆಂಬುದನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳಲಿ. ಈ ಸಂದರ್ಭದಲ್ಲಿ ಮಹಾತ್ಮ ಬಾಪೂಜಿಯವರನ್ನು ನೆನೆಯದೆ ಮುಂದೆ ಹೋಗುವಂತಿಲ್ಲ. ಅವರ ಅಸದೃಶ ಜೀವನವನ್ನು ಮನವಾರೆ ಮೆಚ್ಚದಿರಲಾಗುವುದಿಲ್ಲ. ಮಹಾತ್ಮಾಜಿಯವರಿಗೆ ಸಂಪತ್ತು-ಸುಖಗಳಲ್ಲಿ ಆತಂಕವಿರಲಿಲ್ಲ. ಅಟ್ಟಹಾಸದಿಂದ ಗರ್ವಿಗಳಾಗಿ ಬಾಳುವುದು ಮಾನವತ್ವಕ್ಕೆ ಕುಂದೆಂದು ಅವರು ಅರಿತಿದ್ದರು. ಆದಕಾರಣವೇ ಐಶ್ವರ್ಯ–ಸುಖಗಳನೆಲ್ಲಾ ಸ್ವೀಕರಿಸದೆ, ಮಿತಾಹಾರಸೇವನೆಯಿಂದ, ಸರಳಜೀವನದಿಂದ ಬಾಳಿದರವರು. ಸತ್ಯ, ಶಾಂತಿ, ಅಹಿಂಸೆಯನ್ನು ಗಳಿಸುವುದೇ ಮಾನವ ಜನ್ಮದ ಗುರಿಯೆಂದು ಬೋಧಿಸಿ ಇವುಗಳೇ ಮಾನಸಿಕ ಸಂಸ್ಕರಣವಾಗಲು ಮುಖ್ಯವೆಂದು ಸಾರಿದರು. ಬಾಳುವೆಯ ಗುರಿಯ ಬಗ್ಗೆ

ಮಹಾತ್ಮಾಜಿಯವರ ಜೀವನ ಭವ್ಯನಿದರ್ಶನ. ಪ್ರೇಮದಿಂದ ಬಾಳ ಹಾದಿಯಲ್ಲಿ ಕಾಲಿಟ್ಟು ಸತ್ಯಧ್ವಜವನ್ನು ಮೇಲೆತ್ತಿ ಧರ್ಮವೀರರಾಗಿ ಬಾಳಿದ ಮಹಾತ್ಮ ಬಾಪೂರವರ ಜೀವನವನ್ನು ಪರಿಪೂರ್ಣವಾಗಿ ಅವಲೋಕಿಸಿದರೆ ಪ್ರಸ್ತುತ ಲೇಖನದ ಉದ್ದೇಶ ನೆರವೇರಿದಂತೆಯೇ ಸರಿ. ಇತರ ರಾಷ್ಟ್ರಗಳು ಬಾಪುವನ್ನು ಮರೆತರೂ ಭಾರತವಂತೂ ಬಾಪುವನ್ನು ಮರೆಯುವಂತಿಲ್ಲ. ಅವರು ಭಾರತವನ್ನು ಸ್ವತಂತ್ರ ಭಾರತವನ್ನಾಗಿ ನಿರ್ಮಿಸಿದ ದೈವಶಿಲ್ಪಿ. ಲೋಕಪೂಜ್ಯರಾದ ಬಾಪುವಿಗೂ, ಭಾರತಕ್ಕೂ ಆಂತರಿಕವಾಗಿ ಎಂದೆಂದೂ ನಂದದ ಬಾಂಧವ್ಯ ಬೆಳೆದಿದೆ. "ಸತ್ಯವೇ ಹರ" "ಹರನೇ ಸತ್ಯ" ಎಂಬಂತೆ. ಬಾಪುವೇ ಭಾರತ; ಭಾರತವೇ ಬಾಪು. ಮಹಾತ್ಮಾಜಿಯವರಂತೆ ಬಾಳಿನಲ್ಲಿ ಸಿರಿವಂತನಾಗಿದ್ದರೂ ಅಹಂಭಾವಿಯಾಗದೆ ನಿಗರ್ವಿಯಾಗಿ ಸರಳ ಜೀವನದಿಂದ ಜಗಕ್ಕಾಗಿ ತನ್ನ ಬಾಳೆಂದು ಅರಿತು ಆಚರಿಸುವವನ ಬಾಳು ಜಗದೀಶನ ಬಾಳು.

ಒಟ್ಟಿನಲ್ಲಿ ಬಾಳು ಎಂಬುದು ಮಹಾಸಾಧನಾರಂಗ. ಸಕಲ ಜೀವರೇ ತಾನಾಗಿರುವಲ್ಲಿ (ಆತ್ಮವತ್ ಸರ್ವಭೂತಾನಿ) ಬ್ರಹ್ಮಸೃಷ್ಟಿಯ ಬಾಳುವೆಯು ಉನ್ನತವಾದುದು; ಫಲಪ್ರದವಾದುದು. ಆ ಸೌಭಾಗ್ಯ ಫಲವನ್ನು ಸ್ವೀಕರಿಸಲು ಸಂಸ್ಕಾರಶೀಲರಾಗಬೇಕು. ಸದ್ಧರ್ಮಶೀಲರಾಗಬೇಕು. ಸಂಸ್ಕಾರಗೊಂಡ ಮನಸ್ಸು ತ್ಯಾಗಬುದ್ಧಿಯ ಭಾವ ಪ್ರಕಾಶನ; ನಿತ್ಯನೂತನ. ಎಂದಿನವರೆಗೆ ಮಾನವನ ಮಾನಸಿಕ ಸಂಸ್ಕರಣವಾಗದೋ ಅಂದಿನವರೆಗೂ ಆತ್ಮಕಲ್ಯಾಣವಾಗದು. ಜೀವನ ಸಂಸ್ಕರಣವಾಗದು ಮತ್ತು ಲೋಕಕಲ್ಯಾಣವೂ ಉಂಟಾಗದು. ಮಾನಸಿಕ ಸಂಸ್ಕರಣವಾಗಲು ಮತ್ತು ಜೀವನ ಸೌಂದರ್ಯೋಪಾಸನೆಯಲ್ಲಿ ತನ್ಮಯರಾಗಲು ಸಾಧನೆಯೇ ಮೂಲ. ಆ ಸಾಧನೆಯಿಂದಲೇ ಬಾಳಿನ ದಿವ್ಯದರ್ಶನ.

ಅದುವೇ ಆನಂದರಸಜೀವನ; ಅಮರಜೀವನ.

ದರ್ಶನ

ವಚನಗಾರ್ತಿ 'ಮಹಾದೇವಿಯಕ್ಕ'

ವೀರಶೈವ ಸಾಹಿತ್ಯವು ವಿಸ್ತಾರವಾದುದೂ, ವಿಶೇಷ ವೈವಿಧ್ಯ, ವೈಶಿಷ್ಟ್ಯದಿಂದ ಕೂಡಿದುದೂ ಆಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವೀರಶೈವಸಾಹಿತ್ಯಕ್ಕೆ ಬೆಲೆಯುಳ್ಳ ಸ್ಥಾನ; ಗೌರವಗಳು ಮೀಸಲಾಗಿವೆ. ವೀರಶೈವಸಾಹಿತ್ಯದ ಮೂಲಪುರುಷರೇ ವಚನಕಾರರೆನ್ನಬಹುದು. ಇವರು ವಚನಕಾರರಲ್ಲದೆ ದೈವಭಕ್ತರೂ ಆಗಿದ್ದಾರೆ. ವಚನಕಾರರಲ್ಲಿ ದೇವರದಾಸಿಮಯ್ಯ, ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯರೇ ಮೊದಲಾದವರು ಬೆಳಕಿಗೆ ಬಂದಿರುವರು. ಕನ್ನಡನಾಡಿನ ಕಣ್ಮಣಿಗಳಾಗಿ ಮೆರೆಯುತ್ತಿರುವರು. ಕನ್ನಡಿಗರ ಹೃದಯ ಕಲ್ಮಷವನ್ನು ತೊಳೆಯುತ್ತಿರುವರು. ಎಲ್ಲರ ಹೃನ್ಮನಗಳಲ್ಲೂ ಬೆಳಗುತ್ತಿರುವರು; ಮುಂದೆಯೂ ಬೆಳಗುವರು. ವಚನಕಾರರಲ್ಲಿ ಶ್ರೇಷ್ಠರಾದ ಬಸವಣ್ಣನವರು ತಮ್ಮ ಜೀವಿತಕಾಲದಲ್ಲಿ ಹಲವಾರು ಸುಧಾರಣೆಗಳನ್ನು ಬಳಕೆಗೆ ತಂದರು. ಅವುಗಳಲ್ಲೊಂದಾದ ಸಮಾಜಸುಧಾರಣೆಯಿಂದ ಮಾತ್ರವೇ ಹಿಂದುಳಿದವರೆಲ್ಲ ಮುಂದೆ ಬಂದರು. ಅಗೋಚರರಾಗಿದ್ದ ವಿದ್ಯಾವಂತರೂ, ಜ್ಞಾನವಂತರೂ ಆದ ಅನೇಕ ಮಹಿಳೆಯರು ಗೋಚರವಾಗಿ ಜಗದಲ್ಲಿ ಬೆಳಗಿದರು. ಜನತೆಯ ಪುನರುಜ್ಜೀವನಕ್ಕಾಗಿ ಜೀವನವನ್ನೇ ಸವೆಸಿದರು.

ಅಂಥವರಲ್ಲಿ ಅಕ್ಕಮಹಾದೇವಿಯೂ ಒಬ್ಬಳು. ಈಕೆ ಶಿವಮೊಗ್ಗ ಜಿಲ್ಲೆಯ 'ಉಡುತಡಿ' ಎಂಬಲ್ಲಿ ಜನಿಸಿದಳು. ಹುಟ್ಟಿನಲ್ಲಿಯೇ ಆಧ್ಯಾತ್ಮಿಕ ಶಿಶುವಾಗಿ ಜನಿಸಿ ಬಂದಳು. ಲೌಕಿಕ ಜೀವನದಲ್ಲಿ ಸುಮತಿ-ನಿರ್ಮಲರ ಮುದ್ದು ಮಗಳೆನಿಸಿಕೊಂಡಳು. ತಾಯಿ-ತಂದೆಯರ ಮುದ್ದು ಪಾಲನೆಯಲ್ಲಿ ಬೆಳೆದ ಅಕ್ಕನು ನವಯುವತಿಯಾದಳು.

ಒಮ್ಮೆ ವೈಹಾಳಿಯ ಅರಸನಾದ ಕೌಶಿಕನು ಅಕ್ಕನ ದೇಹ ಸೌಂದರ್ಯಕ್ಕೆ ಮನಸೋತು ಪ್ರೇಮಭಿಕ್ಷೆ ಬೇಡಿದ. [ಆಕೆಯ ದೇಹದಲ್ಲಿಯೇ ಪ್ರತಿಬಿಂಬಿಸಿದ್ದ ಆತ್ಮಸೌಂದರ್ಯದ ಪ್ರಕಾಶ ಆ ಕೌಶಿಕನ ಕಣ್ಣಿಗೆಲ್ಲಿ ಗೋಚರವಾದೀತು !] ಆದರೆ ಅಕ್ಕ ರಾಜಾಜ್ಞೆಗೆ

ಒಪ್ಪುವಳೇ? ಪ್ರಾಪಂಚಿಕ ಜೀವನದ ನಲ್ಲನೊಡನೆ ನಲ್ಲೆಯಾಗಿ ಬಾಳುವ ಆಸೆ ಆಕೆಗಿರಲಿಲ್ಲ. ಆಕೆಯದು ಪಾರಮಾರ್ಥಿಕ ಸಂಸಾರ; ಪ್ರೇಮಮಯ ಜೀವನ. ಏರುಂಜವ್ವನದಲ್ಲಿ ಕೌಶಿಕರಾಜನ ಪ್ರೇಮದ ರಾಣಿಯಾಗಿ ವಿಲಾಸವೈಭವದಿಂದ ಬಾಳಬಹುದಾಗಿದ್ದವಳು ಆ ವೈಭವ ವನ್ನು ನಿರ್ಲಕ್ಷಿಸಿ ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚನ್ನಿಗಪುರುಷ ನಾದ ಚನ್ನಮಲ್ಲಿಕಾರ್ಜುನನನ್ನು ವರಿಸಿಹೋಗುವುದೇ ಜೀವಿತೋದ್ದೇಶ ವೆಂದರಿತಳು. ಕಾಣದ ದೇವನಾದ ಮಲ್ಲಿಕಾರ್ಜುನನನ್ನು ಮದುವೆ ಯಾಗುವೆನೆಂದು ಸಂಕಲ್ಪಿಸಿ ನಿರ್ಭಯಳಾಗಿ ಹೊರಟಿರುವ ಮಗಳನ್ನು ನೋಡಿ ತಾಯಿ-ತಂದೆಯರು ಮೂಕರಾದರು. ಮಗಳಿಗೆ ಹುಚ್ಚು ಬಂದಿತೇನೋ, ಎಂದು ಭಯಭ್ರಾಂತರಾಗಿ ಬಸವಳಿದರು. ಮುದ್ದು ಕುವರಿಯಾದ ಅಕ್ಕನಿಗೆ ವಿವೇಕವನ್ನು ಹೇಳಿದರು. ಆದರೆ ಅಕ್ಕ ಕೇಳುವಳೇ? ಎಲ್ಲರಮಾತಿಗೆ ತಕ್ಕ ಉತ್ತರವನ್ನು ಕೊಟ್ಟು ಗಂಡನ ಮನೆಗೆ ಹೊರಡಲನುವಾದಳು. 'ಹೋದಮನೆಗೆ ಹೂವ ತಾಹೆನಲ್ಲದೆ ಹುಲ್ಲ ತಾರೆನವ್ವಾ' ಎಂದು ತನ್ನ ಒಳಬಾಳಿನ ಸೊಗಸನ್ನು ಬಿಚ್ಚಿ ನುಡಿದಳು. ತಾಯಿ-ತಂದೆಯರು ಮತ್ತು ಕೆಳದಿಯರು ಅಕ್ಕನನ್ನು ಮನವಿಲ್ಲದೆ ಬೀಳ್ಕೊಟ್ಟರು. ಮಲ್ಲಿಕಾರ್ಜುನನನ್ನು ಪತಿದೇವನನ್ನಾಗಿ ಪಡೆಯಲು ಸಕಲವನ್ನೂ ಅರ್ಪಿಸಿದ ಅಕ್ಕನಬಾಳಿನ ದಿವ್ಯನೋಟವನ್ನು ಆಕೆಯ ಮಧುರವಚನದಿಂದಲೇ ಕಂಡು ಪವಿತ್ರರಾಗೋಣ.

"ಉಟ್ಟಸೀರೆಯ ಸೆಳೆದು ತೊಟ್ಟತೊಡಿಗೆಯ ಹರಿದು
ಬಿಟ್ಟನೋ ನಾನು ಬಿಡುಮುಡಿಯ ಎಲೆದೇವ
ಕೊಟ್ಟನೋ ಎನ್ನ ತನುಮನವ."

ಅವಿರಳವಾದ ಆತ್ಮೈಕ್ಯತೆಯಿಂದ ಪತಿದೇವನಿಗಾಗಿ ಸರ್ವಾರ್ಪಣಗೈದ ಅಕ್ಕನ ಜೀವನದ ವೈರಾಗ್ಯಚಿತ್ರವಿದು. ಅಂದಿನಿಂದ ಮಲ್ಲಿಕಾರ್ಜುನನ ಮೇಲೆ ಅಕ್ಕನಪ್ರೇಮ ಅವ್ಯಾಹತವಾಯಿತು. ಆತನ ದರ್ಶನಕ್ಕಾಗಿ ಹಗಲಿರುಳು ಕಾದುಕುಳಿತಳು. ಪೂಜ್ಯ ಬಸವಣ್ಣನು ಕೂಡಲ ಸಂಗಮ ನನ್ನೊಲಿಸಿಕೊಳ್ಳಲು ಹೇಗೆ ಆತುರ ಸ್ವಭಾವದವನಾಗಿದ್ದನೋ, ಅಂತೆಯೇ ಅಕ್ಕನು ಚನ್ನಮಲ್ಲಿಕಾರ್ಜುನನ ದರ್ಶನಕ್ಕಾಗಿ ಹಾತೊರೆ ಯುವಳು. ಆತನಲ್ಲಿ ತಾನಿಟ್ಟಿರುವ ಪವಿತ್ರಪ್ರೇಮವನ್ನು ತನ್ನ ಮಂಜುಳ ವಾದ ನುಡಿಗಳಿಂದ ಹೊರಹೊಮ್ಮಿಸುವಳು.

" ಅಳಿಸಂಕುಲವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮನೆಲ್ಲರನು ಒಂದು ಬೇಡುವೆನು. ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದುತಂದು ತೋರಿರೇ ! "

ಅಕ್ಕನು ಕಾಣದ ದೇವನಾದ ಮಲ್ಲಿಕಾರ್ಜುನನಿಗಾಗಿ ತನ್ನ ಅಂತರಾಳದಲ್ಲಿ ಹುದುಗಿರುವ ದಿವ್ಯಪ್ರೇಮವನ್ನು ಆ ಭವ್ಯ ನಿಸರ್ಗವಾತಾವರಣದಲ್ಲಿ, ತೋಡಿಕೊಳ್ಳುವ ಚಲುವ ದೃಶ್ಯವಿದು ಅಥವಾ ಪತಿದೇವನಿಗಾಗಿ ಅನಂತಕಾಲ ತಪಿಸಿದರೂ, ಆತನ ದರ್ಶನವಾಗದಿರಲು ತನ್ನ ಮನದ ಬೇಗೆಯನ್ನು ಹೊರಸೂಸುವ ವಿರಹಗೀತೆಯಿದು. ಅಂತೂ ಅಕ್ಕನ ಈ ಹೃದಯಗೀತೆಯಲ್ಲಿ ಸಾತ್ವಿಕಶೃಂಗಾರಲಹರಿಯೂ, ತನ್ನ ಸ್ವಾಮಿಯನ್ನು ಕಾಣಲು ತಾನು ವ್ಯಕ್ತಪಡಿಸುವ ಆತುರದ ಲಾಲಸೆಯೂ, ಉದಾತ್ತ ಧ್ಯೇಯವೂ ಅರಳಿದ ಮಲ್ಲಿಗೆಯ ವಾಸನೆಯಂತೆ ಹೊರಹೊಮ್ಮುತ್ತವೆ. ಮಧುಮಾಸದಲ್ಲಿ ತಳಿರಿನಿಂದ ಹೂತು, ಚಿಗುರಿರುವ ಮಾಮರದಲ್ಲಿ, ಮುತ್ತಿರುವ ದುಂಬಿವಿಂಡನ್ನು, ಸ್ವರಗೈವ ಕೋಗಿಲೆಯನ್ನು, ಅಕ್ಕನು ಬೆಳದಿಂಗಳಲ್ಲಿ ಕಂಡು ವಿಶ್ವಭರಿತನಾದ ಮಲ್ಲಿಕಾರ್ಜುನನಿಗಾಗಿ ಹಂಬಲಿಸಿ ಹಾಡಿದುದಾಯಿತು. ಆದರೂ ಅಕ್ಕನ ಮನ ಶಾಂತಿಪಡೆಯದು. ಚಂಗುಡಿಯುಟ್ಟು ಹರಹಿರುವ ವನದ ತರುಲತೆಗಳನ್ನು ನೋಡಿ, ಖಗ-ಮೃಗಗಳನ್ನು ಕಂಡು ವಿಸ್ಮಯಳಾಗಿ,

" ವನವೆಲ್ಲಾ ನೀವೆ, ವನದೊಳಗಣದೇವತರುವೆಲ್ಲ ನೀವೇ, ತರುವಿನೊಳಗಾಡುವ ಖಗಮೃಗವೆಲ್ಲ ನೀವೇ, ಚನ್ನಮಲ್ಲಿಕಾರ್ಜುನಾ ಸರ್ವತೋಭರಿತನಾಗಿ ನೀನೆನಗೆ ಮುಖದೋರಾ "

ಎಂದು ತನ್ನ ಹೃದಯಾಕಾಂಕ್ಷೆಯನ್ನು ಮನಬಿಚ್ಚಿ ನುಡಿಯುವಳು. ಈ ಮಾತು ಚನ್ನಮಲ್ಲಿಕಾರ್ಜುನನನ್ನು ಕಾಣಲು ಅಕ್ಕನ ಆತುರದ ಮೊರೆ. ಅಕ್ಕನು ಮಲ್ಲಿಕಾರ್ಜುನನ ದರ್ಶನಮಾತ್ರದಿಂದಲೇ ತೃಪ್ತಿಹೊಂದಲಿಲ್ಲ. ಆತನನ್ನೇ ತನ್ನ ಒಲುಮೆಯ ಗಂಡನೆಂದು ಮೆಚ್ಚಿ ಆರಿಸಿಕೊಂಡಿದ್ದಾಳೆ. ಆತನನ್ನು ನಾನಾರೂಪವಾಗಿ ಮನಮೆಚ್ಚಿ ಹೊಗಳಿ ವರ್ಣಿಸುತ್ತಾಳೆ.

" ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದಕಂಭ, ಪವಳದ ಚಪ್ಪರವನಿಕ್ಕಿ, ಮುತ್ತುಮಾಣಿಕದ ಮೇಲುಕಟ್ಟುಕಟ್ಟಿ, ಮದುವೆಯ ಮಾಡಿದರು ; ನಮ್ಮವರೆನ್ನ ಮದುವೆಯ ಮಾಡಿದರು ಕಂಕಣಕೈದಾರ

ಸ್ಥಿರಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು."

ಎಂದು ತನ್ನ ಮದುವೆಯನ್ನು ವರ್ಣಿಸುವಳು. ಅತೀತನಾದ, ನಿಸ್ಸೀಮನಾದ ಚಲುವಗಂಡ ದೊರಕಿದನೆಂದು ಉಕ್ಕಿಬಂದ ಆನಂದದಿಂದ ಮನವೇ ತಾನಾಗಿ ಹಾಡುವಳು. ವರ್ಣನಾತರಂಗವನ್ನು ಹೊರಹೊಮ್ಮಿಸುವ ಭಾವಪುಂಜ ಅಕ್ಕನ ವಚನದಲ್ಲಡಗಿದೆ. ಮದುವೆಯಲ್ಲಿ ವಧುವಾದ ಅಕ್ಕನ ಶೃಂಗಾರ ಎಷ್ಟು ವೈಭವದಿಂದ ಕೂಡಿದ್ದಿರಬಹುದು ಎಂಬ ನಮ್ಮ ಆಲೋಚನಾಪರತೆಗೆ,

"ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳಗುಂದದರಿಸಿನವೆನಗೆ; ದಿಗಂಬರವೇ ದಿವ್ಯಾಂಬರವೆನಗೆ, ಶಿವಪಾದರೇಣುವೇ ಅನುಲೇಪನವೆನಗೆ, ರುದ್ರಾಕ್ಷಿಯೇ ವೈದೊಡಿಗೆ ಎನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಂಗವೆನಗೆ; ಚನ್ನಮಲ್ಲಿಕಾರ್ಜುನನೇ ಗಂಡನೆನಗೆ, ಆನು ಚನ್ನಮಲ್ಲಿಕಾರ್ಜುನಗೆ ಮದುವಳಿಗೆ! ಎನಗೆ ಬೇರೆ ಶೃಂಗಾರವೇಕೆ! ಹೇಳಿರಿ?"

ಎಂದು ಹೇಳುವ ಅಕ್ಕನ ನುಡಿ ಸಮಾಧಾನಕಾರಿಯೂ, ಚಿತ್ತಾನಂದಕಾರಿಯೂ ಆಗಿದೆ. ಮತ್ತೆ ಅಕ್ಕನು ದೇವನನ್ನು ನಿರಾಕಾರನೆಂದೇ ಹೇಳಿದ್ದಾಳೆ. ಆದರೆ ಮಲ್ಲಿಕಾರ್ಜುನನನ್ನು ಬಣ್ಣಿಸುವಾಗ ಮಾತ್ರ ದೇವರು ಸಾಕಾರನಾಗಿದ್ದಾನೆ. ಈ ಅರ್ಥವತ್ತಾದ ಅಕ್ಕನ ಕಲ್ಪನೆಯು ಆಕೆಯ ಉದಾತ್ತಧ್ಯೇಯಕ್ಕೆ ಮಣಿಮುಕುಟವಾಗಿದೆ.

ಅಕ್ಕನ ವಚನಗಳಲ್ಲಿ ಉಪಮೆಗಳಿಂದ ಕಾವ್ಯರಮಣೀಯತೆಯನ್ನು ಹೊಂದಿರುವ ವಚನಗಳು ಬಹುವಾಗಿವೆ.

"ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ಶಿಲೆಯ ಮರೆಯ ಹೇಮದಂತೆ, ತಿಲದ ಮರೆಯ ತೈಲದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಮಲ್ಲಿಕಾರ್ಜುನನ ನಿಲವನಾರೂ ಅರಿಯಬಾರದು!"

ಎಂಬೀ ವಚನದ ಉಪಮೆಗಳ ಸಾರವು ಸೌಂದರ್ಯದ ಉಪಮೆಯಾಗಿದೆ. ಅಕ್ಕನ ವಚನಗಳ ರಸಾನಂದದ ಸೌಂದರ್ಯಕ್ಕೆ ಅನುಭೂತಿಯೇ ಪ್ರೇರಕಶಕ್ತಿ. ಉಪಮೆ, ಸಾದೃಶ್ಯ, ಇಂಗಿತ, ದೃಷ್ಟಾಂತಗಳ ಸಾರ

ವತ್ತಾದ ವಚನಗಳ ವಿನ್ಯಾಸದ ಸೊಬಗು ಅಕ್ಕನನ್ನು ಮಹಾ ಕವಯಿತ್ರಿಯ ಮಟ್ಟಕ್ಕೇರಿಸುತ್ತದೆ. ಅನುಭಾವಿ ಸರ್ವಜ್ಞರಂತೆಯೇ ಅಕ್ಕನೂ ಕೂಡ ವಿವೇಕಿ, ನಿರ್ದಾಕ್ಷಿಣ್ಯಳು. ಅವಳ ನುಡಿಯಲ್ಲಿ ಕಠಿಣತೆ, ಮೃದುತ್ವವು ಸಮರಸವಾಗಿ ಹೆಣೆದುಕೊಂಡು ಅಕ್ಕನು ಮಹಾತ್ಮರ ಎಲ್ಲ ಗುಣವನ್ನೂ ಪಡೆದಿದ್ದಾಳೆ. ಮಹಾತ್ಮ ಬಸವಣ್ಣ, ಅಲ್ಲಮ, ಗಾಂಧೀಜಿಯರಂತೆ ಈಕೆಯೂ ಅಹಿಂಸಾತತ್ವವನ್ನೇ ಜಗತ್ತಿಗೆ ಬೋಧಿಸಿದ್ದಾಳೆ.

> " ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ,
> ಕೊಂದು ನಲಿ ನಲಿದಾಡುವ; ತನ್ನ ಮನೆಯಲೊಂದು ಶಿಶು ಸತ್ತಡೆ
> ಆದಕ್ಕೆ ಮರುಗುವಂತೆ ಅವಕ್ಕೇಕೆ ಮರುಗನು ?......ಜಾಲಗಾರನ
> ದುಃಖ ಜಗಕೆಲ್ಲ ನಗೆಗೆಡೆ, ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ
> ಭಕ್ತನಾಗಿರ್ದು ಜೀವಹಿಂಸೆಯಮಾಡುವ ಮಾದಿಗರನೇನೆಂಬೆನಯ್ಯಾ!"

ಎಂಬೀ ಅಕ್ಕನ ನುಡಿಯು " ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ " ಎಂಬ ಅಣ್ಣನ ಮಾತಿಗೆ ಸಮಂಜಸವಾಗಿದೆ. ಬಸವಣ್ಣನವರ ನುಡಿ, ಅಕ್ಕನ ನುಡಿ—ಈ ಎರಡೂ ಒಂದೇ ರೆಂಬೆಯ ಎರಡು ಹೂಗಳಂತಿವೆ. ಅಕ್ಕನವರು ಮಹಾ ಜ್ಞಾನಿಗಳು. ಅವರ ವಚನಗಳು ವೀರಶೈವ ಜನಾಂಗದಲ್ಲಿ ಮಾತ್ರವೇ ಅಲ್ಲ, ಜನತೆಯ ಸರ್ವಕ್ಷೇತ್ರವನ್ನೂ ವ್ಯಾಪಿಸಿ ಬೆಳಗುತ್ತಿವೆ. ಅದಕ್ಕೆ ಕಾರಣವಿಷ್ಟೆ; ಅಕ್ಕನ ವಚನಗಳು ಭಾವಗರ್ಭಿತವಾದುವು; ಕಾವ್ಯಮಯ ಶೈಲಿಯುವು; ಅರ್ಥಪೂರ್ಣವಾದುವು ; ಭಕ್ತಿರಸಾವೇಶವುಳ್ಳವು ; ಒಳಬಾಳಿನ ಸೌಂದರ್ಯವನ್ನು ಪ್ರಕಾಶಪಡಿಸುವಂಥವು; ಅವು ತಡೆಯಿಲ್ಲದೆ ನಿರರ್ಗಳವಾಗಿ, ಸಹಜಸುಂದರತೆಯಿಂದ ತುಂಬಿ ಹರಿಯುವ ವಚನಾಮೃತ; ವಿವೇಕ ಚಿಂತಾಮಣಿ. ಅಕ್ಕನ ವಚನಗಳಲ್ಲಿ ಆಕೆಯ ಜ್ಞಾನಸಂಪತ್ತು, ಭಾವ ಪ್ರಪತ್ತಿ ತೂಗಿ ಬೆಳೆದ ಬಾಳೆಯಗೊನೆಯಂತೆ ಬಾಗಿಕೊಂಡಿದೆ.

ಅಕ್ಕನು ಸತ್ಯವಾದಿಯೂ ಆಗಿದ್ದಾಳೆ. ಮಲ್ಲಿಕಾರ್ಜುನನನ್ನೇ ಅರಸುತ್ತಾ ಹೊರಟ ಅಕ್ಕನು ಕಲ್ಯಾಣದೆಡೆಗೆ ಪಯಣ ಬೆಳಸಿದಳು. ಅಲ್ಲಿ ಬಸವ, ಚನ್ನಬಸವ, ಅಲ್ಲಮರಿಂದೊಡಗೂಡಿದ ಶರಣಗೋಷ್ಠಿಯಲ್ಲಿ ಕೆಲಕಾಲ ಕಳೆದಳು. ತನ್ನನುಭವಸಾರವನ್ನು ಬೀರಿದಳು. ತನ್ನತನವ ತೋರಿದಳು. ಪ್ರಮಥರೆಲ್ಲರೂ ಅಕ್ಕನ ಜ್ಞಾನವನ್ನೂ, ವಿರಕ್ತಿ

ಯನ್ನೂ ಕಂಡುಹಿಗ್ಗಿದರು ; ಮನಸಾರೆ ಮೆಚ್ಚಿದರು. ವೈರಾಗ್ಯಮೂರ್ತಿಯಾದ ಅಲ್ಲಮನಿಗಂತೂ ಆನಂದಕ್ಕೆ ಎಣೆಯಿಲ್ಲದಾಯಿತು. ಆತ ತುಂಬಿದ ಹೃದಯದಿಂದ ಅಕ್ಕನ ಗುಣಗಾನಮಾಡಿದ; ಹರುಷದಿಂದ ಹಾಡಿದ; ಗೀತೆಯಳೋಲಾಡಿದ. ಬಸವಾದಿ ಪ್ರಮಥರೇ ಅಕ್ಕನ ಗುಣಗಾನ ಮಾಡಬೇಕಾದರೆ ಆಕೆಗಿರುವ ಹಿರಿಯತನವಾವುದೆಂದು ನಾವೇ ಆಲೋಚಿಸಬೇಕು. ಅಕ್ಕನ ಜೀವನ ಪರಿಶುದ್ಧವಾದ ಚಿನ್ನದಂತೆ. ಆಕೆಯ ಪಾರಮಾರ್ಥಿಕ ಸರಳಜೀವನ, ಮನಃಶುದ್ಧಿ, ನಿಷ್ಕಳಂಕ ವೈರಾಗ್ಯ, ಉದಾತ್ತಧ್ಯೇಯಗಳು ಅಕ್ಕನ ಹಿರಿಮೆಯನ್ನು ಎತ್ತಿಸಾರುತ್ತವೆ. ಅಸಂಖ್ಯಾತ ಪ್ರಮಥರ ನಡುವೆ ಪ್ರಭುದೇವರ ತತ್ವ ನಿಕಷದ ಪರೀಕ್ಷೆಯಲ್ಲಿ ಅಕ್ಕನು ತೇರ್ಗಡೆಹೊಂದಿ ಪ್ರಮಥರ ಮೆಚ್ಚಿಕೆ ಪಡೆದಿದ್ದಾಳೆ. "ನಾಮದಲಿ ಹೆಂಗಸಾದರೇನು, ಭಾವಿಸಲು ಗಂಡುರೂಪು ಬಸವಾ" ಎಂಬ ಅಕ್ಕನ ಕೆಚ್ಚಿದೆಯ ನುಡಿ, ಆಕೆಯ ನಡೆಗೆ ಅನುಸಾರಿಯಾಗಿದೆ. ನಿಸ್ಸೀಮ ಚಲುವ ಚನ್ನಿಗನಾದ ಮಲ್ಲಿಕಾರ್ಜುನನನ್ನೇ ಪ್ರೇಮಿಸಿ, ತನ್ನೊಲುಮೆಯೆಂಬ ತೋಳ್ತೆಕ್ಕೆಯಲ್ಲಿ ಬಂಧಿಸಿ, ಬಾಳು ನಡೆಸಿದ ಅಕ್ಕನೂ ಸಹ ನಿಸ್ಸೀಮೆಯಲ್ಲದೆ ಮತ್ತೇನು? ಆಕೆ ಆಧ್ಯಾತ್ಮ ವಿದ್ಯೆಯನ್ನೇ ಕಡೆದುಂಡ ಕೆಚ್ಚಿದೆಯ ವೀರಾಂಗನೆ; ಪ್ರತಿಭಾವಂತೆ; ಕೃತಜ್ಞತಾ ಭಾವೆ.

ಅಕ್ಕನು ತನ್ನ ಗುರಿಯಂತೆ ಶಿವೈಕ್ಯಚಿತ್ತಳಾದ ಬಗೆ ಬಹು ಮನೋಜ್ಞವಾಗಿದೆ. ಬಸವಾದಿಪ್ರಮಥರಿಂದ ಬೀಳ್ಕೊಂಡ ಅಕ್ಕನು ಕದಳಿಯ ವನವನ್ನು ಪ್ರವೇಶಿಸಿದಳು. ಆಗ ತನ್ನ ಶ್ರೀಮೂರ್ತಿಯನ್ನು ಕಂಡ ರೀತಿಯನ್ನು,

> "ಹೊಳೆವ ಕೆಂಜೆಡೆಗಳ ಮಣಿಮಕುಟದ ಒಪ್ಪುವ ಸುಲಿಪಲ್ಲ ನಗೆಮೊಗದ ಕಂಗಳಕಾಂತಿಯಿಂ ಈರೇಳು ಭುವನಂ ಬೆಳಗುವ ದಿವ್ಯಸ್ವರೂಪನ ಕಂಡೆ ನಾನು! ಕಂಡೆನ್ನ ಕಂಗಳ ಬರಹಿಂಗಿತ್ತೆಂದು! ಗಂಡಗಂಡರೆಲ್ಲರ ಹೆಂಡರಾಗಿ ಆಳುವ ಗುರುವನೆ ಕಂಡೆ ನಾನು! ಜಗದಾದಿಶಕ್ತಿಯೊಳು ಬೆರಸಿ ಮಾತನಾಡುವ ಪರಮಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು ನಾ ಬದುಕಿದೆನು."

ಎಂದು ಅಕ್ಕನೇ ಹೀಗೆ ಸ್ತುತಿಸಿ ವರ್ಣಿಸಿದ್ದಾಳೆ. ಅಕ್ಕನ ನಿಲುವಿನ ಪವಿತ್ರತೆಯನ್ನು ಆಕೆಯ ವಚನದಲ್ಲಿ ಕಾಣಬಹುದು. ಹೀಗೆಯೇ

ಚಿತ್ಸ್ವರೂಪನಾದ ಮೂರ್ತಿಯಲ್ಲಿ ತಾನು ಲಿಂಗೈಕ್ಯವಾಗುವ ಬಗೆಯನ್ನು....

"ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವಘೋರಾರಣ್ಯ, ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು ಕದಳಿಯ ಬನದಲ್ಲಿ ಭವಹರನ ಕಂಡೆನು. ಭವಗೆಟ್ಟು ಬಂದೆಯಾ ಮಗಳೇ ಎಂದು ಕರುಣದಿಂ ಬಿಗಿದಪ್ಪಿದರೆ ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು."

ಎಂದು ಅಕ್ಕನಿರೂಪಿಸಿರುವಳು. ಈ ವಚನದಲ್ಲಿ ಅಕ್ಕನ ಬಾಳಿನ ಐಕ್ಯದ ನೋಟವನ್ನು ಕಾಣಬಹುದು. ಅಂತೂ ಅಕ್ಕನ ವಚನಗಳಲ್ಲಿ ಹೊಸ ಶೈಲಿ ; ಭಾವದಲ್ಲಿ ಸೊಬಗು ; ಭಾಷೆಯಲ್ಲಿ ಬೆಡಗು ; ನುಡಿಯಲ್ಲಿ ನಿರ್ದಾಕ್ಷಣ್ಯತೆ ; ಅಂತರಂಗದಲ್ಲಿ ನಿರ್ಮಲತೆಯು ಎದ್ದು ಕಾಣುತ್ತದೆ. ಅಕ್ಕನ ಬಾಳಿನಲ್ಲಿ ಬಸವಣ್ಣನವರ ಜೀವನದ ರಸಘಟ್ಟಗಳೇ ಅಡಕವಾಗಿವೆಯೆನ್ನಬಹುದು. ಅಕ್ಕನ ಬಾಳುವೆ ಕನ್ನಡ ಮಹಿಳೆಯರಿಗೆ ಆದರ್ಶಪ್ರಾಯ; ಆಕೆಯ ನುಡಿ ಜನತೆಗೆ ಹಿತಕರ; ಬಾಳಿಗೆ ಬೆಳಕು.

ಒಟ್ಟಿನಲ್ಲಿ ಅಕ್ಕನು ಆದರ್ಶ ಸ್ತ್ರೀ, ವೀರವಿರಾಗಿಣಿ; ಕಾಮಸಂಹಾರಿಣಿ; ಕವಿಶ್ರೇಷ್ಠಳೂ ಆಗಿದ್ದಾಳೆ. ಅಕ್ಕನ ಆಧ್ಯಾತ್ಮಿಕ ಬಾಳುವೆಯಲ್ಲಿ ದೈವನಿಷ್ಠೆಯ ಅಂತಃಶಕ್ತಿಯೂ, ವಿಶ್ವಸಾಕಾರದ ತೇಜಶ್ಶಕ್ತಿಯೂ ತುಂಬಿದೆ. ಈಕೆಯನ್ನು ಎಲ್ಲ ಕವಿಗಳೂ, ಸಾಹಿತಿಗಳೂ ನುತಿಸಿದ್ದಾರೆ. ಕವಿಷಡಕ್ಷರದೇವನು ಭಕ್ತಿಯಿಂದ ನುಡಿದಿರುವ ನುಡಿಯಿಂದಲೇ ನನ್ನ ಮಾತನ್ನು ಮುಗಿಸುವೆ.

"ಭೂವಳಯ ಪ್ರಸಿದ್ಧ ಸುಖಭೋಗಮನೊಕ್ಕು ವಿರಾಗಭಾವವೇ ।
ಭಾವದೊಳಾಗೆ ಭಾವ ಭವನಂ ಸಲೆ ಭಂಗಿಸಿ ಲಿಂಗಮಂಗದೊಳ್ ॥
ತೀವಿ ನಿಜೇಚ್ಛೆಯಿಂ ಕದಳಿವೊಕ್ಕು ಶಿವೈಕ್ಯತೆಯಾಂತು ನಿಂದಮಾ ।
ದೇವಿಯ ಪಾದಪಂಕರುಹ ಕಾರಡಿಯಾಗಿಸೆನೆನ್ನ ಚಿತ್ತಮಂ ॥"

ಈ ಕವಿವಾಣಿಯಲ್ಲಿ ಅಕ್ಕನ ಬಾಳ್ವೆಯ, ಪವಿತ್ರತೆಯ ಇಂಗಿತವನ್ನು ಮನಗಂಡು ನಲಿದು ಹಾಡೋಣ. ಅಕ್ಕನಂತೆಯೇ ನಡೆದು ಆದರ್ಶರಾಗಿ ಬಾಳೋಣ. ಅಕ್ಕನವರ "ಲಿಂಗಾಂಗ ಸಾಮರಸ್ಯ ಜೀವನ" ಸುಖವನ್ನು ಅನುಭವಿಸೋಣ.

ಬಸವಣ್ಣನವರು ಮತ್ತು ಕನ್ನಡಸಾಹಿತ್ಯ*

ವಿಶ್ವವ್ಯಕ್ತಿ ಬಸವಣ್ಣನವರು ಧಾರ್ಮಿಕರಂಗದಲ್ಲಿ ಮಾತ್ರವಲ್ಲ, ಕನ್ನಡ ಸಾಹಿತ್ಯರಂಗದಲ್ಲೂ ಪರಮಪೂಜ್ಯರಾಗಿದ್ದಾರೆ; ಹೆಚ್ಚಿನ ಮನ್ನಣೆಗೆ ಪಾತ್ರರಾಗಿದ್ದಾರೆ. ಬಸವಣ್ಣನವರು ಕೇವಲ ವೀರಶೈವ ಮತವಿಸ್ತರಣ ಕಾರ್ಯಕ್ಕಾಗಿ ಶ್ರಮಿಸಲಿಲ್ಲ. ಅವರು ತಮ್ಮ ಬಾಳ್ವೆಯಲ್ಲಿ ಮತೋದ್ಧಾರಕರಾಗಿ, ತತ್ವಜ್ಞಾನಿಗಳಾಗಿ, ಧರ್ಮಬೋಧಕರಾಗಿ, ಭಕ್ತಿಭಾಂಡಾರಿಯಾಗಿ ನಾನಾರೂಪದಲ್ಲಿ ಕಾಣಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯಕ್ಕೂ ಹಿರಿದಾದ ಸೇವೆಸಲ್ಲಿಸಿದ್ದಾರೆ. ಸಾಹಿತ್ಯದೇವಿಯನ್ನು ಭಕ್ತಿಯಿಂದ ಆರಾಧಿಸಿದ್ದಾರೆ. ಸ್ವಭಾಷೆಯಾದ ಕನ್ನಡನುಡಿಗೆ ಪ್ರಾಶಸ್ತ್ಯವನ್ನಿತ್ತು ಭಾಷೆಯಮಟ್ಟ ಏರಲು ಮನಸಾರೆ ಹರ್ಷಿಸಿ ದುಡಿದುದೇ ಅಣ್ಣನವರು ಕನ್ನಡಸಾಹಿತ್ಯಕ್ಕೆ ಸಲ್ಲಿಸಿದ ಮೊಟ್ಟಮೊದಲನೆಯ ಸೇವಾಕಾರ್ಯ.

ಸಾಹಿತ್ಯಕ್ಕೆ ಭಾಷೆಯೇ ಮೂಲ. ನಮ್ಮ ಕನ್ನಡ ನುಡಿ ಪ್ರಾಚೀನವಾದುದು. ಇದು ಕ್ರಿ. ಶ. ೧ ನೆಯ ಶತಮಾನದಲ್ಲಿ ಗೋಚರಿಸಿ ಜನರ ಬಳಕೆಯಲ್ಲಿ ಬೆಳೆದು ಬಂದಿದೆ. ಈ ಭಾಷೆ ತನ್ನದೇ ಆದ ಒಂದು ದಾರ್ಷ್ಟ್ಯದಿಂದ ಬೆಳವಣಿಗೆ ಹೊಂದಿದ್ದರೂ ಇದರ ಉನ್ನತಿಗೆ ಸಂಸ್ಕೃತಭಾಷೆಯು ಸಹಕಾರಿ; ಒಡನಾಡಿ. ಅಷ್ಟೇಕೆ! ಪ್ರೇರಕ ಶಕ್ತಿಯೂ ಹೌದು. ಹೀಗೆ ಸಂಸ್ಕೃತದಿಂದ ಬೆಳೆದು ಬಂದ ಕನ್ನಡ ನುಡಿ ತನ್ನ ಬರವಣಿಗೆಯನ್ನು ಮೊದಲು ಶಾಸನಗಳಮೂಲಕ ವ್ಯಕ್ತಪಡಿಸಿತು. ಬರವಣಿಗೆಯು ಮುಂದುವರಿಯುತ್ತಾ ಕೃತಿರೂಪವಾಗಿ ಹೊರಬೀಳಲು ಪ್ರಾರಂಭವಾದುದು ೯ ನೆಯ ಶತಮಾನದಲ್ಲಿ. ಸಾಹಿತ್ಯ ಪ್ರಪಂಚದಲ್ಲಿ ನಮಗಿಂದು ಕಾಣುವ ಮೊಟ್ಟಮೊದಲನೆಯಕೃತಿ ನೃಪತುಂಗ ಕವಿಯ 'ಕವಿರಾಜಮಾರ್ಗ' ಅನಂತರ ಋಷಿಕವಿ ಪಂಪನ

---

* ಜಿ. ಸುಂದರೇಶನ್ ಅವರು ೧೬-೧-೫೪ ಬೆಳಿಗ್ಗೆ ೧೦-೩೦ ಗಂಟೆಯಂದು ಟಿ. ನರಸೀಪುರದ ವಿದ್ಯೋದಯ ಪ್ರೌಢಶಾಲಾ ಆವರಣದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಭಾಷಣವನ್ನು ಲೇಖನದಂತೆ ಸಂಗ್ರಹಿಸಿ ಬರೆಯಲಾಗಿದೆ. —ಪ್ರ.

ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯ. ಪಂಪನ ಕಾಲಾನಂತರ ಆತನ ಕಾವ್ಯಪ್ರತಿಭೆಯು ಸಾಹಿತ್ಯ ಪ್ರಪಂಚದಲ್ಲಿ ಮುಂದೆ ಮುನ್ನೂರು ವರ್ಷದವರೆಗೂ ಚಲ್ಲಿದೆ. ಸ್ವಯಂಪ್ರಕಾಶವನ್ನು ಬೀರಿದೆ. ಪೊನ್ನ, ರನ್ನ, ಜನ್ನ, ನಾಗಚಂದ್ರ ಮೊದಲಾದ ಕಲಾಕೋವಿದರ ಕಾವ್ಯಾನ್ನತ್ಯಕ್ಕೆ ನವಚೈತನ್ಯವಿತ್ತಿದೆ. ಹೀಗೆ ಕನ್ನಡ ಸಾಹಿತ್ಯಭವನಕ್ಕೆ ಜೈನ ಕವಿಗಳು ಅಡಿಗಲ್ಲನ್ನು ಹಾಸಿ ಭದ್ರತೆಯನ್ನೇರ್ಪಡಿಸಿದ್ದಾರೆ. ಅಂದು ಜೈನಕವಿಗಳು ರಚಿಸುತ್ತಿದ್ದ ಕೃತಿಗಳು ಪ್ರೌಢವರ್ಗಕ್ಕೆ ತಿಳಿಯುವಂಥವು. ಅವುಗಳನ್ನು ಸಾಮಾನ್ಯಜನರು ಓದಿ ಅರ್ಥಮಾಡಿಕೊಳ್ಳಲಾಗುತ್ತಿರಲಿಲ್ಲ. ಜೈನಕವಿಗಳು ರಚಿಸುತ್ತಿದ್ದ ಕೃತಿಯ ಭಾಷಾಶೈಲಿ ಕಬ್ಬಿಣದ ಕಡಲೆಯಂತಿತ್ತು ; ಕ್ಲಿಷ್ಟವಾದ ಪದಸಮೂಹದಿಂದ ಬಂಧುರವಾಗಿತ್ತು. ಈ ಕಾರಣದಿಂದ ಜೈನಕವಿಗಳ ಕೃತಿಗಳು ಸುಂದರವಾಗಿದ್ದರೂ ಸರ್ವಜನಾದರಣೀಯವಾಗಲಿಲ್ಲ ; ಸರ್ವಾನುಗ್ರಾಹಿಯಾಗಲಿಲ್ಲ........ಜೈನ ಕವಿಗಳ ಪ್ರಾಬಲ್ಯ ೧೨ನೆಯ ಶತಮಾನದವೇಳೆಗೆ ಕಡಿಮೆಯಾಗಿ ವೀರಶೈವರಕಾಲಬಂದಿತು. ಅಂದು ಸಾಹಿತ್ಯದೇವಿ ಹೊಸರೂಪಿನಿಂದ ಮೈದೋರಿದಳು. ಚಿತ್ಕಳೆಯನ್ನು ಜನತೆಗೆ ಬೀರುವವಳಾದಳು. ಅಂದಿನಿಂದ ಸಾಹಿತ್ಯ ಜನತಾಸಾಹಿತ್ಯವಾಯಿತು. ಸಾಹಿತ್ಯವಾಹಿನಿ ಸರಳವಾಗಿ ಎಲ್ಲರ ಜೀವನದಲ್ಲಿಯೂ ಹರಿಯತೊಡಗಿತು. ಸಂಸ್ಕೃತಿಯಿಂದ ಮೂಡಿ ಬಂದ ಸಾಹಿತ್ಯ ಜನತೆಯನ್ನು ಸುಸಂಸ್ಕೃತರನ್ನಾಗಿ ಮಾಡಲು ತೊಡಗಿತು. ಸಾಹಿತ್ಯವು ಸರಳವಾಗಿ, ಸುಲಲಿತವಾಗಲು ಬಸವಣ್ಣ, ರಗಳೆಯಕವಿಹರಿಹರ, ರಾಘವಾಂಕ, ಚಾಮರಸ, ವಿರೂಪಾಕ್ಷ ಪಂಡಿತ, ನಾರಣಪ್ಪ ಮುಂತಾದವರು ದುಡಿದ ಸೇವೆ ಹಿರಿದಾದುದು.

ಸಾಹಿತ್ಯವು ಬಾಳಿನ ದಿವ್ಯವಾಣಿ. ಹೃದಯಾನುಭವವನ್ನು ಬರಹ ರೂಪದಲ್ಲಿ ನಿರೂಪಿಸುವುದೇ ಸಾಹಿತ್ಯ. ಜೀವನದ ಅಭಿವ್ಯಕ್ತ ಸ್ವರೂಪವೇ ಸಾಹಿತ್ಯ. ಸಾಹಿತ್ಯವು ಜೀವನದಲ್ಲಿ ಹದವಾಗಿ ಬೆರೆತಿದೆ. ಬಾಳು ಹಸನಾಗಲು ಹೆಣಗಿದೆ. ಜೀವನವೆಂದರೇನು? ಈ ಪ್ರಶ್ನೆಗೆ ಕವಿ ಕುವೆಂಪುರವರು ಹೀಗೆ ಉತ್ತರವಿತ್ತಿದ್ದಾರೆ. "ಜೀವನವೆಂದರೆ ನಮ್ಮಲ್ಲಿ ಒಬ್ಬೊಬ್ಬರಲ್ಲಿಯೂ ಬಯಕೆಗಳಿವೆ-ಭಾವಗಳಿವೆ-ಆಸೆಗಳಿವೆ-ಉದ್ದೇಶಗಳಿವೆ-ಕೆಲವು ಹತ್ತಿರ-ಕೆಲವು ದೂರ-ಕೆಲವು ಪ್ರತ್ಯಕ್ಷ-ಕೆಲವು

ಅಪ್ರತ್ಯಕ್ಷ; ಈ ಅನುಭವಗಳೇ ನಮ್ಮ ಜೀವನ" ಕಾವ್ಯಸಮೂಹವೇ ಸಾಹಿತ್ಯ. ಅನುಭವಗಳ ಹೊಂದಾಣಿಕೆಯೇ ಜೀವನ. ಜೀವನಕ್ಕೆ ಸಾಹಿತ್ಯ ಅತ್ಯವಶ್ಯಕ. ಸಾಹಿತ್ಯದಿಂದ ಜೀವನ ಪರಿಪುಷ್ಟಿಗೊಳ್ಳ ಬಲ್ಲುದು. ರಸಾನುಭವದಿಂದೊಡಗೂಡಿದ ಕಾವ್ಯವು ಸಾಹಿತ್ಯದ ಹಿರಿಮೆಯನ್ನು ಸಾರುತ್ತದೆ; ಬೆಳಸನ್ನು ಸೂಸುತ್ತದೆ; ತನ್ನ ಸೊಬಗನ್ನು ಬೀರಿ ತಣಿಸುತ್ತದೆ. ಸಾಹಿತ್ಯಕ್ಕೆ ಒಂದು ಶಾಶ್ವತವಾದ ಸ್ಥಾನವಿದೆ; ಬೆಲೆಯಿದೆ. ಅದಕ್ಕೆ ಕಾಲಕಲ್ಪಿತವಿಲ್ಲ; ಏಳು-ಬೀಳುಗಳಿಲ್ಲ. ಆದರೆ ಇಂದು ಆಧುನಿಕ ಕನ್ನಡ ಸಾಹಿತ್ಯವೆಂದು ಹೊಸ ಬಗೆಯ ಸಾಹಿತ್ಯ ಸೃಷ್ಟಿಯಾಗಿದೆ. ಕಥೆ, ಕಾದಂಬರಿ, ಪ್ರಹಸನ, ನಾಟಕಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಧಾನಪಾತ್ರವಹಿಸಿವೆ. ಕಥೆ, ಕಾದಂಬರಿಗಳ ಮಾತ್ರದಿಂದಲೇ ಮಾನವನ ಮನೋಧರ್ಮ ಬೆಳೆಯಲಾರದು. ಬೆಳೆಯುವಂತೆ ರೂಪಿಸುವ ಕಾದಂಬರಿಗಳು ಇಂದು ಅತಿವಿರಳ. ಆಧುನಿಕರನ್ನು ಇಂದು ಆಕರ್ಶಿಸಿರುವ ಕೃತಿಗಳೆಂದರೆ ಕಾದಂಬರಿಗಳು. ಅವು ಸಾರವತ್ತಾಗಿರಲಿ, ಇಲ್ಲದಿರಲಿ ಓದುವವರ ಸಂಖ್ಯೆ ಮಿತಿಮೀರಿದೆ; ಅಂತೆಯೇ ಬರೆಯುವವರ ಸಂಖ್ಯೆಯೂ ಹಣದ ದೃಷ್ಟಿಯಿಂದ ಅತಿಯಾಗಿದೆ. 'ಸಾಹಿತಿ' ಎಂದು ತಾವೇ ಕರೆದುಕೊಂಡು ಪ್ರಸಿದ್ಧ ವಾಗುತ್ತಿರುವ ಕೆಲವು ಕಾದಂಬರಿಕಾರರಂತೂ ಮೈಮೇಲೆ ಪ್ರಜ್ಞೆ ಇಲ್ಲದೆ ಲೇಖನಿಯಿದೆಯೆಂದು ಹುಚ್ಚುಹುಚ್ಚಾಗಿ ಬರೆಯುತ್ತಿದ್ದಾರೆ. ಸಾಹಿತ್ಯದಲ್ಲಿ ಹೊಲಸನ್ನೆಬ್ಬಿಸುತ್ತಿದ್ದಾರೆ. ಇಂಥವರು ಹೆಚ್ಚಿದರೆ ಕನ್ನಡ ಸಾಹಿತ್ಯದ ಅಧಃಪತನವಾಗದಿನ್ನೇನು ? ನಿಜವಾದ ಸಾಹಿತ್ಯಕ್ಕೆ ಬೆಲೆ ಇಂದಿಲ್ಲವಾಗಿದೆ. ಈ ಬಗೆಯ ಕನ್ನಡ ಸಾಹಿತ್ಯಾವಲೋಕನದಿಂದ ಮಾತ್ರವೇ ನಮಗೆ ಸಾಹಿತ್ಯಸ್ವರೂಪ ಗೋಚರಿಸದು. ಸಾಹಿತ್ಯದ ನಿಜಸ್ವರೂಪವನ್ನು ಕಾಣಬೇಕೆಂದರೆ ಹಳೆಯ ಸಾಹಿತ್ಯದೆಡೆಗೆ ಗಮನ ಕೊಡಬೇಕು. ಶರಣರು ನಿರ್ಮಿಸಿರುವ ವಚನಶ್ರೇಣಿಯಲ್ಲಿ ವಿಹರಿಸಬೇಕು. ಅಂದೇ ಸಾಹಿತ್ಯದ ನೂತನ ದೃಷ್ಟಿಯು, ಕವಿವರ್ಯರ ಅಂತಃಶಕ್ತಿಯು, ವಚನಕಾರರ ವೈದುಷ್ಯತೆಯು ಚಿತ್ತಭಿತ್ತಿಯಮೇಲೆ ಅಚ್ಚೊತ್ತುವುದು. ಜೈನಕವಿಗಳ ಕೃತಿಗಳು ಪಂಡಿತರಿಗೆ ತಿಳಿಯು ವಂತಹುದಾದರೆ ವೀರಶೈವರ ಕೃತಿಗಳು ಸಾಮಾನ್ಯರಿಗೂ ಜ್ಞಾನ ಜ್ಯೋತಿಯನ್ನು ನೀಡಿತು. ಲಲಿತಶೈಲಿಯ ಶರಣರ ವಚನಗಳು

ಮತ್ತು ವೀರಶೈವ ಕೃತಿಗಳು ನವ್ಯಸಾಹಿತ್ಯದ ಪುನರ್ನಿರ್ಮಾಣಕ್ಕೆ ಆಧಾರವಾಯ್ತು. ಕರುನಾಡಿನನುಡಿಯ ಸೊಬಗನ್ನು ತಣಿದು ಮನಸಾರೆ ಹರ್ಷಿಸಿ ನಲಿದಾಡುವ ಸೌಭಾಗ್ಯ ಎಲ್ಲರದಾಯ್ತು. ಇಷ್ಟೆಲ್ಲಾ ಶರಣರ ವಚನಪ್ರಭಾವದಿಂದಲೇ.

ವಚನಸಾಹಿತ್ಯವು ಪುರಾತನವಾದುದು. ವಚನಸಾಹಿತ್ಯದ ಆದ್ಯ ಪ್ರವರ್ತಕರಾರೆಂದು ನಾವಿಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಕೆಲವರು ಬಸವಣ್ಣನವರನ್ನು "ವಚನಧರ್ಮಸ್ಥಾಪಕ, ವಚನಸಾಹಿತ್ಯದ ಮೂಲಪುರುಷ" ಎಂದು ಪರಿಗಣಿಸುವರು. ವಚನಸಾಹಿತ್ಯವು ಯಶಸ್ಸು ಪಡೆಯಲು ಅಣ್ಣನವರು ಕಾರಣಕರ್ತರೇ ವಿನಾ ಅವರು ವಚನಧರ್ಮಸ್ಥಾಪಕರಲ್ಲ; ವಚನಸಾಹಿತ್ಯದ ಆದ್ಯಪ್ರವರ್ತಕರಲ್ಲ. "ತಾಳಮಾನ ಸರಿಸವನರಿಯೆ"; "ಆದ್ಯರ ವಚನ ಆದ್ಯರಿಗಾಯಿತ್ತು ವೇದ್ಯರಿಗಲ್ಲದೆ ಸಾಧ್ಯವಾಗದು"; ಎಂಬ ಅಣ್ಣನವರ ನುಡಿಗಳು ವಚನ ಸಾಹಿತ್ಯದ ಅತ್ಯಪೂರ್ವತೆಗೆ ನಿದರ್ಶನವಾಗಿವೆ. ಇಂದಿನಮಟ್ಟಿಗೆ ವಚನ ಸಾಹಿತ್ಯದ ಮೂಲಪುರುಷ ದೇವರ ದಾಸಿಮಯ್ಯನವರೆಂದು ಪರಿಗಣಿಸಲಾಗಿದೆ. ಹೀಗೆ ವಚನಸಾಹಿತ್ಯರಂಗಭೂಮಿಯು ಪುಣ್ಯಪುರುಷರ ತಪೋನಿಲಯವೂ ಆಗಿದೆ. ಇಲ್ಲಿ ಅನೇಕ ರಸಋಷಿಗಳು; ಶರಣಪುಂಗವರು ತಪೋಶಕ್ತಿಯಿಂದ ತಮ್ಮ ಆತ್ಮಬಲವನ್ನು ಕಾಪಾಡಿಕೊಂಡಿದ್ದಾರೆ. ತಮ್ಮನುಭವವನ್ನು ಮುಚ್ಚು-ಮರೆಯಿಲ್ಲದೆ ವಚನಗಳಲ್ಲಿ ಘಂಟಾ ಘೋಷವಾಗಿ ಸಾರಿದ್ದಾರೆ. ಅಣ್ಣನವರೂ ಕೂಡ ದಾಸಿಮಯ್ಯನವರ ವಚನಮಾರ್ಗವನ್ನೇ ಅನುಸರಿಸಿ ವಿಶ್ವವನ್ನೇ ತಮ್ಮ ವಚನಗಳಲ್ಲಿ ತುಂಬಿದ್ದಾರೆ; ವಿಶ್ವೇಶ್ವರನನ್ನು ಆರಾಧಿಸಿದ್ದಾರೆ; ವಿಶ್ವೈಕ್ಯತೆಯನ್ನು ಜನತೆಯು ಪಡೆಯಲೆಂದು ಆಶಿಸಿದ್ದಾರೆ; ಹುರಿದುಂಬಿಸಿದ್ದಾರೆ.

ನಾಲ್ಕೇ ಪಂಕ್ತಿಗಳಲ್ಲಿ ವಿಶಾಲಜಗತ್ತನ್ನೇ ಅಡಕಗೊಳಿಸಿ ಅಚ್ಚುಕಟ್ಟಾಗಿಹೆಣೆದು ರಚಿಸಿರುವ ಶರಣರ ವಚನಗಳು ಅಪಾರ ಬೆಲೆಬಾಳುವ ಮುತ್ತುಗಳು. ಆ ವಚನಗಳಲ್ಲಿ ವಿಶಾಲಭಾವವಿದೆ; ಆಳವಾದ ಅರ್ಥವಿದೆ; ಧರ್ಮಸ್ವರೂಪವಿದೆ; ಕವಿತಾಚಾತುರ್ಯವಿದೆ; ಬಂಧುರಕೀರ್ತಿಯಿದೆ; ಚಿರಶಾಂತಿಯಿದೆ. ಅವುಗಳನ್ನು ಓದುತ್ತಾ ಹೊಸ ಹೊಸ ಭಾವನೆಗಳು ಮೂಡುತ್ತವೆ. ಪರಿಪೂರ್ಣಜ್ಞಾನ ತಲೆದೋರುತ್ತದೆ. ಶರಣರ ವಚನಗಳು ಅಧರಕ್ಕೆ ಕಹಿ; ಉದರಕ್ಕೆ ಸಿಹಿ. ಅವುಗಳಲ್ಲಿ

ಆಧ್ಯಾತ್ಮಿಕವಸ್ತು ಪ್ರಧಾನವಾಗಿದೆ. ಅಣ್ಣನವರು ವರಕವಿಗಳು; ಸಾಹಿತ್ಯಸೇವಾನಿಷ್ಠರು. ಅಣ್ಣನವರು ಸಾಹಿತ್ಯಮಾರ್ಗದಲ್ಲಿ ವಿಹರಿಸಿ ದುದಲ್ಲದೆ ಇತರರಿಗೂ ಸಾಹಿತ್ಯದ ಬಗೆಗಂಪನ್ನು ಬೀರಿದ್ದಾರೆ. ಹೆಚ್ಚಾಗಿ ಶರಣೆಯರೂ ಕೂಡ ಅಣ್ಣನವರಿಂದ ಮಹಾಕವಯಿತ್ರಿಗಳಾಗಿದ್ದಾರೆ. ಹೀಗೆ ಶರಣರಿಂದ ಬೆಳೆದು ಬಂದ ವಚನಸಾಹಿತ್ಯವು ಕನ್ನಡಸಾಹಿತ್ಯದ ಉಸಿರಾಗಿದೆ. ವೀರಶೈವಸಾಹಿತ್ಯವು ಕನ್ನಡಸಾಹಿತ್ಯಕ್ಕೆ ಗಣ್ಯಸ್ಥಾನವನ್ನು ದೊರಕಿಸಿದೆ. ಹೀಗೆ ಕನ್ನಡ ಸಾಹಿತ್ಯದ ಕೀರ್ತಿಸ್ಥಂಭದಂತಿರುವ ವಚನ ಸಾಹಿತ್ಯಸ್ವರೂಪ ಅತ್ಯುನ್ನತವು; ಅತ್ಯಮೂಲ್ಯವು. ವಚನಸಾಹಿತ್ಯದಲ್ಲಿ ನವ್ಯತೆಯನ್ನುಂಟುಮಾಡಿದ ಪೂಜ್ಯರು ಬಸವಣ್ಣನವರು. ಅವರು ಜಗತ್ತಿ ಗಿತ್ತಿರುವ ಸಂದೇಶ, ಅಮರಸಂದೇಶ. ಭಕ್ತಿಸಾಧನೆಯ ವಿಚಾರವಾಗಿ ಮತ್ತು ಕಾಯಕದ ಬಗ್ಗೆ ನುಡಿದಿರುವ ನುಡಿಗಳು ಅಣ್ಣನವರ ಸಂದೇಶದ ಕಿರಣಗಳು. ಕಾಯಕವೆಂದರೆ ಕೈಕೆಲಸ; ಉದ್ಯೋಗ (ಜೀವನ ವೃತ್ತಿ) ಬಡವನಾಗಲೀ, ಭಾಗ್ಯವಂತನಾಗಲೀ, ಮೈಮುರಿದು ಕೆಲಸ ಮಾಡಬೇಕು. ಸಿರಿಬಂತೆಂದು ಗರ್ವಿಸಿ ತಮ್ಮ ಕಾಯಕವನ್ನು ಬಿಡ ಬಾರದು ಎಂಬ ಅಣ್ಣನವರ ನಿಯಮವು, ಸೋವಿಯಟ್ ರಷ್ಯಾದ ನಿಯಮವನ್ನು ಹೋಲುತ್ತದೆ. ಕಾಯಕದಲ್ಲಿಯೂ ಧರ್ಮ ಒಳಗೊಂಡಿರಬೇಕು ಎಂಬುದೇ ಅಣ್ಣನವರ ನಿಯಮದಲ್ಲಿರುವ ಉದಾತ್ತನೀತಿ; ಪೂರ್ಣ ಅರ್ಥ. ಸದ್ಧರ್ಮಾಚರಣೆಯ ಕಾಯಕದಿಂದಲೇ ಕೈಲಾಸ. ಇಂದು ಧರ್ಮ ಹಾಳಾಗುತ್ತಿದೆ; ತನ್ನ ನಿಜಸ್ವರೂಪವನ್ನು ಕಳೆದು ಕೊಂಡಿದೆ. ಧರ್ಮನಿಲಯಗಳಾದ ಮಠಗಳಲ್ಲಿ ಅಧರ್ಮವು ತಾಂಡವ ವಾಡುತ್ತಿದೆ. ಬಿಸಲಿನಿಂದ ಬಳಲಿ ಬಂದವರಿಗೆ ಕುಡಿಯಲು ನೀರನ್ನೂ ಸಹ ಜನತೆಗೆ ಕೊಡುವುದಿಲ್ಲವೆಂದರೆ ಸೋಜಿಗವಲ್ಲ. ಇಂದು ಅನೇಕ ಮಠಗಳು ಮನಸ್ವೇಚ್ಛೆ ವರ್ತಿಸುತ್ತಿವೆ. ಇದನ್ನು ಆಧುನಿಕ ಪೂರ್ಣ ಯಶಸ್ವೀ ವಚನಕಾರರಾದ ಶ್ರೀ ಶ್ರೀ ಜ. ಚ. ನಿ. ಸಂಸ್ಥಾನ ಅವರು ಜನ ಹೃದ್ಯವಾಗುವಂತೆ ಬಿತ್ತರಿಸಿರುವುದನ್ನು ನೋಡುವ :

" ಋಷ್ಯಾಶ್ರಮಂಗಳು ಕೃಷ್ಣಾಶ್ರಮಂಗಳಾಗಿಹವು.
ಸಂನ್ಯಾಸಿ ಮಠಗಳು ಸಂಸಾರಿಮನೆಗಳಾಗಿಹವು.
ಸಂನ್ಯಾಸ ಶಾಸ್ತ್ರಬೋಧೆ ನಡೆವಲ್ಲಿ;
ಸಂತಾನ ಶಾಸ್ತ್ರಪ್ರಯೋಗ ನಡೆದಿಹುದು ನೋಡಾ "

ಧರ್ಮನಿಲಯಗಳಾದ ಮಠಗಳ ಹೀನಸ್ಥಿತಿಯನ್ನು ಕಣ್ಣಾರೆ ನೋಡಲಾರದೆ ಶ್ರೀ ಶ್ರೀಗಳವರು ಮರುಗಿ ಹೀಗೆ ನುಡಿದಿದ್ದಾರೆ. ಇಂದಿನ ಋಷಿಗಳ ಆಶ್ರಮಗಳು ಸರಸಸಲ್ಲಾಪವನ್ನಾಡುವ ರತಿಯರ ಕ್ರೀಡಾಸದನವಾಗಿದೆ; ಭೋಗವಿಲಾಸವಾಗಿದೆ. ಹೀಗಾದರೆ ಕನ್ನಡ ಸಂಸ್ಕೃತಿ ಹಾಳಾಗದಿರುವುದೇ ? ಮೊದಲು ನಮ್ಮ ಜೀವನದಲ್ಲಿ ಧರ್ಮ ಬೆಳೆಯದಿದ್ದರೆ ಜನತೆಯ ಪ್ರಗತಿಯೂ ಆಗದು. ಇದನ್ನೇ ಬಸವಣ್ಣ ನವರು ಗುರುಲಿಂಗಜಂಗಮಸೇವೆ, ಐಕಮತ್ಯ, ಕಾಯಕದಲ್ಲಿ ಒತ್ತಿ ಹೇಳಿದ್ದಾರೆ. ಅಂತೆಯೇ ನಿಸ್ವಾರ್ಥಜೀವನದಿಂದ ಬದುಕಿದ ಅಣ್ಣನವರ ಬಾಳಿನ ಪರಿಪಕ್ವತೆಗೆ ಧರ್ಮವೇ ಸಾಧನವಾಗಿತ್ತು; ಭಕ್ತಿಯೇ ಸತ್ಯಸಂದರ್ಶನವಾಗಿತ್ತು; ಅವರ ವಚನಗಳೇ ಕಲ್ಪಲತೆಯಾಗಿತ್ತು. ಆದಕ್ಕಾಗಿಯೇ ಬಸವಣ್ಣನವರಿಗೆ ಧರ್ಮಪುಂಗವ, ಭಕ್ತಿರಸನಿಧಿ, ವಚನಶ್ರೇಷ್ಠ ಎಂಬ ಬಿರುದುಗಳು ಸಲ್ಲಿವೆ.

ನಮ್ಮ ಮುಖ ನೋಡಿಕೊಳ್ಳಲು ಒಂದು ಕನ್ನಡಿ ಬೇಕು. ಅಂತೆಯೇ ನಮ್ಮ ಬಾಳಿಗೂ ಒಂದು ಕನ್ನಡಿ ಬೇಕು. ಈ ಬಾಳ ಕನ್ನಡಿಯನ್ನು ಯಾವ ಕನ್ನಡಿಯಂಗಡಿಯಲ್ಲಿ ಹುಡುಕಿದರೂ ದೊರಕಲಾರದು. ಆ ರನ್ನಗನ್ನಡಿಗಳೇ ಕ್ರಿಸ್ತ, ಬಸವ, ರಾಮಕೃಷ್ಣಪರಮಹಂಸ-ಬಾಪೂ ಮತ್ತಿತರರು. ಬಸವಣ್ಣನವರ ಜನತಾಸೇವೆ ಜನಾರ್ಧನನು ಮೆಚ್ಚು ವಂತಹುದು ; ಎಲ್ಲರೂ ಕೈಗೊಳ್ಳುವಂತಹುದು. ಈ ತೆರನ ಸೇವಾವೃತ್ತಿ ಯನ್ನು ಆಬಾಲವೃದ್ಧರೂ ಆಚರಿಸಬೇಕು. ಬಾಲರಿಗೆ ಈ ಬಗೆಯ ಸೇವಾ ಮನೋಭಾವ ಮೂಡಬೇಕಾದರೆ ಸ್ವಚ್ಛ ವಾತಾವರಣ ಅತ್ಯ ಗತ್ಯ. ಅರಿತು ನುರಿತ ಉಪಾಧ್ಯಾಯರನ್ನು ಅವರು ಹೊಂದಿರಬೇಕು. ಕೇವಲ ಶಾಲೆಯ ವಿದ್ಯಾವ್ಯಾಸಂಗಮಾತ್ರದಿಂದಲೇ ವಿದ್ಯಾರ್ಥಿಗಳ ನೈತಿಕಮಟ್ಟ ಉನ್ನತವಾಗಲಾರದು. ಅವರ ಮನೋದೃಷ್ಟಿ ಧಾರ್ಮಿಕ, ಸಾಹಿತ್ಯಕಕ್ಷೇತ್ರದೆಡೆಗೆ ಒಲಿಯಬೇಕು. ಜನತೆಗಾಗಿ ಬಾಳುವ ಹಿತ ದೃಷ್ಟಿ ವಿದ್ಯಾರ್ಥಿಗಳ ವ್ಯಾಸಂಗದ ಗುರಿಯಾಗಬೇಕು. ಮಹಾತ್ಮರು ತೋರಿಸಿರುವ ವಿಶ್ವಹಾದಿಯಲ್ಲಿ ನಾವು ಸಾಗಬೇಕು. ಹಾಗೆ ನಡೆವುದೇ ಆ ಮಹಾತ್ಮರಿಗೆ ಭಾರತೀಯರಾದ ನಾವು ಭಕ್ತಿಯಿಂದ ಅರ್ಪಿಸುವ ಮುಡಿಪು ; ಜಯಮಂಗಳದ ಹೂಮಾಲೆ. ಆಗ ಜಗದ ಎಲ್ಲ ಮಹಾತ್ಮರೂ ತಮ್ಮ ದರ್ಶನವನ್ನು ನಮಗೆ ನೀಡುತ್ತಾರೆ; ಅಚ್ಚಳಿಯದೆ

ಎಲ್ಲರ ಹೃದಯದಲ್ಲೂ ನಿಲ್ಲುತ್ತಾರೆ. ನಿಲ್ಲುವವರಲ್ಲೊಬ್ಬರಾದ ಅನುಭಾವಿ ಅಣ್ಣನವರು ಭಾರತವನ್ನು ಪುಣ್ಯಭೂಮಿಯನ್ನಾಗಿ ಮಾಡಿದವರು.

ಬಸವಣ್ಣನವರು ಒಮ್ಮೆ ಭಕ್ತಿಪುತ್ಥಳಿಯಂತೆ ಕಂಡರೆ ಮತ್ತೊಮ್ಮೆ ಜ್ಞಾನಮೂರ್ತಿಯಂತೆ ಕಾಣುವರು. ಮಗದೊಮ್ಮೆ ವಿರಾಗಿಯಾಗಿ ತೋರುವರು. ಅಂತೆಯೇ ಬಸವಣ್ಣನವರ ಬಾಳು ವೈವಿಧ್ಯಮಯ; ಸೌಂದರ್ಯಮಯ. **ಬಸವಣ್ಣನವರು ಲೋಕದ ಹೆಬ್ಬೆಳಕು. ಅವರ ವಚನಗಳು ಕನ್ನಡ ಸಾಹಿತ್ಯದ ಹೆಬ್ಬೆಳಸು.**

ಧರ್ಮಪುಂಗವ ಬಸವಣ್ಣನವರು

" ಬಸವನ ಮಾತೆ ಮಾತು ಬಸವಣ್ಣನ ಭಕ್ತಿ ಓಜೆಯೋಜೆಕೇಳ್ !
ಬಸವನ ರೀತಿ ರೀತಿ ಬಸವಣ್ಣನ ಕಿಂಕರವೃತ್ತಿವೃತ್ತಿ ಮೇಣ್ ॥
ಬಸವನ ಬಟ್ಟೆ ಬಟ್ಟೆ ಬಸವಣ್ಣನ ಬಿಂಕದ ಭಾಷೆ ಭಾಷೆ ಹೋ ।
ಬಸವನ ನಿಷ್ಠೆ ನಿಷ್ಠೆ ಬಸವಣ್ಣನ ನೇಮವೆ ನೇಮವುರ್ವಿಯೊಳ್ ॥

[ಹಂಪೆಯ ಹರೀಶ್ವರ]

ಪೂಜ್ಯ ಬಸವಣ್ಣನವರನ್ನು ಗುಣಗಾನಮಾಡದವರಿಲ್ಲ; ಮುಕ್ತಕಂಠದಿಂದ ಹೊಗಳಿ ಕೊಂಡಾಡದವರಿಲ್ಲ. ಅವರ ಮಾತು ಸರ್ವಜನಗ್ರಾಹ್ಯವಾದದ್ದು; ಅವರ ಸೇವೆ ಸರ್ವತೋಮುಖವಾದದ್ದು. ಅವರ ಜೀವನವು ಧರ್ಮವನ್ನಾಶ್ರಯಿಸಿದ ಕ್ರಾಂತಿಕಾರಕ ಜೀವನವಾಗಿದೆ. ಮತ್ತೊಂದು ಬಗೆಯುಲ್ಲಿ ಅವರ ಜೀವನ ಕಲಾಮಯ. ಅಣ್ಣನವರ ಬಾಳಿನಲ್ಲಿ ವೀರಶೈವ ಮತವಿಸ್ತರಣ ಕಾರ್ಯ ಮುಖ್ಯವಾದುದು. ಈ ಮತವು ಕರ್ಣಾಟಕದಲ್ಲೆಲ್ಲಾ ಖ್ಯಾತಿಗೊಂಡು ವ್ಯಾಪಿಸಿದೆ. ಈ ಮತದ ಧರ್ಮಪರಿಪಾಲನೆಯು ಮಠಾಧಿಪತಿಗಳಿಂದ; ಜ್ಞಾನಪ್ರಚಾರಕರಿಂದ ವಿಶೇಷವಾಗಿ ನಡೆಯುತ್ತಿರುವುದು ಮತವೈಶಿಷ್ಟ್ಯದ ಹೆಗ್ಗುರುತು. ವಿಶ್ವಧರ್ಮವನ್ನೊಳಗೊಂಡಿರುವ ಈ ಮತವು ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಗಣ್ಯಸ್ಥಾನವನ್ನು ಪಡೆದಿದೆ. ವೀರಶೈವ ಮತದ ಕನ್ನಡಕೃತಿಗಳನೇಕವು ತೆಲುಗು,

ತಮಿಳಿನ ದೇಶವಲ್ಲಿ ಹರಡಿ ಆಯಾಯಾ ದೇಶಭಾಷೆಗಳಿಗೆ ಪರಿವರ್ತಿಸಲ್ಪಟ್ಟಿದೆ.

೧೨ ನೆಯ ಶತಮಾನದಲ್ಲಿ ವೈಷ್ಣವಮತದ ಪ್ರಚಾರಕಾರ್ಯ, ಜೈನಮತದ ಪ್ರಾಬಲ್ಯತೆ, ಶಂಕರಾಚಾರ್ಯರ ಅದ್ವೈತವಾದದ ಪ್ರಭೆ ಎಲ್ಲೆಲ್ಲೂ ಬೆಳಗುತ್ತಿದ್ದ ಕಾರಣ ವೀರಶೈವಮತದ ಬಾಳುವೆಗೆ ಧಕ್ಕೆ ಬರುವಂತಾಯಿತು. ಈ ವಿಪತ್ತನ್ನು ಪರಿಹರಿಸಿ ಬೆಳಕು ತೋರಿಸಲು ಒಬ್ಬ ಯುಗಪುರುಷ ಜನಿಸಿದನು. ಆತನೇ ಧರ್ಮವೀರ ಬಸವಣ್ಣ. ಬಸವಣ್ಣನವರು ವೀರಶೈವ ಮತೋದ್ಧಾರಕರೇ ಅಲ್ಲ; ಮಾನವ ಕುಲೋದ್ಧಾರಕರೂ ಆಗಿದ್ದಾರೆ. ಅಣ್ಣನವರು ಜಗತ್ತಿನ ಮಂಗಳತೆಗಾಗಿ ಜೀವಿಸಿದವರು. ಬ್ರಾಹ್ಮಣರಾದ ಬಸವಣ್ಣನವರು ಕರ್ಮಲತೆಯಂತಿದ್ದ ಜನಿವಾರವನ್ನು ತ್ಯಜಿಸಿ ವೀರಶೈವ ಮತಕ್ಕೆ ಸೇರಿದರು. ನಡೆ-ನುಡಿಗಳಲ್ಲಿ ಒಂದಾಗಿ, ಗುರುವಿನಿಂದ ಕಾರುಣ್ಯಪಡೆದು, ಧರ್ಮಸ್ವರೂಪದಿಂದ ಬಾಳುವವರೆಲ್ಲರೂ ಜಗದೀಶನ ಅನುಗ್ರಹಕ್ಕೆ ಪಾತ್ರರೆಂದು ಸಾರಿದರು. ಅಣ್ಣನವರ ಕಾರ್ಯಪ್ರಮುಖತೆಯಿಂದ, "ಸರ್ವಂ ಶಿವಮಯಂ ಜಗತ್" ಎಂಬ ಉಪದೇಶದ ಮಹಿಮೆಯಿಂದ ಎಲ್ಲ ಜಾತಿಗಳು ವೀರಶೈವಮತಕ್ಕೆ ಸೇರಿತು. ಬಾಂಧವ್ಯವೂ ಬೆಳೆಯಿತು. ನುಡಿಗೆ ಅನುಸಾರಿಯಾಗಿದ್ದ ಅಣ್ಣನವರ ನಡೆಯು ಜನರನ್ನಾಕರ್ಶಿಸುವ ಸಾಧನವಾಯಿತು. ವೇದಗಳಿಗನುಸಾರವಾದ ವೀರಶೈವಮತವನ್ನು ಕೆಡಿಸಿದರೆಂದೂ, ತಮ್ಮ ಧರ್ಮನಾಶವಾಯಿತೆಂದೂ ಪ್ರಾಚೀನ ಸಾಂಪ್ರದಾಯಿಕರು ಅಣ್ಣನವರನ್ನು ಪ್ರತಿಭಟಿಸಿದರು. ಸಮಾಜದಲ್ಲಿ ವಿಪ್ಲವವಾಗುವ ಕುರುಹು ಕಂಡುಬಂತು. ಅನ್ಯಮತೀಯನಾದ ಬಿಜ್ಜಳ ರಾಜನಿಗೂ, ಅಣ್ಣನವರ ಮೇಲೆ ಕ್ರೋಧ ಹುಟ್ಟಿತ್ತು. ಹೃದಯ ವಿಕಸನಕೆ ಅವಕಾಶವಿಲ್ಲದೀ ಸಮಯದಲ್ಲಿ "ಆರು ಮುನಿದು ಎಮ್ಮನೇನ ಮಾಡುವರು" ಎಂದು ಧೈರ್ಯದಿಂದ ನುಡಿದು "ಸಮಾಜವಿಸ್ತರಣ ಕಾರ್ಯಕ್ಕಾಗಿ ಜೀವಹೋದರು ಚಿಂತೆಯಿಲ್ಲ; ಹಾಗಾದರೂ ಮರಣವೇ ಮಹಾನವಮಿ ಎನಗೆ" ಎಂದು ಹೇಳುತ್ತಾ ಜನತೆಗೆ ಕಾಯಕದಿಂದಲೇ ಕೈಲಾಸ ಎಂದು ಸದ್ಬೋಧೆಯನ್ನಿತ್ತರು.

ಸೌಮ್ಯಮೂರ್ತಿ ಬಸವಣ್ಣನವರ ಒಂದೊಂದು ಕಾರ್ಯವು ಧರ್ಮಯುಕ್ತವಾಗಿದ್ದರೂ ಅಧರ್ಮವೆಂದೆಣಿಸುವ ಜನರೇ ಅವರ ಕಾಲ

ದಲ್ಲಿ ಹೆಚ್ಚಾಗಿದ್ದರು. ಅಣ್ಣನ ಬೋಧೆಯಿಂದ ವೀರಶೈವ ಮತದಲ್ಲಿ ಬಾಂಧವ್ಯ ಬೆಳಸಿದ ಹರಳಯ್ಯ–ಮಧುವಯ್ಯನವರನ್ನು ಕಪಟಹೃದಯಿಯಾದ ಬಿಜ್ಜಳರಾಜನು ಕ್ಷುದ್ರಜನರ ಮಾತಿನಂತೆ ಕೇಳಿ ಹರಳಯ್ಯ–ಮಧುವಯ್ಯನವರ ಕೊಲೆಮಾಡಿಸಿ ಸೇಡು ತೀರಿಸಿಕೊಂಡನು. ಆದರೂ ಶರಣ ಬಸವಣ್ಣನವರು ಕುಗ್ಗದೆ,

> “ನಾಳೆ ಬಪ್ಪುದು ನಮಗಿಂದೇ ಬರಲಿ; ಇಂದು ಬಪ್ಪುದು ನಮಗೀಗಲೇ ಬರಲಿ. ‘ಜಾತಸ್ಯ ಮರಣಂ ಧ್ರುವಂ’ ಎಂದು ಕೂಡಲ ಸಂಗಮದೇವ ಬರೆದ ಬರಹ ತಪ್ಪಿಸುವರೇ ಹರಿಬ್ರಹ್ಮಾದಿಗಳವಲ್ಲ”

ಎಂದು ನುಡಿದು ಸಲಹೆ ನೀಡಿದರು. ಹರಳಯ್ಯ–ಮಧುವಯ್ಯನವರ ಕೊಲೆ ನಡೆದನಂತರ ವಾತಾವರಣ ಬದಲಿಸಿ ಕೊನೆಗೆ ಬಿಜ್ಜಳರಾಜನ ಕೊಲೆಯೂ ನಡೆದುಹೋಯಿತು. ಯಾರಿಗೂ ಜಗ್ಗದಿದ್ದ ಪ್ರಾಚೀನ ಸಂಪ್ರದಾಯದವರು ಅಣ್ಣನವರ ಧರ್ಮದ ಕ್ರಾಂತಿಗೆ ಶರಣಾಗತರಾದರು. ಇಂತಹ ಕಷ್ಟಸಮುದಾಯದಲ್ಲಿ ಹೋರಾಡಿ ಎಲ್ಲರ ಬಾಳ್ವೆ ಹಸನಾಗುವಂತೆ ಮಾಡಿದ ಸಾರ್ಥಕ್ಯ ಬಸವಣ್ಣನವರದು. ಒಂದು ಮತವನ್ನೋ, ಸಂಘವನ್ನೋ ಸ್ಥಾಪಿಸುವುದು ಮುಖ್ಯವಲ್ಲ, ಮುಂದೆ ಒದಗುವ ಎಡರು, ತೊಡರುಗಳನ್ನು ಸಹಿಸಿ ಪಾಲಿಸುವುದು ಮುಖ್ಯ.

ಸ್ತ್ರೀಯರ ಉನ್ನತಿಗಾಗಿ ಶ್ರಮಿಸಿದುದು ಅಣ್ಣನ ಮತ್ತೊಂದು ಹಿರಿಯ ಸೇವಾಕಾರ್ಯವಾಗಿದೆ. ಅಣ್ಣನ ಕಾಲದಲ್ಲಿ ಶರಣ–ಶರಣೆಯರ ಸಂಖ್ಯೆ ಹೆಚ್ಚಾಗಿತ್ತು. ಮಹಿಳೆಯರ ಜೀವನದಲ್ಲಿ ನವ್ಯತೆಯ ದೃಷ್ಟಿ ಸೃಷ್ಟಿಯಾದುದು ಅಣ್ಣನವರಿಂದಲೇ. ಅವರ ಉಪದೇಶದಿಂದ ಶರಣಸತಿ-ಲಿಂಗಪತಿ ಎಂಬ ಭಾವವನ್ನೊಳಗೊಂಡು ಅಕ್ಕಮಹಾದೇವಿಯಂತೆ ಪಾರಮಾರ್ಥಿಕ ಸಂಸಾರ ನಡೆಸಿ ಅನೇಕ ಮಹಿಳೆಯರು ಖ್ಯಾತಿಗೊಂಡರು. ಈ ಭಕ್ತಿಯುಗದ ಶಿವಶರಣರೆಲ್ಲರೂ ಭಕ್ತಿಪಂಥದಲ್ಲಿ ವಿಹರಿಸಿ ಭಕ್ತಿಭರಿತರಾಗಿದ್ದಾರೆ. ಅಣ್ಣನಕಾಲದಲ್ಲಿ ಮಹಾದೇವಿಯಕ್ಕ ಪ್ರಮುಖಳಾಗಿದ್ದಾಳೆ. ಅಕ್ಕನಾಗಮ್ಮ, ನೀಲಾಂಬಿಕೆ, ಅಕ್ಕಮುಕ್ತಾಯಿ, ಸುವರ್ಣದೇವಿ, ಮೋಳಿಗೆಯ ಮಹಾದೇವಮ್ಮ, ರೇಮವ್ವೆ ಮುಂತಾದವರು ಅಕ್ಕನಂತೆಯೇ ಬಾಳಿ ಬೆಳಗಿದವರು. ಇವರ ನಾಮಾಂಕಿತಗಳು ಬಹುಜನರಿಗೆ ಅಗೋಚರವೆನಿಸಿದ್ದರೂ, ಅವರ ಆತ್ಮಶಕ್ತಿಯ ದಿವ್ಯ

ಪ್ರಭೆಯಿಂದಲೇ ನಮ್ಮೆಲ್ಲರ ಜೀವನರಾಟಿ ಮುಂದುವರಿಯುತ್ತಿದೆ ಎಂಬಂಶವನ್ನು ಮಾತ್ರ ನಾವು ಮರೆಯಬಾರದು. ಸ್ತ್ರೀಯ ಆಧ್ಯಾತ್ಮ ಜೀವನಸ್ವರೂಪವನ್ನು ಅಣ್ಣನವರಿಂದ ಅನೇಕ ಮಹಿಳೆಯರು ಮನಗಂಡು ಆಚರಿಸತೊಡಗಿದರು. ಅಣ್ಣನವರಿಂದ ಶರಣೆಯರೂ ಮಹಾಕವಯಿತ್ರಿಗಳಾದರು. ಶಿವಶರಣೆಯರಲ್ಲೊಬ್ಬರಾದ ಅಕ್ಕಮಹಾದೇವಿಯವರ ವಚನಾಮೃತವೇ ಸಾಕು, ವಚನಸಾಹಿತ್ಯದ ರಮಣೀಯತೆಯನ್ನು ಬಿತ್ತರಿಸಲು. ಅನುಭೂತಿಯಾದ ಅಕ್ಕನ ವಚನಗಳ ರಸಾನಂದದ ಸೊಬಗು ಕಣ್ಮನತಣಿಸುವಂತಿದೆ. ಮೇಲಾಗಿ ಶರಣರು ನಾಡು-ನುಡಿಗಳ ಕಡೆಗೆ ಗಮನವಿಟ್ಟು ಅಹಿಂಸಾಬೋಧಕರಾಗಿ ಬಾಳಿದ್ದಾರೆ. ಅಣ್ಣನವರು ಸ್ತ್ರೀಯರ ಏಳ್ಗೆಗಾಗಿ ಮನಸಾರೆ ಶ್ರಮಿಸಿದುದಕ್ಕೆ :

> " ಕಾಮನ ಗೆಲಿದೆನು ಬಸವಾ ನಿಮ್ಮ ದಯದಿಂದ ; ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ದಯದಿಂದ, ನಾಮದಲಿ ಹೆಣ್ಣುರೂಪಲ್ಲದೆ ಭಾವಿಸಲು ಗಂಡುರೂಪು ಬಸವಾ, ನಿಮ್ಮ ದಯದಿಂದ ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ, ಕೂಡಿ, ಎರಡರಿಯದೆ ಮೆರೆದೆನಯ್ಯಾ ಬಸವಣ್ಣ, ನಿಮ್ಮ ದಯದಿಂದ "

ಎಂಬ ಅಕ್ಕನ ಅಂತರ್ಯವಿಶ್ವಾಸದ ಮತ್ತು ಕೃತಜ್ಞತೆಯ ನುಡಿಯಂತೆಯೇ ಮತ್ತುಳಿದೆಲ್ಲ ಶರಣೆಯರೂ ಕೃತಜ್ಞತೆಯನ್ನು ಸೂಚಿಸಿದ್ದಾರೆ. ಬಸವಣ್ಣನವರ ಜೀವನವು ಸದ್ಭಕ್ತರಿಗೆ ನೆಲೆಮನೆ ; ಆಚಾರ್ಯರಿಗೆ ಅರಮನೆ. ಅವರ ವಚನಗಳು ವಚನಧರ್ಮಸಾರವನ್ನು ಪ್ರತಿಬಿಂಬಿಸುವ ನಿಲುಗನ್ನಡಿ. ಆ ವಚನಗಳಲ್ಲಿ ಮಾನವಧರ್ಮದ ಕಿಂಕುರ್ವಾಣತೆಯೂ, ಬಾಹ್ಯಾಂತರ್ದೃಷ್ಟಿಯ ವಿಷಯಸ್ವರೂಪವೂ, ನೈಪುಣ್ಯತೆಯೂ ಒಡಗೂಡಿದೆ. ಆ ವಚನಗಳು ಛಂದೋಬದ್ಧವಾಗಿಯೂ ಇವೆ. ಆದರೂ ಬಸವಣ್ಣನವರು ಹೀಗೆ ನುಡಿಯುತ್ತಾರೆ.

> " ತಾಳಮಾನ ಸರಿಸವನರಿಯೆ; ಓಜೆ ಬಜಾವಣೆಯ ಲೆಕ್ಕವನರಿಯೆ ; ಅಮೃತಗಣ ದೇವಗಣವನರಿಯೆ, ಕೂಡಲ ಸಂಗಮ ದೇವ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ."

ಎಂದು ಹೃದಯದ ಪೂರ್ಣ ಭಕ್ತಿ-ವಿಶ್ವಾಸವನ್ನು ಹೊರಚೆಲ್ಲುತ್ತಾರೆ. ಅವರ ವಚನಗಳಿಂದಲೇ ಅಣ್ಣನವರ ಜೀವನ ನೋಟವನ್ನು ಕಾಣ

ಬಹುದಾಗಿದೆ; ಕಂಡು ಅಚ್ಚಳಿಯದ ಆನಂದದಲ್ಲಿ ತನ್ಮಯತೆಯನ್ನು ಹೊಂದಬಹುದಾಗಿದೆ. ಭಾವಪುಷ್ಟಿ ತುಂಬಿರುವ ಬಸವಣ್ಣನವರ ವಚನಗಳು ಸಾಹಿತ್ಯದೃಷ್ಟಿಯಿಂದಲೂ ರಸಮಯವಾಗಿವೆ; ಹಾಡುವುದಕ್ಕೂ ಅನುಕೂಲವಾಗಿವೆ. ವಚನಗಳಲ್ಲಿ ಸಾಹಿತ್ಯ–ಸಂಗೀತದ ಮಿಲನ ಸಾರವು ಅರ್ಥವತ್ತಾಗಿದ್ದು ಓದುಗರಿಗೆ ಅವು ಸವಿಯೂಟವನ್ನು ಬಡಿಸುತ್ತವೆ; ಭಕ್ತಿಕೂಟದಲ್ಲಿ ಮೆರೆಸುತ್ತವೆ. ಕಾವ್ಯತೋಟದಲ್ಲಿ ವಿಹರಿಸುವಂತೆ ಪ್ರೇರೇಪಿಸುತ್ತವೆ. ಒಟ್ಟಿನಲ್ಲಿ ಬಸವಣ್ಣನವರ ವಚನಗಳು ಆತ್ಮ ಸಂಸ್ಕರಣಕ್ಕೆ, ಕಲಾಭಿರುಚಿಗೆ ಅತ್ಯಮೂಲ್ಯವಾದ ಸಾಧನ. ಬಸವಣ್ಣನವರು ದಯಾಮಯಿಗಳು; ಆದಿದೈವಿಕಪುರುಷರು. ಅವರ ಜೀವನ ಧರ್ಮದ ಬುತ್ತಿ; ಭಕ್ತಿಯ ದೀಪ್ತಿ. ಅವರು ಜನತೆಗೆ ಸಲ್ಲಿಸಿರುವ ಅಪಾರಸೇವೆಯನ್ನು ವರ್ಣಿಸಲು ಅಸದಳ. ಅವರ ಸೇವೆ ಭಗವಂತನ ಸೃಷ್ಟಿಯಲ್ಲಿ ಜನತೆಗಾಗಿ ಹರಿಯುತ್ತಿರುವ ಜೀವನದಿ.

ಅಣ್ಣನವರು ಸಾಹಿತ್ಯದಲ್ಲಿ ಪ್ರತಿಭಾವಂತರು; ಭಕ್ತಿಯಲ್ಲಿ ರಸನಿಧಿಗಳು; ವೈಶಿಷ್ಟ್ಯದಲ್ಲಿ ಪವಾಡಪುರುಷರು; ವೈದುಷ್ಯತೆಯಲ್ಲಿ ಭಕ್ತಿಭಾಂಡಾರಿಗಳು; ಆದರ್ಶಮತದ ಧರ್ಮಸ್ವರೂಪರೂ ಆಗಿದ್ದಾರೆ. ಈ ತೆರನ ಬಸವಣ್ಣನವರಿಂದ ಉದ್ಧಾರವಾದ ಲಿಂಗವಂತ ಸಂಸ್ಕೃತಿ ಮತ್ತು ಸಾಹಿತ್ಯ ಎಲ್ಲ ದೃಷ್ಟಿಯಿಂದಲೂ ಉದಾತ್ತವಾಗಿದೆ; ಉನ್ನತವಾಗಿದೆ. ಇಂದಿನ ವೀರಶೈವಸಮಾಜದ ಸಾಹಿತ್ಯ ಮತ್ತು ಸ್ತ್ರೀಯರ ಉನ್ನತಿಯ ಬಗ್ಗೆ ಹೇಳುವುದಾದರೆ ಬಸವಣ್ಣನವರ ಕಾಲದಲ್ಲಿದ್ದಷ್ಟಿಲ್ಲ. ಅಂತಹ ಶಿವಶರಣರೂ ಇಂದು ಅತಿ ವಿರಳ. ಇಂದಿನ ರಾಜಕೀಯದಲ್ಲಿ ದ್ವೇಷಾಸೂಯೆಗಳು ಪ್ರಧಾನಪಟ್ಟ ವಹಿಸಿರುವಂತೆ ಧಾರ್ಮಿಕಕ್ಷೇತ್ರದಲ್ಲೂ ಹೊಲಸಿನ ಬೊಬ್ಬೆ ಏಳುತ್ತಿದೆ. ಸ್ವಾರ್ಥಭಾವನೆ ಪಸರಿಸುತ್ತಿದೆ. ಅಣ್ಣನವರು ಅಸ್ಪೃಶ್ಯೋದ್ಧಾರಕ್ಕಾಗಿ ಹೋರಾಡಿದಂತೆ ರಾಷ್ಟ್ರಪಿತ ಗಾಂಧೀಜಿಯವರೂ ಬಹುವಾಗಿ ಶ್ರಮಿಸಿದ್ದಾರೆ. ಆದರೂ ನಮ್ಮ ನಾಡಿನಲ್ಲಿ, ಜಾತೀಯತೆಯ ಭಾವನೆ ಪೂರ್ಣವಾಗಿ ತೊಲಗಿಲ್ಲ. ಪ್ರಾಚೀನ ಸಾಂಪ್ರದಾಯಿಕರ ವಾಸನೆ ಇನ್ನೂ ಅಳಿದಿಲ್ಲ. ಈ ಸಂಕುಚಿತ ಭಾವನೆಯನ್ನು ಮೊದಲು ನಮ್ಮ ಜೀವನದಲ್ಲಿ ಹೋಗಲಾಡಿಸಬೇಕು; ಅನಂತರ ನಾಡು: ಹೀಗೆ ವಿಶ್ವವೇ ಪ್ರಗತಿಯ ಮನೋಧರ್ಮವನ್ನು ಹಿಡಿಯಬಲ್ಲುದು. ಎಲ್ಲ ದೃಷ್ಟಿಯಿಂದಲೂ ಆದರ್ಶವಾಗಿರುವ

ಬಸವಣ್ಣನವರ ಹೆಸರು ಲೋಕವಿರುವ ತನಕ ಅಜರಾಮರ.

ಜನತೆಗಾಗಿ ಸರ್ವಸೇವಾಮಾರ್ಗವನ್ನು ಕೈಗೊಂಡು ಆದರ್ಶರಾದ ಭಕ್ತಿರಸನಿಧಿ ಬಸವಣ್ಣನವರ ಕಾಯಕಪ್ರಭೆಯಲ್ಲಿ ಆತ್ಮಸ್ಫೂರ್ತಿಯನ್ನು ಪಡೆದು ಜನತೆಗಾಗಿ ನಾವು ಬಾಳಿ ಬದುಕಬೇಕು. ಅಣ್ಣನವರ ಭಕ್ತಿಯ ತೋಟದಲ್ಲಿ ದುಂಬಿಯಾಗಿ ಹಾರಾಡಬೇಕು. ಆ ತೋಟದ ಹೂಗಳ ದೇವರಸವನ್ನು ಸ್ವಾದಿಸಿ ದೈವಾಂಶಿಕರಾಗಬೇಕು. ಬಸವಣ್ಣನವರಂತೆಯೇ ಭಕ್ತಿಯಿಂದ ನಲಿದು ಹಾಡಬೇಕು **ಅಂದುತಾನೇ ಧರ್ಮಪುಂಗವ ಬಸವಣ್ಣನವರ ಕಾಯಕಕಲ್ಪಸಿದ್ಧಿ.**

ತಪನಿಧಿಯು ಶ್ರೀ ದೇವರ ದಾಸಿಮಯ್ಯನವರು

ವೀರಶೈವ ವಚನಸಾಹಿತ್ಯದ ಪ್ರಾಚೀನ ವಚನಕಾರರಲ್ಲಿ ಶ್ರೀ ದೇವರ ದಾಸಿಮಯ್ಯನವರು ಪ್ರಮುಖರು. ಇವರನ್ನು ಬಸವಾದಿ ಪ್ರಮಥರು ಮತ್ತು ಹರಿಹರ, ವಿರೂಪಾಕ್ಷ ದೇಶಿಕ, ಭೀಮಕವಿ, ಅಯ್ಯಪ್ಪಕವಿ ಮೊದಲಾದ ಕವೀಶ್ವರರೂ ಸಹ ನುತಿಸಿದ್ದಾರೆ. ಆದರೂ ದಾಸಿಮಯ್ಯನವರ ಹೆಸರು ಬಸವಣ್ಣನವರ ಹೆಸರಿನಂತೆ ಜನಪ್ರಚಾರದಲ್ಲಿಲ್ಲ. ಸಾಕಷ್ಟು ಸಂಶೋಧನಾತ್ಮಕಕೃತಿಗಳು ಮತ್ತು ಲೇಖನಗಳು ಪ್ರಕಟವಾಗದಿರುವುದೇ ಜನತೆ ದಾಸಿಮಯ್ಯನವರನ್ನರಿಯದಿರಲು ಕಾರಣವಾಗಿದೆ. ಆ ಬಗೆಯ ಲೇಖನಗಳು ಪ್ರಕಟವಾಗದಿರಲು ದಾಸಿಮಯ್ಯನವರು ಪ್ರಾಚೀನವ್ಯಕ್ತಿಯಾಗಿರುವುದೊಂದು ಕಾರಣವಾದರೆ ಅವರ ಹೆಸರು, ಕಾಲ, ದೇಶಗಳ ಬಗ್ಗೆ ಭಿನ್ನಾಭಿಪ್ರಾಯವಿರುವುದು ಮತ್ತೊಂದು ಕಾರಣವಾಗಿದೆ. ಶ್ರೀಮಜ್ಜಗದ್ಗುರು ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ ಅವರ ಶ್ರೀ ದೇವರ ದಾಸಿಮಾರ್ಯ ಗ್ರಂಥ ಪ್ರಶಸ್ತಿಯು ಈ ಕೊರತೆಯನ್ನು ನೀಗಲೆತ್ನಿಸಿ ತುಂಬಾ ಯಶಸ್ಸಿ ಪಡೆದಿದೆ. ಕನ್ನಡಿಗರಿಗೆ ಮಹದುಪಕಾರವೆಸಗಿದೆ. ಕನ್ನಡಸಾಹಿತ್ಯಕ್ಕೊಂದು ಅಪೂರ್ವ ಕಾಣಿಕೆಯನ್ನು ಸಲ್ಲಿಸಿದೆ.

* * * *

ಶ್ರೀ ದೇವರ ದಾಸಿಮಯ್ಯನವರು ವಿಜಾಪುರ ಜಿಲ್ಲೆಯ ವಿಜಯಪುರದ ಮುದನೂರು ಗ್ರಾಮದಲ್ಲಿ ೧೧ನೆಯ ಶತಮಾನದ ಪೂರ್ವಾರ್ಧದಲ್ಲಿ ಜನ್ಮವೆತ್ತಿದವರು. ಬಾಲ್ಯ ಕಳೆದಂತೆ ಶಿವಜ್ಞಾನಿಯಾಗಬೇಕೆಂಬ ಹಂಬಲ ತಾನಾಗಿ ಬೆಳೆದು ಸದ್ಗುರುವಿಗಾಗಿ ಶ್ರೀಶೈಲದೆಡೆಗೆ ಪಯಣ ಬೆಳಸಿದರು. ಅಲ್ಲಿ ಶ್ರೀ ಚಂದ್ರಗುಂಡದೇಶಿಕೇಂದ್ರಶಿವಾಚಾರ್ಯರಿಂದ ಅನುಗ್ರಹಪಡೆದು ವೀರಶೈವ ಮತೋದ್ಧಾರ ಕಾರ್ಯವನ್ನು ಕೈಗೊಂಡರು; ಎಲ್ಲರಿಗೂ ಉಪದೇಶವನ್ನಿತ್ತರು. ದಾಸಿಮಯ್ಯನವರು ಜೈನಮತಸ್ಥರನ್ನೂ ಸಹ ವಾದದಲ್ಲಿ ಸೋಲಿಸಿ ಲಿಂಗವಂತರನ್ನಾಗಿಮಾಡಿದುದಲ್ಲದೆ ಆ ಮತಸ್ಥನಾದ ಜಯಸಿಂಹನ ರಾಣಿ ಸುಗ್ಗಳೆ ದೇವಿಗೂ ಲಿಂಗದೀಕ್ಷೆಯನ್ನಿತ್ತರೆಂದು, ಅವರ ಚರಿತ್ರೆಯಿಂದಲೇ ತಿಳಿದುಬರುತ್ತದೆ.

ದಾಸಿಮಯ್ಯನವರದು ಗೃಹಸ್ಥಜೀವನ. ಅವರ ಧರ್ಮಪತ್ನಿ ದುಗ್ಗಳೆದೇವಿ. ಬೆರಸಿರುವ ಅಕ್ಕಿಮಳಲಿನಿಂದ ಅನ್ನವನ್ನು ಮಾಡಿ ನೀಡಿ ದಾಸಿಮಯ್ಯನವರ ಇಷ್ಟಾರ್ಥವನ್ನು ಸಲ್ಲಿಸಿ, ಸಂತೃಪ್ತಿಗೊಳಿಸಿ ವಿವಾಹವಾದ ಚಲುವೆ ಚನ್ನೆಯು ಆಕೆ. ಪ್ರೇಮದ ಒಲವೇ ಅವರ ಬಾಳಬಳ್ಳಿಯಾಗಿತ್ತು. ಧರ್ಮವೇ ಬಾಳಬಳ್ಳಿಯ ಮುಂಕುಡಿಯಾಗಿತ್ತು. ದಾಸಿಮಯ್ಯ–ದುಗ್ಗಳೆಯರು ತಮ್ಮ ಬಾಳತೆಕ್ಕೆಯಲ್ಲಿ ಜೀವನದ ಅಮರ ಸೌಂದರ್ಯವನ್ನು ಕಂಡು ಅನುಭವಿಸಿದ ರಸಜ್ಞರು; ಸತ್ಯಾನ್ವೇಷಿಗಳು. ಭಕ್ತಿಭರಿತ ದಾಸಿಮಯ್ಯನವರನ್ನು ಕೈಹಿಡಿದ ದುಗ್ಗಳೆಯೂ ಕೂಡ ಭಕ್ತಿಭರಿತಳು; ಸತ್ಯಚರಿತಳು. ಆ ಗಂಡಹೆಂಡಿರ ಮನೋಭಾವ ಸರಿಸಮನಾಗಿತ್ತು. ಅವರು ತಮ್ಮ ಜೀವನದಲ್ಲಿ ಇಂದಿಗೇನು? ನಾಳಿಂಗೇನು? ಎಂದು ಚಿಂತಿಸಿದವರಲ್ಲ—

> “ ಇಂದಿಗೆಂದು, ನಾಳಿಗೆಂತೆಂದು ಚಿಂತಿಸಲೇಕೆ ತಂದಿಕ್ಕುವ ಶಿವನಿಗೆ
> ಬಡತನವೇ ರಾಮನಾಥ ! ”

ಎಂಬುದೇ ಅವರ ಬಾಳಿನಲ್ಲಿದ್ದ ನಿಶ್ಚಲತೆ ಮತ್ತು ದೃಢಭಕ್ತಿ. ದಾಸಿಮಯ್ಯನವರು ನೆಯ್ಗೆಯ ಕಾಯಕದಿಂದ ಜೀವಿಸುತ್ತಿದ್ದರು. ಗುರು, ಲಿಂಗ, ಜಂಗಮರನ್ನು ಭಯ, ಭಕ್ತಿ, ಗೌರವಗಳಿಂದ ಸೇವಿಸುತ್ತಿದ್ದರು. ತನು, ಮನ, ಧನ ಅರ್ಪಣಮಾಡಿ ಆರಾಧಿಸುತ್ತಿದ್ದರು.

ಒಮ್ಮೆ ದಾಸಿಮಯ್ಯನವರು ತಾವು, ಹದಿನಾಲ್ಕು ವರ್ಷಗಳಿಂದ ನೆಯ್ದಿದ್ದ ಒಂದು ವಸ್ತ್ರವನ್ನು ‘ ಸಿದ್ಧಪುರ ’ದ ಸಂತೆಗೆ ಕೊಂಡೊಯ್ದರು.

ಬೆಲೆ ಬಾಳುವ ಮತ್ತು ಬಹುಚಲುವಾದ ಆ ವಸ್ತ್ರವನ್ನು ಕೊಳ್ಳುವ ಸಮರ್ಥರಾರೂ ಆ ಸಂತೆಯಲ್ಲಿರಲಿಲ್ಲ. ಸಂಜೆಯಾದರೂ ವಸ್ತ್ರವು ಮಾರಾಟವಾಗದಿರಲು ತಮ್ಮೂರಿಗೆ ಹೊರಡುವರು. ಮಧ್ಯದಾರಿಯಲ್ಲಿ ಒಬ್ಬ ದಿಗಂಬರ ಜಂಗಮನು ದಾಸಿಮಯ್ಯನವರ ಬಳಿಗೆ ನಡುಗುತ್ತಾ ಬಂದು ಆ ವಸ್ತ್ರವನ್ನು ಕೇಳಲು, ದಾಸಿಮಯ್ಯನವರು ಮರುಮಾತಾಡದೆ ಕರುಣೆಯಿಂದ ಆ ವಸ್ತ್ರವನ್ನು ಜಂಗಮನಿಗಿತ್ತರು. ಇತ್ತ ವಸ್ತ್ರವನ್ನು ಜಂಗಮನು ಚೂರುಚೂರಾಗಿ ಹರಿದುಬಿಟ್ಟನು. ಆದರೂ ದಾಸಿಮಯ್ಯನವರ ಮುಖದಲ್ಲಿ ಸಂತೋಷದ ಚಿನ್ಹೆಯಿತ್ತು; ತುಟಿಗಳಲ್ಲಿ ನಗುವಿನ ಅಲೆ ಸುಳಿದಾಡುತಿತ್ತು. ಕೊನೆಗೆ ಆ ಜಂಗಮನು ಹರಿದ ಚೂರು ಬಟ್ಟೆಗಳನ್ನು ದೇಹಕ್ಕೆ ಸುತ್ತಿಕೊಂಡನು. ದಾಸಿಮಯ್ಯನವರು ವಸ್ತ್ರವನ್ನಿತ್ತ ಮಾತ್ರಕ್ಕೆ ತೃಪ್ತಿಹೊಂದದೆ, ಆ ಜಂಗಮನನ್ನು ಮನೆಗೆ ಕರೆದುಕೊಂಡು ಹೋಗಿ, ಸ್ನಾನ, ಶಿವಪೂಜೆ, ಭೋಜನದಿಂದ ತೃಪ್ತಿಪಡಿಸಿದರು. ದಾಸಿಮಯ್ಯನವರ ಮನೆಯಲ್ಲಿ ಪ್ರತಿದಿನವೂ ದಾಸೋಹವು ಎಡೆಬಿಡದೆ ನಡೆಯುತ್ತಿರುವುದನ್ನು ಕಂಡು ಸಂತೋಷಪಟ್ಟು, ಆ ದಂಪತಿಗಳನ್ನು ಬಳಿಗೆ ಕರೆದು ಸ್ವಹಸ್ತದಿಂದ ಒಂದು ಹಿಡಿ ಕಾಳನ್ನು ಕೊಟ್ಟು ಅದನ್ನು ಧಾನ್ಯರಾಶಿಯಲ್ಲಿ ಬೆರಸಹೇಳಿ ಜಂಗಮನು ಹೊರಟು ಹೋದನು. ಇನ್ನು ದಾಸಿಮಯ್ಯ—ದುಗ್ಗಳೆಯರ ಧಾನ್ಯರಾಶಿಯು ಮುಗಿಯುವುದೆಲ್ಲಿ? ಅಕ್ಷಯವಾಯಿತು! ತವನಿಧಿಯಾಯಿತು!! ಅಂದಿನಿಂದ ದಾಸಿಮಯ್ಯನವರು ತವನಿಧಿಯ ದೇವರ ದಾಸಿಮಯ್ಯನವರಾದರು; ಬೇಡದೆ ತವನಿಧಿಯನ್ನು ಪಡೆದ ಭಕ್ತಾಗ್ರೇಸರರಾದರು.

ದಾಸಿಮಯ್ಯನವರು ಉದಾತ್ತಜೀವಿಗಳು; ವಿದ್ವತ್ಪೂರ್ಣಸಾಹಿತಿಗಳು; ಮಹಾಶಿವಶರಣರು. ಧರ್ಮಬೋಧಕರಾದ ದಾಸಿಮಯ್ಯನವರು ಭಕ್ತರ ಸೇವಕರೂ ಆಗಿದ್ದಾರೆ.

> "ಎತ್ತಪ್ಪೆ ಶರಣಂಗೆ; ತೊತ್ತಪ್ಪೆಶರಣಂಗೆ; ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ, ಕಾಯ್ದಿಪ್ಪ ಸೊಣಗನಪ್ಪೆ ಕರ್ತಾರ; ನಿನಗೆ ಕರವೆತ್ತಿ ಪೊಡೆವಡುವ, ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯ ರಾಮನಾಥ"

ಭಕ್ತರಿಗೆ ವಿವೇಕವನ್ನು ಹೇಳುತ್ತಿದ್ದ ದಾಸಿಮಯ್ಯನವರು ಸದ್ಭಕ್ತರನ್ನು ಆದರಿಸದೆ ಇರುತ್ತಿರಲಿಲ್ಲ; ಎತ್ತಾಗಿ, ತೊತ್ತಾಗಿ, ಭಕ್ತರ

ಮನೆಯ ಬಾಗಿಲ ಕಾಯುವ ಸೊಣಗನಾಗಿ, ಕಡೆಗೆ ಹಿತ್ತಿಲ ಬೇಲಿಯಾಗಿ ಬಾಳುವಂತಹ ಹೃದಯವೈಶಾಲ್ಯ ದಾಸಿಮಯ್ಯನವರದು. ದಾಸಿಮಯ್ಯನವರು ನಿರಹಂಭಾವಿಗಳು; ಪ್ರತಿಭಾನ್ವಿತರು; ಭಕ್ತಿಭರಿತರು; ಜಗತ್ಸೇವಕರು ಎಂಬುದಕ್ಕೆ ಈ ನುಡಿಗಿಂತಲೂ ಇನ್ನು ನಿದರ್ಶನ ನಮಗೆ ಬೇಕಿಲ್ಲ!

ದಾಸಿಮಯ್ಯನವರು ಭಕ್ತಿ, ಜ್ಞಾನ, ವಿರಕ್ತಿಯ ಸಂಪನ್ನಮೂರ್ತಿಯಾಗಿದ್ದರೂ ಅವರ ಅಂತರಂಗವನ್ನರಿತಾಗ ಭಕ್ತಿಗೆ ಪ್ರಧಾನತೆಯನ್ನು ಕೊಟ್ಟಿರುವುದು ಹೃದ್ಗೋಚರವಾಗುವುದು. ಮಾನವನು ಪರಿಶುದ್ಧ ಹೃದಯಿಯಾಗಲು ಭಕ್ತಿಯೇ ಸಾಧನವೆಂಬುದು ದಾಸಿಮಯ್ಯನವರ ಮತ. ಭಕ್ತಿರಸಮೂರ್ತಿಯಾದ ಭಕ್ತನಿಗೂ-ದೇವನಿಗೂ ಇರುವ ಬಾಂಧವ್ಯವನ್ನು,

> "ಬಸಿರೊಳಗಣ ಶಿಶು, ತಾಯಿಮುಖವನರಿಯದು, ತಾಯಿಯಾ ಶಿಶುವಿನ ಮುಖವನೆಂದೂ ಅರಿಯಳು ಮಾಯಾ ಪ್ರಪಂಚನೊಳಗಿಹ ಭಕ್ತ ದೇವರನರಿಯ ದೇವರಾ ಭಕ್ತನನೆಂದೂ ಅರಿಯ ಕಾಣಾ ರಾಮನಾಥ"

ಎಂದು ಸರಳವಾದ ಉಪಮೆಯಿಂದ ಬಿತ್ತರಿಸಿರುವುದು ದಾಸಿಮಯ್ಯನವರ ಅನುಭಾವದ ಕುರುಹು. ಆಧ್ಯಾತ್ಮ ವಿಚಾರವನ್ನು ಅರ್ಥವಾಗುವಂತೆ ಸರಲಗನ್ನಡದಲ್ಲಿ ಸುಂದರವಾದ ಉಪಮೆಗಳಿಂದ ನಿರೂಪಿಸುವ ದಾಸಿಮಯ್ಯನವರ ಭಾಷಾಚತುರತೆಯನ್ನು ಮೇಲಿನ ವಚನದಿಂದ ಕಾಣಬಹುದಾಗಿದೆ. ಭಕ್ತಿ-ಜ್ಞಾನ-ವೈರಾಗ್ಯ ಇವು ಮೂರರ ಹಾದಿಯಲ್ಲಿಯೂ ದಾಸಿಮಯ್ಯನವರು ಕೃಷಿಮಾಡಿದ್ದರೂ ನಿಸರ್ಗವಾಗಿ ಅವರ ಮನಒಲಿದಿದ್ದುದು ಭಕ್ತಿಮಾರ್ಗದಲ್ಲಿ. ಆದಕಾರಣವೇ—

> "ಅನುಭಾವವೇ ಭಕ್ತಿಗಾಧಾರ", "ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು", "ಕತ್ತೆಬಲ್ಲುದೇ ಕತ್ತುರಿಯ ವಾಸನೆಯ", "ಬರು ಶಠಗನ ಭಕ್ತಿ ನಿಜವೆಂದು ನೆಚ್ಚಲು ಬೇಡ,"

> "ಭಕ್ತಿಯ ಬಲ್ಲವರು ನಚ್ಚಿ-ಮುಚ್ಚಿ
> ಮನವನೊಚ್ಚುತ ಗೊಡುವರು
> ಭಕ್ತಿಯನರಿಯದ ಬಲುಪಾಪಿ ಜೀವಿಗಳು
> ಕಚ್ಚುವರು, ಬೊಗಳುವರು ಕಾಣಾ ರಾಮನಾಥ"

ಎಂಬ ಅನುಭವದ ನುಡಿಗಳು ದಾಸಿಮಯ್ಯನವರ ಹೃದಯದಿಂದ ಹೊಮ್ಮಿ ಚಿಮ್ಮಿವೆ. ಇದರಿಂದ ಬಸವಣ್ಣನವರು ಭಕ್ತಿಮಾರ್ಗವನ್ನು ವನ್ನು ಆರಿಸಿಕೊಂಡು ಅದನ್ನು ತಮ್ಮ ಬಾಳಿನ ಸಾಧನವನ್ನಾಗಿ ರೂಪಿಸಿ ಕೊಳ್ಳಲು ದಾಸಿಮಯ್ಯನವರೇ ಕಾರಣಕರ್ತರೆಂದು ಧಾರಾಳವಾಗಿ ಭಾವಿಸಬಹುದು. ದಾಸಿಮಯ್ಯನವರ ಪಥದಲ್ಲಿ ನಡೆದ ಬಸವಣ್ಣನವರು ಭಕ್ತಿಭಾಂಡಾರಿಗಳಾದರು. ಚನ್ನಬಸವಣ್ಣನವರು ಸುಮ್ಯಜ್ಞಾನಿಗಳಾದರು. ಅಲ್ಲಮಪ್ರಭುವು ವೀರ ವಿರಾಗಿಯಾದರು. ಇತರ ವಚನಕಾರರೂ ದಾಸಿಮಯ್ಯನವರಿಂದ ಬಾಳಿನ ಬೆಳಕು ಕಂಡರು; ಮಹಾತೇಜಸ್ವಿಗಳಾದರು.

ದೇವರ ಬಗ್ಗೆ :—

“ಎತ್ತನೇರಿದ ಕರ್ತನೊಬ್ಬನೇ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ ದೇವರ್ಕಳೆಲ್ಲ ನಿಮ್ಮ
ತೊತ್ತಿನ ಮಕ್ಕಳು ಕಾಣಾ ರಾಮನಾಥ ’

“ಧರ್ಮವನಿತ್ತವರ ಮಹಾಧರ್ಮಿಗಳೆಂದೆಂಬರು
ನಿಮ್ಮ ಧರ್ಮವನಾರೂ ಅರಿದವರಿಲ್ಲ
ಧರ್ಮಗಳವನಿಕ್ಕಿ ಉತ್ತ ಭೂಮಿಯನೊಡ್ಡಿ
ನೀನೆಮ್ಮನೆಲ್ಲರ ನೋಡಿ ಸಲಹಿದ್ಯೆ ರಾಮನಾಥ”

“ಎನ್ನೊಡಲಾದರೆ ಎನ್ನಿಚ್ಛೆಯಲ್ಲಿರದೇ ?
ನಿನ್ನೊಡಲಾದರೆ ನಿನ್ನಿಚ್ಛೆಯಲ್ಲಿರದೇ ?
ಅದು ಎನ್ನೊಡಲೂ ಅಲ್ಲ; ನಿನ್ನೊಡಲೂ ಅಲ್ಲ;
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥ”

ಎಂಬ ದಾಸಿಮಯ್ಯನವರ ನುಡಿಗಳಂತೂ ಪರಮಾತ್ಮನ ಹೃದಯವನ್ನೂ ಸೂರೆಗೊಳ್ಳುವಂತಿವೆ; ಆಕರ್ಷಿಸುವಂತಿವೆ; ಭಕ್ತಿರಸವನ್ನು ಹೊಮ್ಮಿಸುವಂತಿವೆ.

ಸೃಷ್ಟಿವೈಚಿತ್ರ್ಯವನ್ನು ಕಂಡು ಬೆರಗಾಗಿ :

“ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ
ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ
ಎಲೆ ಮೃಡನೆ ನೀನಲ್ಲದೆ
ಉಳಿದ ದೈವಂಗಳಿಗಳವೆ ರಾಮನಾಥ!”

"ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗೆ ಆತ್ಮನ ಆರು ಕಾಣದಂತಿರಿಸಿದೆ
ನೀನು ಬೆರಸಿದ ಬೇಧಕ್ಕೆ ಬೆರಗಾದೆನಯ್ಯಾ ರಾಮನಾಥ!"

ಎಂದು ಹಾಡುವ ದಾಸಿಮಯ್ಯನವರ ಈ ಭಾವಗೀತೆಗಳು ಓದುಗರನ್ನು ತನ್ಮಯಗೊಳಿಸುತ್ತವೆ; ವಚನವಾಙ್ಮಯದ ಹೆಚ್ಚಳದ ಸ್ವಸ್ವರೂಪವನ್ನು ತೋರಿಸುವುದಾಗಿವೆ.

ದಾಸಿಮಯ್ಯನವರ ಉದಾತ್ತ ಮನೋಭಾವವನ್ನು, ವ್ಯಕ್ತಿತ್ವವನ್ನು ಅರಿಯಲು ಅವರ ವಚನಗಳು ನಿತ್ಯಸಾಕ್ಷಿಯಾಗಿವೆ. ಅವು ಮಂದಮತಿಗಳಿಗೆ ಮಮತೆಯಿಂದ ವಿವೇಕವನ್ನು ಅರುಹುತ್ತವೆ; ವಿಶಾಲಮತಿಗಳಿಗೆ ವಿಶ್ವಭರಿತನ ದರ್ಶನ ನೀಡುತ್ತವೆ. ಆ ವಚನಗಳಲ್ಲಿ ರೂಪಕ-ಸಾದೃಶ-ಉಪಮಾಲಂಕಾರಗಳು ಅರ್ಥವತ್ತಾಗಿ, ಬಂಧುರವಾಗಿ ಹೆಣೆದಿರುವುದು ವಚನಸಾಹಿತ್ಯದ ವಿಶಿಷ್ಟರೂಪ; ನವ್ಯರಚನಾದೃಷ್ಟಿಯ ಕುಶಲಕಾರ್ಯ. ದಾಸಿಮಯ್ಯನವರ ವಚನಜ್ಯೋತಿಯ ಹೆಬ್ಬೆಳಕು ಮುಂದಿನ ವಚನಕಾರರಿಗೆ ಮಾರ್ಗದರ್ಶಕವಾಗಿರುವುದಲ್ಲದೆ ಅನೇಕ ಕನ್ನಡ ಮತ್ತು ತೆಲುಗು ಕವಿಗಳ ಕಾವ್ಯಪ್ರಪಂಚಕ್ಕೆ ಬೆಳಕು ಚೆಲ್ಲಿದೆ; ತನ್ನ ವಚನ ವೈವಿಧ್ಯತೆಯನ್ನು ತೋರ್ಪಡಿಸಿದೆ. ಅಂತೆಯೇ ದಾಸಿಮಯ್ಯನವರ ವಚನಗಳಿಂದ ವಚನಕಾರರು ಮತ್ತು ಕವೀಶ್ವರರು ಧಾರಾಳವಾಗಿ ನೆರವು ಪಡೆದಿದ್ದಾರೆ. ಅವಗಾಹನೆಗಾಗಿ:

ದಾಸಿಮಯ್ಯ—

"ಅನುಭಾವವಿಲ್ಲದವನ ಭಕ್ತಿ ತಲೆ ಕೆಳಗಪ್ಪುದಯ್ಯ
ಅನುಭಾವವೇ ಭಕ್ತಿಗಾಧಾರ
ಅನುಭಾವವೇ ಭಕ್ತಿಗೆ ನೆಲೆವನೆ
ಅನುಭಾವವುಳ್ಳವರ ಕಂಡರೆ
ತೂರ್ಯಾತೂರ್ಯ ಸಂಭಾಷಣೆಯ;
ಮಾಡದಿರ್ದಡೆ ನರಕದಲ್ಲಿಕ್ಕಯ್ಯ ರಾಮನಾಥಾ"

"ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯಾ
ಅನುಭಾವವೇ ತನುವಿಂಗಾಧಾರ
ಅನುಭಾವಿಗಳ ಅನುಭಾವ ಮನವಾರೆ
ವೇಧಿಸಿದವರಿಗೆ ಜನನವಿಲ್ಲ ಕಾಣಾ ರಾಮನಾಥಾ"

ಚನ್ನಬಸವಣ್ಣ—

“ ಭಕ್ತಿಗೆ ಅನುಭಾವವೇ ಬೀಜ ಕಾಣಿರೇ ;
ಯುಕ್ತಿಗೆ ಅನುಭಾವವೇ ಆಧಾರ ಕಾಣಿರೇ ;
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು
ಅನುಭಾವವಿಲ್ಲದವನ ಯುಕ್ತಿ ತರಕಟ ಕಾಡಿತ್ತು.
ಅನುಭಾವದಲ್ಲಿ ವಿನಯದಿಂದ ತನುವನಿಕ್ಕದೊಡೆ ;
ಕೂಡಲ ಚನ್ನಸಂಗಯ್ಯ ಘೋರ ನರಕದಲ್ಲಿಕ್ಕದೆ ಮಾಂಬನೇ ? ”

* * * *

ದಾಸಿಮಯ್ಯ—

“ ಎಣ್ಣೆ ಇರ್ದು ಎಳ್ಳುನೆನೆಯದ ಬೇಧವ
ಕಿಚ್ಚಿರ್ದು ಕಲ್ಲು ಸಿಡಿಯದ ಬೇಧವ
ಕಾಮವಿರ್ದು ಕನ್ನೆಯನನುಭವಿಸದ ಬೇಧವ
ಪರವಿರ್ದು ಪ್ರಾಣಪ್ರಕೃತಿಯ ಹರಿಯದ ಬೇಧವ
ನರರೆತ್ತ ಬಲ್ಲರೈ ರಾಮನಾಥ ”

ಬಸವಣ್ಣ—

ಉದಕದೊಳಗಣ ಕಿಚ್ಚಿನಂತಿದ್ದಿತ್ತು ;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು ;
ನನೆಯೊಳಗಣ ಪರಿಮಳದಂತಿದ್ದಿತ್ತು ;
ಕೂಡಲ ಸಂಗಮ ದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು ”

* * * * *

ದಾಸಿಮಯ್ಯ—

“ ತನ್ನೊಳಗಣ ಅರಿವು ತನ್ನಲ್ಲಿ ತೋರಿದಲ್ಲದೆ
ಅನ್ಯರಲ್ಲಿ ತೋರಬಲ್ಲುದೇ ?
ತನ್ನಲ್ಲಿ ತಾನೇ ಇದ್ದಂತೆ ಇದ್ದಿತ್ತು.
ತನ್ನ ತಾನೇ ಪಕ್ವಕ್ಕೆ ಬಂದು ;
ತನ್ನಲ್ಲಿ ಹುಟ್ಟಿದ ನೆನಹಿನ
ಬಿನ್ನಾಣವನು ಏನೆಂಬೆನಯ್ಯ ರಾಮನಾಥ ”

ಅಲ್ಲಮಪ್ರಭು—

ನಿಮ್ಮಲ್ಲಿ ನೀವು ತಿಳಿದುನೋಡಿರೇ
ಅನ್ಯವಿಲ್ಲ ಕಾಣಿರಣ್ಣಾ
ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ.
ಅನ್ಯಭಾವವ ನೆನೆಯದೆ.
ತನ್ನೊಳಗೆ ತಾನೇ ಎಚ್ಚರವಿರಬಲ್ಲರೆ
ತನ್ನಲ್ಲಿಯೆ ತನ್ಮಯ ಗುಹೇಶ್ವರಲಿಂಗ"

* * * * *

ದಾಸಿಮಯ್ಯ—

"ಎತ್ತಪ್ಪೆ ಶರಣಂಗೆ; ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ
ಕಾಯ್ದಿಪ್ಪ ಸೊಣಗನಪ್ಪೆ
ಕರ್ತಾರ; ನಿನಗೆ ಕರವೆತ್ತಿ ಪೊಡೆವಡುವ
ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯಾ ರಾಮನಾಥಾ"

ಸರ್ವಜ್ಞ ಕವಿ—

"ಎತ್ತಾಗಿ ತೊತ್ತಾಗಿ ಹಿತ್ತಿಲದ ಗಿಡವಾಗಿ, ಮತ್ತೆ ಪಾದದಾ
ಕೆರವಾಗಿ ಗುರುವಿನಾ ಹತ್ತಿಲಿರು ಎಂದ! ಸರ್ವಜ್ಞ

* * * * *

ದಾಸಿಮಯ್ಯನವರ ಕೆಳಗಿನ ವಚನವೊಂದೇ ಬಸವಾದಿ ಪ್ರಮಥರಿಗೆ ಮಾತ್ರವೇ ಅಲ್ಲದೆ ಷಡಕ್ಷರ ಮಹಾಕವಿಗೂ ಪ್ರಭಾವ ಬೀರಿರುವುದು ಹೆಮ್ಮೆಯ ವಿಷಯ.

ದಾಸಿಮಯ್ಯ—

"ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಸುವರ್ಣದ ಚಿನ್ನದಂತೆ,
ಅರೆದು ನೋಡುವ ಚಂದನದಂತೆ,
ಅರಿದು ನೋಡುವ ಕಬ್ಬಿನ ಕೋಲಿನಂತೆ,
ಬೆದರದೆ ಬೆಚ್ಚದೆ ಇದ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ"

ಬಸವಣ್ಣ—

"ಅರೆವೆನಯ್ಯಾ ಸಣ್ಣವನ್ನಕ್ಕ
ಬರೆವೆನಯ್ಯಾ ಬಣ್ಣವಾಗುವನ್ನಕ್ಕ
ಅರೆದರೆ ಸಣ್ಣನಾಗಿ
ಬರೆದರೆ ಬಣ್ಣವಾದರೆ
ಕೂಡಲ ಸಂಗಮ ದೇವ ಬಂದು ಸಲಹುವನು.

ಅಕ್ಕಮಹಾದೇವಿ—

ಚಂದನವ ಕಡಿದು ಕೊರೆದು ತೇದೊಡೆ
ನೊಂದೆನೆಂದು ಕಂಪಬಿಟ್ಟಿತ್ತೇ?
ತಂದು ಸುವರ್ಣವ ಕಡಿದೊಡೆ
ಬೆಂದು ಕಳಂಕ ಹಿಡಿದಿತ್ತೇ
ಸಂದು ಸಂದು ಕಡಿದಕಬ್ಬನುತಂದು ಗಾಣದಲಿಕ್ಕಿ
ಬೆಂದು ಪಾಕಗೊಳೆ ಸಕ್ಕರೆಯಾಗಿ
ನೊಂದೆನೆಂದು ಸಿಹಿ ಬಿಟ್ಟಿತೇ! ನಾ
ಹಿಂದೆ ಮಾಡಿದ ಹೀನಂಗಳೆಲ್ಲವ
ತಂದು ಮುಂದಿಳುಹಲು ನಿಮಗೆ ಹಾನಿಯೇ; ಎನ್ನ
ತಂದೆ ಚನ್ನಮಲ್ಲಿಕಾರ್ಜುನದೇವಯ್ಯಾ;
ಕೊಂದಡೆ ಶರಣೆಂಬುದ ಮಾಣೆ

ಕವಿ ಷಡಕ್ಷರದೇವ—

ಒರೆಯೆ ಸುವರ್ಣರೇಖೆಮಿಗೆಬಾರದೊಡಂ ಪೊಸ ಚಿನ್ನದ ಕಂ।
ಡಿರಿಸಿ ದೊಡಿಕ್ಷುಕಾಂಡಮನೆಸೀಯನೆಸದ್ರಸಮುಣ್ಮದಿರ್ದೊಡಂ॥
ಸರಗೊಳಿಸುತ್ತೆ ತಾಳೆಮಣಿಮಾಲಿಕೆಯಂತೆ ಕೊರಲ್ಗೆಕಾಂತಿಯಂ।
ನೆರಪದೊಡಂ ರಸಜ್ಞಸುಮನೋಜ್ಞಮೆಕಾವ್ಯಮದುಂಧರಿತ್ರಿಯೊಳ್॥

ಹೀಗೆ ವಚನಕಾರರಿಗೆ, ವರಕವಿಗಳಿಗೆ ದಾಸಿಮಯ್ಯನವರು ಆದರ್ಶರಾಗಿದ್ದಾರೆ; ಶಿವಶರಣರಲ್ಲಿ ಅಗ್ರಗಣ್ಯರಾಗಿದ್ದಾರೆ; ವಿಶ್ವದ ಮಹಾಪುರುಷರ ಪಂಕ್ತಿಯಲ್ಲಿ ಒಬ್ಬರಾಗಿದ್ದಾರೆ. ದಾಸಿಮಯ್ಯನವರ ವಚನಗಳು ಇಂದು ಕೇವಲ ೧೫೦ ಮಾತ್ರ ದೊರೆತಿವೆ. ದೊರೆತಿರು ವಷ್ಟು ವಚನಗಳಲ್ಲಿಯೇ ವೀರಶೈವ ಷಟ್ಸ್ಥಲ ಸಿದ್ಧಾಂತಸಾರವೇ ಅಡಕವಾಗಿದೆ. ಅವರ ವಚನಗಳಿಂದ ವೀರಶೈವ ಧರ್ಮಸ್ವರೂಪವೇ

ನೆಂಬುದು ಹಳ್ಳಿಯ ಸೋದರರಿಗೂ ಅರ್ಥವಾಗುತ್ತದೆ. ಮುಂದಿನ ಎಲ್ಲಾ ಶರಣರ ವಚನಗಳಿಗೆ ಮಾತೃಸ್ಥಾನದಂತಿರುವ ದಾಸಿಮಯ್ಯನವರ ವಚನಗಳ ಶ್ರೇಷ್ಠತೆಯ ಬಗ್ಗೆ ಮತ್ತು ಅಭೂತಪೂರ್ವವಾದ ಸ್ಥಾನವನ್ನು ಗಳಿಸಿರುವ ಅವರ ವ್ಯಕ್ತಿತ್ವದ ಬಗ್ಗೆ ನಾವು ಹೆಚ್ಚಿಗೆ ವಿಮರ್ಶಿಸಬೇಕಾದ ಆವಶ್ಯಕತೆಯಿಲ್ಲ. **ದಾಸಿಮಯ್ಯನವರು ವಿಶ್ವದ ಧರ್ಮದೀವಿಗೆ. ಸದ್ಯದ ವಚನ ಸಾಹಿತ್ಯದ ಆದ್ಯಪ್ರವರ್ತಕರು.** ಧಾರ್ಮಿಕ ದೃಷ್ಟಿಯಿಂದ ದಾಸಿಮಯ್ಯನವರ ವಚನಗಳನ್ನು ಅವಲೋಕಿಸಿದರೆ, ಅವುಗಳಲ್ಲಿ ಜನತೆಯ ಹಿತಕ್ಕಾಗಿ ಬಾಳುವಂತಹ ವಿಶಾಲ ಭಾವದ ಕಿಂಕುರ್ವಾಣತೆಯಿದೆ. ಸಾಹಿತ್ಯದೃಷ್ಟಿಯಿಂದ ಅವು ಅತ್ಯುತ್ತಮ ಸಾಹಿತ್ಯಕ್ಕೆ ನಿಲುಕುವಂಥವುಗಳಾಗಿವೆ. ಅವರ ವಚನಗಳಲ್ಲಿ ಉಪಮೆಗಳ ಸೊಗಸು, ತತ್ವಜ್ಞಾನದ ಹಿರಿಮೆ-ಅಧ್ಯಾತ್ಮದೃಷ್ಟಿ ಬಹುವಾಗಿ ಬೆಳೆದು ಪೂರ್ಣಫಲವನ್ನಿತ್ತಿದೆ. ಒಟ್ಟಿನಲ್ಲಿ ಅವರ ವಚನಗಳು, ದಾಸಿಮಯ್ಯನವರ ಸಂಸ್ಕೃತಿ ಎಂತಹುದೆಂದು ಅಭಿವ್ಯಕ್ತಗೊಳಿಸಲು ನೆಲೆಮನೆಯಾಗಿವೆ; ವಚನಸಾಹಿತ್ಯದ ಚೈತನ್ಯರೂಪವಾಗಿದೆ. ದಾಸಿಮಯ್ಯನವರು ವಿಶ್ವದ ಚೈತನ್ಯರಸಮೂರ್ತಿಗಳಲ್ಲೊಬ್ಬರು. ಪ್ರತಿಭಾವಂತರು, ವಿಶ್ವಧರ್ಮಸಮನ್ವಯಾಚಾರ್ಯರು; ಷಟ್ಸ್ಥಲ ಬ್ರಹ್ಮಾನುಭಾವಿಗಳು.

ದಾಸಿಮಯ್ಯನವರ ಹೆಚ್ಚಿನ ವಚನಗಳ ಬಗ್ಗೆ ಸಂಶೋಧನೆ ಬೇಗ ನಡೆಯಲಿ; ಅವು ಕನ್ನಡ ಸಾಹಿತ್ಯದ ಚಲುವನ್ನು ಹೆಚ್ಚಿಸಲಿ; ಬಗೆಯನ್ನು ರೂಪಿಸಲಿ. ಎಲ್ಲರ ಬಾಳು ಹಸನಾಗಲಿ:

ಎಂಬುದೇ ನಮ್ಮ ಹಿರಿಯ ಆಶಯ;

ನಲ್ಮೆಯ ಹಾರೈಕೆ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್
ಪ್ರೆಸ್ಸಿನಲ್ಲಿ ಡಿ. ರಾಜರತ್ನಂ ಅವರಿಂದ ಮುದ್ರಿಸಲ್ಪಟ್ಟಿತು.

ನಮ್ಮ ಪ್ರಕಟಣೆಗಳು

College Translation—*by C. Mahadevappa M.A.,*	1—12—0
ಭಾವಚಿಂತಾರತ್ನ—ಶ್ರೀ ಸಿ. ಮಹಾದೇವಪ್ಪ, ಎಂ.ಎ.,	3— 0—0
ಕಾವ್ಯ ಸಮರ್ಥನೆ— ,,	2— 0—0
ಕರ್ಣರಸಾಯನ (ಅಚ್ಚಿನಲ್ಲಿದೆ) ,,	
College Taxonomy ,, *by C. Nataraj B.Sc.,*	
ನೆಚ್ಚಿನಾಚಾರ್ಯರಿಂದೆಚ್ಚೆತ್ತ ಭಾರತ— ಚ. ಸುಂದರೇಶನ್, ಸೋಸಲೆ	
ನಿಶೆಯಿಂದ ಉಷೆಗೆ (ಕಾದಂಬರಿ)—ಎ. ಪಿ. ನರಸಪ್ಪ	
ಹೆಣ್ಣಿನ ಬಾಳು (ಕಾದಂಬರಿ)—ಡಿ. ಅಂಕೇಗೌಡ	1—4—0
ಕಲ್ಪಲತೆ—ಚ. ಸುಂದರೇಶನ್, ಸೋಸಲೆ	0—12—0

ಪುಸ್ತಕಗಳು ದೊರೆಯುವ ಸ್ಥಳ—

ತಾಂಡವಮೂರ್ತಿ ಪ್ರಕಾಶನಾಲಯ,
542, ಮಂಡಿ ಮೊಹಲ್ಲಾ,
ಮೈಸೂರು.